ಪಡುವುದಿಲ್ಲವೆಂದು ಆ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಲು ಸಾಧ್ಯವಿದೆಯೇ?

Mr. SPEAKER.—I disallow.

ಶ್ರೀ ಎಸ್. ಗೋಪಾಲಗೌಡ.—'ಅಡ್ವರ್‌ಟೈಜ್‌ಮೆಂಟನ್ನು ಕೊಡುವುದಕ್ಕೆ ಲಯರ್ ಇಷ್ಟಪಟ್ಟರೂ, ಹೌಲಿಂಗ್ ಜಕಾಲ್ಸ್ ಇಷ್ಟಪಡುವುದಿಲ್ಲವೆಂದು ಸರ್ಕಾರದವರು ಆ ಬ್ಲಿಟ್ಸ್ ಪತ್ರಿಕೆ ಸಂಪಾದಕರಾದ ಶ್ರೀ ಕರಂಜಿಯಾರವರಿಗೆ ಒಂದು ಪತ್ರ ಬರೆಯಲು ಸಾಧ್ಯವಿದೆಯೇ?

Sri N. C. NAGAIAH REDDY.—Is it a fact that he is a barking dog going about the streets of Bombay scavanging the gutters?

Mr. SPEAKER.—I don't allow such questions. Sri Gopala Gowda may repeat his question.

ಶ್ರೀ ಎಸ್. ಗೋಪಾಲಗೌಡ.—ಲಯರ್ ಇಷ್ಟಪಟ್ಟರೂ, ಹೌಲಿಂಗ್ ಜಕಾಲ್ಸ್ ತಮ್ಮ ಪತ್ರಿಕೆಗೆ ಹಾಗೆ ಅಡ್ವರ್‌ಟೈಜ್‌ಮೆಂಟ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಆ ಶ್ರೀ ಕರಂಜಿಯಾರವರಿಗೆ ತಿಳಿಸುವುದಕ್ಕೆ ಸಾಧ್ಯವೇ?

Sri A. G. RAMACHANDRA RAO.—That will be considered.

Mr. SPEAKER.—Question No. 297 by Sri Bheemappa Naik which is posted for today will be taken up tomorrow.

QUESTION FOR ANSWER ON THE DAY

(But not taken up)

Q.—93. **Sri B. RACHIAH** (Yelandur—Scheduled Castes).—

Will the Government be pleased to state:—

(*a*) the number of depressed class Government servants in different departments of the State who have been retrenched subsequent to March 1953;

(*b*) whether instructions have been issued to the Heads of Departments not to retrench depressed class Government servants as per the directive of the Central Government;

(*c*) whether the posts of the Regional Officers and Special Revenue Inspectors have been abolished;

(*d*) how the work is adjusted;

(*e*) how many retrenched officials are either reinstated or re-employed?

A.—**Sri K. HANUMANTHAIYA** (Chief Minister).—

(*a*) 33.

(*b*) Yes.

(*c*) These were abolished last year. Orders have been issued directing a gradual reduction in the number of Special Revenue Inspectors without any incumbants being thrown out of employment.

(*d*) The work is carried on by the number that remain. There will be one Special Revenue Inspector for each Revenue Sub-Division.

(*e*) Re-employed—19.

PRIVILEGES COMMITTEE

Members announced.

Mr. SPEAKER.—The Chair desires to announce that in connection with the Election to the Committee of Privileges as the number of candidates is equal to the number to be elected the following candidates are declared elected and there will be no election today.

Sriyuts:—

1 B. Rachiah
2 B. Y. Neele Gowda
3 T. Mariappa
4 B. T. Kemparaj

Under sub-rule (2) of rule 171 of the Rules of Procedure and Conduct of Business in the Mysore Legislative Assembly, I nominate the following three members to the Committee.

Sriyuts:—

1 M. V. Rama Rao
2 M. Rajasekhara Murthy
3 K. Pattabhiraman

Under sub-rule (3) of rule 171 of the Rules, I appoint Sri T. Mariappa to be the Chairman of the Committee.

DEBATE ON THE EDUCATIONAL REFORMS.

Mr. SPEAKER.—Now, discussion on the Report of the Committee of Educational Reforms in Mysore.

***Sri J. MOHAMED IMAM** (Jagalur).—Before taking up the discussion I seek some clarification from the Minister for Education. The other day the

---

* Asterisk indicates that the speeches have not been revised by the Member concerned.

(Sri J. MOHAMED IMAM).

Minister for Education was not present and I suggested that the discussion may be postponed till he returns. Now, I want one or two clarifications from him so that there may not be repetition. I learn that the All-India Secondary Education Commission which has been set up by the Government of India is likely to publish its report very soon, in 3 or 4 days. That report has to be considered by the State Governments and most probably we will be asked to implement many of their recommendations. So, we have to consider our own report in the light of what has been suggested by the All-India Secondary Education Commission. Is it not better, Sir, that we postpone the discussion on our report till we know exactly what are the recommendations of the All-India Secondary Educations Commission's report and consider these two reports simultaneously so that we may be sure of our grounds and we may know which portion of the recommendations should be implemented? If there is a clash between the recommendations of the report of the Commission and the report of the Reforms Committee, it may be too late to reconcile, and we will be in trouble. Let us wait till we receive that report and then come to a final conclusion.

My second suggestion is this. On the first day alone I asked the Government if they have made up their mind as to what portion of the recommendation should be implemented and what are their resources. Government must let this House know if they have made up their mind. But, Government was not able to give us a definite reply. They simply wanted our reply. I submit, we are wandering in a big jungle as it were. The report is a very big report and it is comprehensive enough. It is so comprehensive that we are lost in the midst. As I have stated in my dissenting note, it involves huge financial implication. So it would be desirable for the Government to scrutinise this report and place before this House as to exactly what are the recommendations of the Committee that they are going to implement and its financial implication. For example, the primary education. They may place before this House as to what portion of the recommendations they are going to implement and the financial implication for that. So, Government may appoint a small committee and pick up such of the recommendations as they are capable of implementing and place the specific proposals before the House. No doubt the Report is very comprehensive and the committee has taken a good deal of trouble. But, I want to know the limitations of the Government. Supposing, we approve this report at once. Are Government going to implement all the recommendations of the report ? So, Government may appoint a small committee of Experts in their own intrest and let them pick up such of the recommendations of the Committee which are capable and practicable of being implemented taking the present financial position into consideration. So, personally I feel that a discussion at this stage on this report will be a waste of time and we may discuss this report and also the report of the Secondary Education Commission together. So, in view of this and to save time and to be more practical, I have made this suggestion. Otherwise, if they ask me to discuss, I will take two days.

Sri A. G. RAMACHANDRA RAO (Minister for Law and Education).—I do not know, Sir, whether the Leader of the Opposition was present when I opened this discussion.

Sri J. MOHAMED IMAM.—I was present.

Sri A. G. RAMACHANDRA RAO.—Then, I wish to recall to his mind and also to the minds of the Members of this House that I said categorically that Government had not come to any decision and that advisedly because they wanted to know the views of the public, which they are getting, and certainly the views of this House and the Legislative Council. It is only on that, that the Government can form an opinion. Further, I have also said, Sir, that the publication of the Report of the Secondary Education Commission of the Centre should also be taken into consideration. I said that I have not received any information from Delhi as to when it would be published. Yet, I have some unofficial information to say

that the report is going to be published somewhere about the middle of this month. What procedure they will adopt, what directions or instructions they will give from the Centre, I do not know. So, it is rather premature to say as to the lines on which we should take up the question. But, at the same time the consideration of the report is very relevant and also important; that I concede. Therefore, the discussion of this House would mean at present, eliciting the opinion of the Hon'ble Members so that both the House as well as the Government may guide themselves properly. My suggestion is, we may continue to elicit the opinion of Members today and tomorrow and adjourn again to a proper day when we can consider the Secondary Education Commission's report. When that report comes we will know on what lines we will have to proceed. I think, Sir, this procedure will serve the purpose very efficiently.

About the financial aspect, unless we decide what reform we are going to introduce it is difficult to say about that. We have, in my opinion, got to decide the crucial points which are before us, that is the change that we are going to effect in the present system, then envisage the immediate cost that would involve. Unless we take a decision as to what would be the reform, it is not possible to know the exact expenditure but only a rough expenditure as has been indicated. It is a very rough estimate. When we decide that these are the reforms that are necessary and that are urgent, then all this aspect of the question will come and we will have to call for a proper estimate and then consider. Till then, in the nature of things, it would be a very rough estimate. That is all that I could say at present.

MR. SPEAKER.—Can we fix some time-limit for each speaker ?

SRI S. SRINIVASA IYENGAR (T. Narasipur).—It will be difficult to fix a time-limit, because the report is vast.

SRI J. MOHAMED IMAM.—We can extend the time for discussion of this report.

MR. SPEAKER.—But you have given your consent that discussion on the report must be over by today.

SRI J. MOHAMED IMAM.—Today it is insufficient. This is a huge report and every Member is expected to give his opinion right up from pre-primary education to college education.

MR. SPEAKER.—Of course, as the Leader of the Opposition, the Hon'ble Member will be shown some concession.

SRI J. MOHAMED IMAM.—I am thankful to you, Sir. But I am looking to the interests of others.

A MEMBER.—I do not think he has a right to speak on this report, because he has said his say already in the committee for a number of days

SRI A. G. RAMACHANDRA RAO.—I think that many members have already spoken on this report.

SRI J. MOHAMED IMAM.—Only for one hour and a half the subject was discussed on the last occasion.

SRI A. G. RAMACHANDRA RAO.—In order that the Government may have as many views as possible, a time-limit may be placed so that many Members may speak.

A MEMBER.—Today that will not be enough. Probably the discussion may have to continue at the next session in November or so.

SRI K. HANUMANTHAIYA (Leader of the House).—There is no November Session.

A MEMBER.—October ?

SRI K. HANUMANTHAIYA.—No.

MR. SPEAKER.—What shall we do with regard to fixing a time-limit ? Of course, the Hon'ble the Leader of the Opposition comes under exception.

SRI J. MOHAMED IMAM.—Sir, I have to draw the attention of the Hon'ble the Chief Minister to another fact. In this morning's papers we read that some Andhra leaders are putting up strenuous efforts to revise the decision already arrived at by the Government of India in respect of Bellary. I think many Andhra leaders are in Delhi and have been urging on the Prime Minister to......

MR. SPEAKER.—But this is not the subject under discussion.

Sri J. MOHAMED IMAM.—I want to make a short statement only. Tomorrow the question of Bellary may be re-opened in which case further complications will arise. So I want to ascertain from the Hon'ble the Chief Minister whether he has taken sufficient precautions in this regard. Supposing there is the re-opening of the question in the Parliament without consulting the Mysore Legislature, what will be the repercussions ? So I want to bring it to the notice of the Chief Minister so that he may be on his guard and guard the interests of Mysore.

***Sri K. HANUMANTHAIYA.**–I have also seen a report in the 'Indian Express' that the Prime Minister is likely to make a statement on re-opening the question of Bellary. After all it is newspaper report and we cannot take it as emanating officially from Prime Minister's office. Anyway I am thankful to the Hon'ble Leader of the Opposition that he has raised the question. I have written to the Prime Minister already that this question should not be reopened and I have brought to his notice the resolutions adopted by this House as well as by the Upper House. I have even requested him that, if it is necessary, the representatives of the Mysore Government may go and see him personally both in regard to Bellary and the Thungabhadra Project. I am awaiting his reply.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಲಾ ಮಿನಿಷ್ಟರ್ರವರು ಹೇಳಿದಹಾಗೆ ಇನ್ನೊಂದುಸಾರಿ ಇಂಡಿಯಾ ಸರ್ಕಾರದವರಿಂದ ತಯಾರಾಗುವ ಸೆಕೆಂಡರಿ ಎಜ್ಯುಕೇಷನ್ ವರದಿಯು ಚರ್ಚೆಗೆ ಬರುವುದಾಗಿದ್ದರೆ ಈಗ ಏಕೆ ಈ ವಿಚಾರವನ್ನು ಚರ್ಚಿಸಲು ಇನ್ನೂ ಎರಡು ದಿವಸಗಳು ಬೇಕು ?

Sri K. HANUMANTHAIYA.—I agree with Sri V. Venkatappa. There is no point in discussing this problem of and on without any reference to previous discussion. Whatever may be discussed, this discussion has to end in this session. Of course if the House wants one more day for discussion on the report, I have no objection to giving one more day. But there is no question of having another sitting for the purpose of discussing this report. If my Hon'ble collegue has made a statement to that effect, it must be modified to what I have stated. After all the report is before the House and the House as per the motion moved already is expected to consider the proposals made therein. That a subsequent report will come and therefore discussion must be postponed because of that reason, will not stand to reason.

*ಶ್ರೀ ಟಿ. ಮರಿಯಪ್ಪ (ಮೈಸೂರು ಸಿಟಿ-ಉತ್ತರ).—ಅಧ್ಯಕ್ಷರೇ, ಶ್ರೀ ಮಹಮ್ಮದ್ ಇಮಾಂರವರ ಪ್ರಶ್ನೆಗೆ ಶ್ರೀ ಎ. ಜಿ. ರಾಮಚಂದ್ರರಾಯರು ಇತ್ತ ಜವಾಬು ಕೇಳಿ, ಪ್ರಾಯಶಃ ಇನ್ನೊಂದು ಬಾರಿ ಈ ವಿದ್ಯಾಭ್ಯಾಸ ಸುಧಾರಣೆಯ ವಿಚಾರ ಚರ್ಚೆಗೆ ಬರಬಹುದು. ಅದರಲ್ಲಿಯೂ ಕೇಂದ್ರ ಸರ್ಕಾರದ ಸೆಕೆಂಡೆರಿ ವಿದ್ಯಾಭ್ಯಾಸ ಸಮಿತಿಯವರ ವರದಿ ಬಂದಮೇಲೆ ಇದನ್ನು ಚರ್ಚಿಸಲು ಅವಕಾಶ ವಿದೆಯೆಂದು ತಿಳಿದಿದ್ದೆ. ಆದರೆ ಸಭಾನಾಯಕರು ಈಗತಾನೇ ಇತ್ತ ವಿವರಣೆಯಿಂದ ಈ ಅಂಶ ಸ್ಪಷ್ಟಪಟ್ಟಿದೆ. ಆ ಸೆಕೆಂಡರಿ ವಿದ್ಯಾಭ್ಯಾಸ ಸಮಿತಿಯವರ ವರದಿ ಬಂದಮೇಲೆ ಇನ್ನೊಂದು ಸಾರಿ ಇದರ ಮೇಲೆ ಚರ್ಚೆಗೆ ಅವಕಾಶವಾಗುವುದು ಕಷ್ಟವೆಂಬುದು ಅವರ ವಿವರಣೆಯಿಂದ ವ್ಯಕ್ತಪಟ್ಟಿದೆ.

ಇನ್ನು ಈ ಸಭೆಯ ಮುಂದೆ ಇರತಕ್ಕ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ವರದಿಯ ಮೇಲೆ ಮಾನ್ಯ ಸದಸ್ಯರು ಅವರ ಸಲಹೆಗಳನ್ನು ಕೊಡಬೇಕಾಗಿದೆ. ಈ ವರದಿಯಲ್ಲಿ ಅನೇಕ ಅಂಶಗಳು ಅಡಗಿವೆ. ಇವುಗಳ ಪೈಕಿ ಯಾವ್ಯಾವ ಭಾಗವನ್ನು ಸರ್ಕಾರದವರು ಜಾರಿಗೆ ಕೊಡಬೇಕೆಂದು ಮನಸ್ಸುಮಾಡಿರುತ್ತಾರೆ ಮತ್ತು ಇದಕ್ಕೆಲ್ಲಾ ಹಣಕಾಸಿನ ಸೌಲಭ್ಯ ಎಷ್ಟರಮಟ್ಟಿಗೆ ದೊರೆಯಬಹುದು ಎಂಬುದನ್ನೂ ಮಾನ್ಯ ಸಚಿವರು ತಿಳಿಸಿದ್ದರೆ ಚರ್ಚೆಗೆ ಬಹಳ ಸಹಾಯಕವಾಗುತ್ತಿತ್ತು ಎಂದು ಈಗಾಗಲೇ ಶ್ರೀ ಮಹಮದ್ ಇಮಾಂರವರು ಹೇಳಿರುತ್ತಾರೆ.

ಈ ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲು ಮಟ್ಟದಲ್ಲಿ ಈಗಿರತಕ್ಕ ಅವಧಿಯನ್ನು ಬದಲಾಯಿಸುವುದು ಸೂಕ್ತವಾದುದಲ್ಲವೆಂದು ನನ್ನ ಅಭಿಪ್ರಾಯ. ಈಗ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ಜಾರಿಗೆ ತರಬೇಕೆಂದು ಮಾಡಿರತಕ್ಕಂಥ ಸಲಹೆಗಳನ್ನು ನೋಡಿದರೆ ಅದಕ್ಕೆ ಆಗತಕ್ಕಂಥ ಖರ್ಚು ಬಹಳ ಅಗಾಧವಾದುದು, ಪ್ರಾಯಶಃ ಮೈಸೂರು ದೇಶದ ಹಣಕಾಸಿನ ಈಗಿನ ಪರಿಸ್ಥಿತಿಯಲ್ಲಿ ಅದನ್ನು ಒದಗಿಸುವುದು ಕಷ್ಟವಾಗುತ್ತದೆಂದು ನನಗೆ ಭಾಸವಾಗುತ್ತದೆ. ಮೊದಲನೆಯ ವರ್ಷ ಸುಮಾರು 166 ಲಕ್ಷ ರೂಪಾಯಿಗಳಷ್ಟು ಖರ್ಚಾಗಬಹುದು. ಹತ್ತನೆಯ ವರ್ಷಕ್ಕೆ ಸುಮಾರು ಆರು ಕೋಟಿ ರೂಪಾಯಿಗಳವರೆಗೆ ಆಗುತ್ತದೆಂದು ಸುಧಾರಣಾ ಸಮಿತಿಯವರು ಸೂಚಿಸಿರುತ್ತಾರೆ. ಇನ್ನೊಂದು ಅಂಶವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಪ್ಲಾನಿಂಗ್ ಕಮಿಷನ್ ವರದಿಯ ಪ್ರಕಾರ ವಿದ್ಯಾಭ್ಯಾಸಕ್ಕೆ ಮೈಸೂರು ದೇಶದಲ್ಲಿ ಸುಮಾರು 226 ಲಕ್ಷ ರೂಪಾಯಿಗಳಷ್ಟು ಐದು ವರ್ಷದ ಅವಧಿಯಲ್ಲಿ ಖರ್ಚುಮಾಡುವುದು ಸಾಧ್ಯ. ಈ ಪ್ಲಾನಿಂಗ್ ಕಮಿಷನ್ ನಿರ್ಧರಿಸಿರಕ್ಕ ಹಣವನ್ನು ಹೆಚ್ಚಿಸದೆ ಇದ್ದರೆ ಸುಧಾರಣೆ ಜಾರಿಗೆ ತರುವುದು ಕಷ್ಟವಾಗುತ್ತದೆಂದು ಸೂಚಿಸುತ್ತೇನೆ. ಈ ಪರಿಮಿತಿಯಲ್ಲಿ ಕೆಲಸ ಮಾಡಬೇಕಾದರೆ ವಿದ್ಯಾ ಸುಧಾರಣಾ ಸಮಿತಿಯವರು ಶಿಫಾರ್ಸುಮಾಡಿರತಕ್ಕಂಥ ಕೆಲವು ಭಾಗವನ್ನು ಮಾತ್ರ ಜಾರಿಗೆ ಕೊಡುವುದು ಸಾಧ್ಯ

ವಾಗುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡ ಈ ಸುಧಾರಣೆಯನ್ನು ವಿಮರ್ಶೆಮಾಡಬೇಕಾಗುತ್ತದೆ ಹೀಗೆ ವಿಮರ್ಶಿಸುವಾಗ ಒಂದು ವಿಚಾರವನ್ನು ಸ್ಪಷ್ಟಪಡಿಸುತ್ತೇನೆ. ಡಾಕ್ಟರ್ ಸಿ. ಆರ್. ರೆಡ್ಡಿಯವರು ಹೇಳಿರುವ ಪ್ರಕಾರ ಈ ಅವಧಿ ಅಥವಾ pattern ಯಾವುದು ಇದೆಯೋ ಅದನ್ನು ಬದಲಾಯಿಸಬೇಕಾದ ಅಗತ್ಯ ಇಲ್ಲವೇ ಇಲ್ಲ. ಅನೇಕ ವರ್ಷಗಳಿಂದ ಮೈಸೂರು ದೇಶದ ಜನತೆಗೆ ಹೊಂದಿಕೊಂಡು ಹೋಗತಕ್ಕಂಥ ವಿದ್ಯಾಭ್ಯಾಸ ಕ್ರಮವನ್ನೇ ಬಲಪಡಿಸಿಕೊಂಡು ಹೋಗುವುದು ಸೂಕ್ತವಾದ ಮತ್ತು ಪ್ರಗತಿದಾಯಕವಾದ ಮಾರ್ಗವೆಂದು ಕೆಲವು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮುಖ್ಯವಾಗಿ ದೇಶದ ಹಣಕಾಸಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಅದಕ್ಕನುಗುಣವಾದ, ಅತ್ಯಗತ್ಯವಾದ ಸುಧಾರಣೆಗಳನ್ನು ಮಾತ್ರ ಜಾರಿಗೆ ತಂದು ಈಗಿರತಕ್ಕಂಥ pattern ಬದಲಾಯಿಸದೆ ಮುಂದುವರಿದುದೇ ಆದರೆ ವಿದ್ಯಾ ಸುಧಾರಣೆಯ ಉದ್ದೇಶವನ್ನು ಬಹುಮಟ್ಟಿಗೆ ಸಾಧಿಸಿದಂತಾಗುವುದು. ಈ ದೃಷ್ಟಿಯಿಂದ ನಮ್ಮ ಮುಂದಿರುವ ಈ ವಿದ್ಯಾ ಸುಧಾರಣೆಯಲ್ಲಿ ಅತ್ಯಗತ್ಯವಾಗಿ ಆಗಬೇಕಾಗಿರುವ ಅಂಶಗಳ್ಯಾವುವು ಎಂಬುದನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸುತ್ತೇನೆ. ಈಗ ನಮಗೆ ಪ್ರತಿ ವರ್ಷವೂ ತರಪೇತಾದ ಎಷ್ಟು ಮಂದಿ ಉಪಾಧ್ಯಾಯರು ಬೇಕೋ ಅಷ್ಟು ಮಂದಿ ಈಗ ಇಲ್ಲದಿರುವುದು ಈ ವಿದ್ಯಾ ಪ್ರಗತಿಗೆ ಒಂದು ಅಡಚಣೆ. ಸಾಕಷ್ಟು ಮಂದಿ ತರಪೇತಾದ ಉಪಾಧ್ಯಾಯರು ಬೇಕಾಗಿದ್ದಾರೆ.

1-30 P.M.

ಶೇಕಡ 75ರಷ್ಟು ಉಪಾಧ್ಯಾಯರು ಈಗ ತರಪೇತು ಆಗಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಮಾಧ್ಯಮಿಕ ಶಾಲೆಯಲ್ಲಿ ಶೇಕಡ 58ರಷ್ಟು ತರಪೇತಾಗಿಲ್ಲ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿರತಕ್ಕ ಉಪಾಧ್ಯಾಯರನ್ನು ಆದಷ್ಟು ಬೇಗನೆ ತರಪೇತು ಮಾಡತಕ್ಕದ್ದು ಅವಶ್ಯಕ. ಇದೇ ರೀತಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸ್ ಮಾಡಿರತಕ್ಕ ಉಪಾಧ್ಯಾಯರನ್ನು ಹೆಚ್ಚಾಗಿ ತೆಗೆದುಕೊಳ್ಳತಕ್ಕದ್ದು, ಮಹಿಳೆಯರನ್ನು ಹೆಚ್ಚಾಗಿ ಪ್ರಾಥಮಿಕ ಶಾಲೆಗಳಿಗೆ ನಿಯಮಿಸತಕ್ಕದ್ದು ಮತ್ತು ಎಲ್ಲಾ ಪಾಠಶಾಲೆಗಳಿಗೂ ಅವರಿಗೆ ಆವಶ್ಯಕತೆಗೆ ತಕ್ಕಂಥ ಅಥವಾ ಬೇಕಾದಂಥ ಎಕ್ವಿಪ್‌ಮೆಂಟ್ ಒದಗಿಸತಕ್ಕದ್ದು ಮತ್ತು ಎಲ್ಲೆಲ್ಲಿ ತರಬಿಯತ್ತಾದ ಉಪಾಧ್ಯಾಯರುಗಳು ಇದ್ದಾರೋ ಮತ್ತು ಸೌಲಭ್ಯಗಳು ಇವೆಯೋ ಅಲ್ಲೆಲ್ಲಾ ವೊಕೇಷನಲ್ ಪಾಠಪ್ರವಚನಗಳಿಗೆ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು, ಇಷ್ಟನ್ನು ಪ್ರಾಯಶಃ ಮುಂದಿನ ವರ್ಷದಿಂದ ಪ್ರಾರಂಭಿಸುವುದಕ್ಕೆ ಅನುಕೂಲ ಮಾಡಿಕೊಂಡರೆ ಒಂದು ಸಾಹಸದ ಕೆಲಸ ಸಾಧಿಸಿದ ಹಾಗೆಯೇ ಸರಿ. ಪ್ರಾಯಶಃ ನಮ್ಮಲ್ಲಿರತಕ್ಕ ಎಲ್ಲಾ ಸೌಲಭ್ಯಗಳನ್ನು ಇದಕ್ಕೆ ವಿನಿಯೋಗಿಸಿದರೂ ಕೂಡ ಇಷ್ಟನ್ನು ನೆರವೇರಿಸಬೇಕಾದರೆ ಕಷ್ಟವಾಗುತ್ತದೆ. ಇದರ ಜೊತೆಗೆ, ನಿನ್ನೆ ದಿವಸ ಪ್ರಸ್ತಾಪಮಾಡಿದ ಹಾಗೆ, ಇನ್ನು 5,000 ಹೊಸ ಪಾಠಶಾಲೆಗಳನ್ನು ಕೊಡಬೇಕಾಗಿದೆ. ವರ್ಷಕ್ಕೆ 500ರಂತೆ ಆದರೆ 10 ವರ್ಷಕ್ಕೆ 5,000 ಪಾಠಶಾಲೆಗಳನ್ನು ಕೊಡಬಹುದು. ಅದಕ್ಕೆ ಹೆಚ್ಚು ದುಡ್ಡಿನ ಸೌಲಭ್ಯ ಬೇಕು. ಇಷ್ಟು ಮತ್ತು ವ್ಯಾಸಂಗ ಮಾಡತಕ್ಕ ರೀತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿದರೆ ನಮ್ಮ ಗುರಿ ಮುಟ್ಟುವುದಕ್ಕೆ ಸಾಧ್ಯ ಎಂದು ಹೇಳಿ ನಾನು ಸೂಚಿಸುತ್ತೇನೆ.

ಎರಡನೆಯದಾಗಿ 4 ವರ್ಷ ಪ್ರಾಥಮಿಕ, 4 ವರ್ಷ ಮಾಧ್ಯಮಿಕ ಅಥವಾ 5 ವರ್ಷ ಪ್ರಾಥಮಿಕ, 4 ವರ್ಷ ಮಾಧ್ಯಮಿಕ ವಿದ್ಯಾಭ್ಯಾಸ ಮುಗಿದಮೇಲೆ, ಈಗಿರತಕ್ಕ ಇಂಡಸ್ಟ್ರಿಯಲ್ ಸ್ಕೂಲುಗಳನ್ನು ಪುನರ್‌ವ್ಯವಸ್ಥೆ ಮಾಡಿ ಮಾಧ್ಯಮಿಕ ಪಾಠಶಾಲೆ ಪರೀಕ್ಷೆ ಇರಲಿ ಇಲ್ಲದೆ ಹೋಗಲಿ-ಆ ವಿದ್ಯಾಭ್ಯಾಸ ಪೂರ್ತಿಯಾದಮೇಲೆ ಅವರು ಟೆಕ್ನಿಕಲ್ ಶಾಲೆಗಳಲ್ಲಿ ವ್ಯಾಸಂಗಮಾಡತಕ್ಕ ಏರ್ಪಾಡನ್ನು ಪ್ರಾಯಶಃ ಪ್ರಾರಂಭದಲ್ಲಿ ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಾದರೂ ಮಾಡಿ ಅನಂತರ ತಾಲ್ಲೂಕುಗಳಲ್ಲಿ ಆ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುವುದು ಸೂಕ್ತವಾಗಿದೆ, ಮತ್ತು ಅಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ಸ್‌ನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸುವುದು ಎರಡನೆಯ ಕೆಲಸ. ಈ ಎರಡು ಕೆಲಸಗಳಲ್ಲಿ ನಾವು ಕೈಹಾಕಿದರೆ ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿರತಕ್ಕ ಅನೇಕ ಲೋಪದೋಷಗಳನ್ನು ಸರಿಪಡಿಸಿದ ಹಾಗಾಗುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ನಾನು ಸಭೆಯ ಮುಂದಿಡಬೇಕೆಂದಿದ್ದೇನೆ. ಅದನ್ನು ಡಾಕ್ಟರ್ ರೆಡ್ಡಿಯವರು ಮತ್ತು ಶ್ರೀ ಕೋದಂಡರಾಯರು ಪರಿಶೀಲನೆ ಮಾಡಿದ್ದಾರೆ. ಈ ವಿದ್ಯಾಭ್ಯಾಸದ ಪದ್ಧತಿಯಲ್ಲಿಯೇ ಲೋಪದೋಷಗಳಿವೆ ಎಂದು ಹೇಳತಕ್ಕವರು ಇಂಡಿಯಾ ದೇಶದವರು ಒಬ್ಬರೇ ಅಲ್ಲ, ಪಾಶ್ಚಿಮಾತ್ಯ ದೇಶಗಳಲ್ಲೂ ಹೀಗೆಯೇ ಹೇಳುತ್ತಾ ಇದ್ದಾರೆ, ಅದರಲ್ಲೂ ಬಹಳ ಮುಂದುವರಿದಿರತಕ್ಕ ಇಂಗ್ಲೆಂಡಿನಲ್ಲೂ ಹೀಗೆಯೇ ಹೇಳಿದ್ದಾರೆ, ಅದನ್ನು ಸರಿಪಡಿಸುವುದಕ್ಕೆ multilateral schools ಪ್ರಾರಂಭಮಾಡಿದ್ದಾರೆ— ಎಂದು ಅವರು ತಿಳಿಸಿದ್ದಾರೆ. ಎಂದರೆ ಒಂದು ಪಾಠಶಾಲೆಯಲ್ಲಿ ಅನೇಕ ವಿಧವಾದಂಥ ಕೋರ್ಸ್ ಇರತಕ್ಕ ಒಂದು ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ಜಾರಿಗೆ ತರುವುದು ಬಹಳ ಅವಶ್ಯಕವಾಗಿದೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ; ಅದನ್ನೇ ಶ್ರೀ ಕೋದಂಡರಾಯರು ಕೂಡ ಸಂಕ್ಷೇಪವಾಗಿ ವಿವರಿಸಿದ್ದಾರೆ. ಅದನ್ನು ಪ್ರಯೋಗಿಕವಾಗಿಯಾದರೂ ಮೈಸೂರು ದೇಶದಲ್ಲಿ ಪ್ರಾರಂಭಮಾಡಬಹುದು. ಹಾಗೆ ಮಾಡತಕ್ಕದ್ದು ಸೂಕ್ತ ಎಂದು ನನ್ನ ಭಾವನೆ.

ಇನ್ನು ವಿಶ್ವವಿದ್ಯಾಲಯದ ವಿಚಾರ ಸ್ವಲ್ಪ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನಮ್ಮ ದೇಶದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯ ಮುಖ್ಯವಾದಂಥ ಒಂದು ಉದ್ದೇಶ ಎಂದರೆ ಇದು ಸ್ಟೇಟ್ ಯೂನಿವರ್ಸಿಟಿ ಆಗಿರಬೇಕು ಮತ್ತು ಟೀಚಿಂಗ್ ಯೂನಿವರ್ಸಿಟಿ ಆಗಿರಬೇಕು ಎಂದು ಹೇಳಿ :

Mysore University was organised as a teaching university and as an improvement over the then affiliating University of Madras.

ಆ ಒಂದು ಉದ್ದೇಶ ಈಗ ನೆರವೇರುತ್ತಾ ಇದೆಯೇ? ಆ ಉದ್ದೇಶದ ಕಡೆಗೆ ಎಷ್ಟು ದೂರ ಸರಿಯುತ್ತಾ ಇದ್ದೇವೆ ಎಂಬುದು ಈ ಸಂದರ್ಭದಲ್ಲಿ ಆಲೋಚನೆ ಮಾಡಬೇಕು, ಈಗ ಯೂನಿವರ್ಸಿಟಿ ಹತೋಟಿಯಲ್ಲಿರತಕ್ಕ ಇಂಟರ್ ಮೀಡಿಯಟ್ ಕಾಲೇಜನ್ನು ಬೇರ್ಪಡಿಸುವುದರಿಂದ ಆ ಉದ್ದೇಶಕ್ಕೆ ಇನ್ನು ದೂರ ಸರಿಯುತ್ತಿದ್ದೇವೆ. ನನ್ನ ಮತ್ತು ಇತರ ಅನೇಕ ಮಹನೀಯರ ಭಾವನೆಯಲ್ಲಿ ಇಂಟರ್‌ಮೀಡಿಯಟ್ ಕಾಲೇಜನ್ನು ಯೂನಿವರ್ಸಿಟಿ ಹತೋಟಿಯಿಂದ ತಪ್ಪಿಸುವುದು ಸಾಧುವಾದುದಲ್ಲ ಎಂದು ಹೇಳಿ ನಾನಾ ದೃಷ್ಟಿಯಿಂದ ಹೇಳಬೇಕಾಗಿದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲು ವಿದ್ಯಾಭ್ಯಾಸವನ್ನು

(ಶ್ರೀ ಟಿ. ಮರಿಯಪ್ಪ.)

ಡೈರೆಕ್ಟರವರ ಹತೋಟಿಯಲ್ಲಿಟ್ಟುಕೊಂಡು ಅದರ ಜೊತೆಗೆ - ಇಲ್ಲಿ ಆಗಬೇಕಾದ ಎಲ್ಲಾ ಬದಲಾವಣೆಗಳನ್ನೂ, ಮಾರ್ಪಾಡುಗಳನ್ನೂ ಮತ್ತು ಪುನರ್ ವ್ಯವಸ್ಥೆಯನ್ನೂ ಜಾರಿಗೆ ತರತಕ್ಕದ್ದು ಅಗಾಧವಾದ ಕೆಲಸ. ಇದಕ್ಕೆ ನಮ್ಮ ಸಂಪೂರ್ಣ ಕಾಲ ಮತ್ತು ನಮ್ಮ ಎಲ್ಲಾ resources ಉಪಯೋಗಿಸಬೇಕಾಗಿದೆ. ಇಂಥ ಸನ್ನಿವೇಶದಲ್ಲಿ ಇಂಟರ್‌ಮೀಡಿಯಟ್ ಕಾಲೇಜನ್ನು ಕೂಡ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರ್ ಅವರಿಗೆ ವಹಿಸತಕ್ಕದ್ದು ಅಷ್ಟು ಬುದ್ಧಿವಂತಿಕೆಯಲ್ಲ ಎಂದು ಹೇಳಿ ನಾನು ಸೂಚಿಸುತ್ತೇನೆ. ಯೂನಿವರ್ಸಿಟಿಯ ಹತೋಟಿಯಲ್ಲಿಡತಕ್ಕದ್ದು ಬಹಳ ಮುಖ್ಯ ಎಂಬುದನ್ನು ಕೂಡ ನಾನು ಒತ್ತಿ ಹೇಳಬೇಕಾಗಿದೆ. ಅದಕ್ಕೆ ಒಂದೆರಡು ಮೂರು ಕಾರಣಗಳನ್ನು ತಿಳಿಸಬೇಕಾದರೆ ಈ ಹೈಸ್ಕೂಲು ಮತ್ತು ಇಂಟರ್ ಮೀಡಿಯಟ್ ಕಾಲೇಜುಗಳಿಗೆ ಹೊಸ ಸಂಬಂಧವನ್ನು ನಾವು ಕಲ್ಪಿಸಿ Board of High School and Intermediate Education ಎಂದು ಸ್ಥಾಪನೆ ಮಾಡಿ ಅದು ಸರಿಹೊಂದಿಕೊಳ್ಳಬೇಕಾದರೆ ಅನೇಕ ಕಾಲ ಹಿಡಿಯುತ್ತದೆ. ಅದಕ್ಕೆ ಬದಲಾಗಿ ಈಗ ಇಂಟರ್‌ಮೀಡಿಯಟ್ ಕಾಲೇಜು ಯೂನಿವರ್ಸಿಟಿಗೆ ಹೊಂದಿಕೊಂಡು ಹೋಗುತ್ತಾ ಇದೆ, academic atmosphere ಇದೆ, ಯಾರು ಯೂನಿವರ್ಸಿಟಿಗೆ ಲಾಯಕ್ಕಾಗಿರುತ್ತಾರೆ ಎಂಬ ಅಂಶವನ್ನು ಚೆನ್ನಾಗಿ ಪರೀಕ್ಷೆ ಮಾಡುವುದಕ್ಕೆ ಅನುಕೂಲಗಳು ಇವೆ. ಈ ದೃಷ್ಟಿಯಿಂದ ಇಂಟರ್ ಮೀಡಿಯಟ್ ಕಾಲೇಜನ್ನು ಯೂನಿವರ್ಸಿಟಿಯಲ್ಲಿಟ್ಟುಕೊಂಡಿರುವುದು ಬಹಳ ಸೂಕ್ತ ಎಂದು ಹೇಳಿ ನಾನು ಹೇಳುತ್ತೇನೆ.

ಪ್ರಾರಂಭ ಮಾಡಿದ ಮೊದಲನೆಯ ದಿವಸ ಮತ್ತು ಎರಡನೆಯ ದಿವಸ ಸುಮಾರು 20 ನಿಮಿಷ ಮಾತನಾಡಿದ್ದೇನೆ. ಪ್ರಾಯಶಃ ಮಾನ್ಯ ಸ್ನೇಹಿತರ ಮನಸ್ಸಿನಲ್ಲಿ ಆಗ ಏನಿತ್ತೋ ಅದು ಈಗ ಇಲ್ಲ ಎಂದು ನಂಬಿಕೊಂಡಿದ್ದೇನೆ. ಇದಕ್ಕೆ ಸನ್ನಿವೇಶ ಹಾಗೆ ಬಂದಿದೆ. ಅನೇಕ ಮಾನ್ಯ ಮಿತ್ರರು ಈ ವರದಿಯನ್ನು ಓದಿದ್ದಾರೆ. ಈ ವರದಿಯಲ್ಲಿ ಅನೇಕ ಸಲಹೆಗಳು ಇವೆ. ಆದರೆ ಈ ದಿವಸ, ಶ್ರೀ ಇಮಾಂರವರು ಹೇಳಿದ ಹಾಗೆ, ಇಂಡಿಯಾ ದೇಶದಲ್ಲಿ ಒಂದು pattern ಇರುವಾಗ ಅದಕ್ಕೆ ವಿರೋಧವಾಗಿ ಹೋಗತಕ್ಕದ್ದು ಬಹಳ ಕಷ್ಟ. ಅದಕ್ಕೇ ಡಾಕ್ಟರ್ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರ ವರದಿ ಬಂದಿದ್ದರೆ ನಮಗೆಲ್ಲರಿಗೂ ಅನುಕೂಲವಾಗುತ್ತಿತ್ತು. ಅದು ಬಂದಮೇಲೆ ಪುನಃ ಈ ವರದಿಯನು ವಿಮರ್ಶೆಮಾಡುವುದಕ್ಕೆ ಅವಕಾಶವಿಲ್ಲ ಎಂದು ಈಗ ಸಭಾನಾಯಕರು ಹೇಳಿದ ಮೇಲೆ ನಾವು ನಮ್ಮ ಪೂರ್ಣವಾದಂಥ ಅಭಿಪ್ರಾಯವನ್ನು ಕೊಡುವುದಕೆ ಕಷ್ಟವಾಗುತ್ತದೆ. ಪ್ರಾಯಶಃ ಇತರ ಪ್ರಾಂತಗಳು ಯಾವ ದಾರಿಯನ್ನು ಅನುಸರಿಸುತ್ತಿವೆಯೋ ಆ ದಾರಿಯನ್ನೇ ನಾವೂ ಅನುಸರಿಸಬೇಕಾಗುತ್ತದೆ. ಆ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಶ್ರೀ ರಾಮಚಂದ್ರರಾಯರು ಹೇಳಿದ ಹಾಗೆ ಪುನಃ ಅವಶ್ಯಕತೆ ಇದ್ದರೆ ಪರಿಶೀಲನೆ ಮಾಡುವುದು ಬಹಳ ಅಗತ್ಯ, ಪ್ರಾಯಶಃ ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.

*Sri K. HANUMANTHAIYA (Chief Minister).—What I mean to say is, after the report of the Secondary Education Commission Report comes, when the Budget Session of the Assembly meets, there will be occasion for us to discuss grants under Education. Hon'ble Members can say what they have to say on that occasion. As we have already admitted students, it is not possible to give effect to the Educational Reforms this year alone. Therefore, there is sufficient time.

ಶ್ರೀ ಟಿ. ಮರಿಯಪ್ಪ—ಪುನಃ ಇದನ್ನು ಚರ್ಚೆಮಾಡುವುದಕ್ಕೆ ಅವಕಾಶವಿರುವುದರಿಂದ ಪ್ರಾಯಶಃ ನಾವು ಯಾರೂ ಈಗ ಶಂಕೆಯಿಂದ ವಿಮರ್ಶೆಮಾಡಬೇಕಾಗಿಲ್ಲ. ಬಹುಶಃ ಸರ್ಕಾರದವರ ಉದ್ದೇಶವೂ ಅದೇ ಆಗಿದೆ. ಈ ಸುಧಾರಣೆಗಳು ಮತ್ತು ಸೆಕೆಂಡರಿ ಎಜುಕೇಷನ್ ವರದಿಯಲ್ಲಿರತಕ್ಕ ಸುಧಾರಣೆಗಳು ಹಾಗೂ ಸಲಹೆಗಳು ಹೊಂದಿಕೊಂಡು ಹೋದರೆ ದೇಶದ ದೃಷ್ಟಿಯಿಂದ ಒಳ್ಳೆಯದು ಎಂದು ಅವರ ಭಾವನೆಯಿರುವಾಗ ನಾವೀಗ ಹೆಚ್ಚಿಗೆ ವಿಮರ್ಶೆ ಮಾಡಬೇಕಾಗಿಲ್ಲ. ಆದರೆ ಒಂದು ಮಾತ್ರ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಅದು ಹಣಕಾಸಿನ ಮಾತು. ಅದರಲ್ಲೂ ಈಗ ಪಾಂಚವಾರ್ಷಿಕ ಯೋಜನೆಯು ಜಾರಿಯಲ್ಲಿರುವಾಗ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿಗೆ ಹಣ ಖರ್ಚುಮಾಡಬೇಕಾದ ಅವಶ್ಯಕತೆ ಇರುವಾಗ, ಜೊತೆಗೆ ಹೆಚ್ಚಿಗೆ ತೆರಿಗೆ ಹಾಕತಕ್ಕ ಸಂದರ್ಭಗಳು ಬಹಳ ಕಡಮೆಯಿರುವಾಗ, ಈ ಸುಧಾರಣೆಯಲ್ಲಿ ಯಾವ ಭಾಗವನ್ನು ಅವಶ್ಯಕವಾಗಿ' ಅತಿ ಜರೂರಾಗಿ ಜಾರಿಗೆ ತರಬೇಕೆಂಬುದನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು. ಸುಧಾರಣಾ ಸಮಿತಿಯವರ ವರದಿ ಬಂದಿದೆ. ಅದರಲ್ಲಿ ಅನೇಕ ಉಪಯುಕ್ತ ಸಲಹೆಗಳಿವೆ, ಎಂಬ ಒಂದೇ ದೃಷ್ಟಿಯಿಂದ ಇದನ್ನು ಜಾರಿಗೆ ಕೊಡಬೇಕೆಂದು ಪರಿಗಣಿಸದೆ, ಅವಶ್ಯಕವಾಗಿ, ಹೆಚ್ಚಿಗೆ ಖರ್ಚಿಲ್ಲದೆ ಜಾರಿಗೆ ಕೊಡಬಹುದಾದಂಥ ಅಂಗಗಳೇನೇನಿವೆಯೋ ಅವುಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ನಮಗಿರುವ ಹಣಕಾಸಿನ ಮಿತಿಯೊಳಗೆ ಎಷ್ಟು ದೂರ ಹೋಗಬಹುದೆಂಬುದನ್ನು ನೋಡಿಕೊಂಡು ಜಾರಿಗೆ ಕೊಡತಕ್ಕ ಕಾರ್ಯವನ್ನು ಕೈಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ ಸರ್ಕಾರದವರು ತಿಳಿಸಿದ್ದರೆ ಮಾನ್ಯ ಸದಸ್ಯರಿಗೆಲ್ಲರಿಗೂ ಸುಲಭವಾಗಿರುತ್ತಿತ್ತೆಂದು ನನ್ನ ಭಾವನೆ. ಶ್ರೀ ಇಮಾಂರವರೂ ಅದನ್ನು ಹೇಳಿದರು. ಈ ಸುಧಾರಣೆಯಲ್ಲಿ ಬರುವ ಮೂರು ವರ್ಷಗಳಲ್ಲಿ ಯಾವಯಾವುವುಗಳನ್ನು ಜಾರಿಗೆ ಕೊಡಬಹುದು ಎಂಬುದನ್ನು ತಿಳಿಸಿದ್ದರೆ ಹೆಚ್ಚು ಆಳವಾಗಿ ಈ ಸುಧಾರಣೆಗಳನ್ನು ಪರಿಶೀಲಿಸಬಹುದಾಗಿತ್ತು ಎಂದು ಹೇಳಿ, ನನಗೆ ಮೂರು ದಿವಸಗಳು ಇದರ ವಿಷಯದಲ್ಲಿ ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಈ ವರದಿ ಬಹಳ ದೊಡ್ಡದು. ಇದನ್ನು ತಯಾರಿಸುವದಕ್ಕೆ, ನಿಜವಾಗಿಯೂ ದೀರ್ಘವಾಗಿ ಮತ್ತು ಕೂಲಂಕಷವಾಗಿ ಪರಿಶೀಲನೆಮಾಡಿದ ಸಮಸ್ತರಿಗೂ ನಮ್ಮ ವಂದನೆಗಳನ್ನರ್ಪಿಸಬೇಕಾಗಿದೆ. ಆದರೆ ಇದು ಎಷ್ಟರಮಟ್ಟಿಗೆ ಜಾರಿಗೆ ಕೊಡುವುದಕ್ಕೆ ಸಾಧ್ಯ ಎಂಬುದು ನಾನು ವಿಮರ್ಶೆಮಾಡಬೇಕಾದ ವಿಷಯ.

ಮುಖ್ಯವಾಗಿ ನಮ್ಮಲ್ಲಿ ವಿದ್ಯಾಭ್ಯಾಸ ಯಾವರೀತಿಯಿರಬೇಕೆಂಬ ವಿಚಾರದಲ್ಲಿ ನಾನು ಮೊಟ್ಟಮೊದಲಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. Fundamental Right ಎನ್ನುವುದರ ಜೊತೆಗೆ ಯುನೈಟೆಡ್ ನೇಷನ್ಸಿನವರು Declaration of Human Rightsನಲ್ಲಿ ಏನು ಹೇಳಿದ್ದಾರೋ ಅದರಂತೆ ಪ್ರತಿಯೊಂದು ಮಗುವಿಗೂ ಸರ್ಕಾರದವರು ವಿದ್ಯಾಭ್ಯಾಸ ಮಾಡಿಸತಕ್ಕದ್ದು ಅವರ ಪ್ರಥಮ ಕರ್ತವ್ಯ. ಅಲ್ಲದೆ, ನಮ್ಮ ರಾಜ್ಯಾಂಗದ 45ನೆಯ ವಿಧಿಯ ಪ್ರಕಾರವೂ ಇನ್ನು 10 ವರ್ಷಗಳೊಳಗಾಗಿ ಪ್ರತಿಯೊಬ್ಬರಿಗೂ ಬಲಾತ್ಕಾರದ ಹಾಗೂ ಉಚಿತ ವಿದ್ಯಾಭ್ಯಾಸವನ್ನು ಕೊಡತಕ್ಕ ಏರ್ಪಾಡು ಮಾಡತಕ್ಕದು ಸರ್ಕಾರದವರ ಮೊದಲನೆಯ ಕರ್ತವ್ಯವೆಂದು ವಿಧಾಯಕವಾಗಿದೆ. ಆದ್ದರಿಂದ ಈ ಸುಧಾರಣೆಗಳನ್ನು ಮುಖ್ಯವಾಗಿ ಸಾಧಿಸುವುದಕ್ಕೆ ಸಾಧ್ಯವಿದೆಯೇ ಎಂಬದನ್ನು ವಿಮರ್ಶಿಸಬೇಕೆಂಬ ಒಂದೇ ದೃಷ್ಟಿಯಿಂದ ನಾವು ಈ ವರದಿಯನ್ನು ಮೊದಲು ನೋಡಬೇಕಾಗಿದೆ.

ಆಮೇಲೆ, ಈ ರಿಪೋರ್ಟಿನಲ್ಲಿ ಇಂಟರ್‌ಮಿಡಿಯಟ್ ಕೋರ್ಸನ್ನು ವಿಧ್ಯಾಭ್ಯಾಸ ಇಲಾಖೆಯ ಆಡಳಿತಕ್ಕೆ ವಹಿಸಬೇಕೆಂದು ಸಲಹೆಮಾಡಿದ್ದಾರೆ. ಇದು ಎಷ್ಟು ಮಟ್ಟಿಗೆ ಸರಿ ಎಂಬದನ್ನು ಬುದ್ಧಿವಂತರು ವಿಮರ್ಶೆಮಾಡಿ ಹೇಳಬೇಕಾದದ್ದು. ಬಹುಶಃ ಒಂದು ದೃಷ್ಟಿಯಿಂದ ಈ ರೀತಿ ಸಲಹೆಮಾಡಿದ್ದಾರೆಂದು ನನಗೆ ತೋರುತ್ತದೆ. ಏನೆಂದರೆ : ನಾವು ಟೆಕ್ನಿಕಲ್ ಕೋರ್ಸ್‌ಗಳನ್ನು ವಿಬ್ಯಾಭ್ಯಾಸ ಇಲಾಖೆಗೆ ಸೇರಿಸಿರುವುದರಿಂದ ಇದನ್ನು ಕೂಡ ವಿದ್ಯಾಭ್ಯಾಸದ ಇಲಾಖೆಗೆ ಸೇರಿಸುವುದು ಒಳ್ಳೆಯದೆಂದು ಭಾವಿಸಿ ಈ ಸಲಹೆಕೊಟ್ಟಿರಬಹುದು.

ಸೆಕೆಂಡರಿ ವಿದ್ಯಾಭ್ಯಾಸದ ವಿಷಯದಲ್ಲಿ ನಾನೀಗ ಅಷ್ಟಾಗಿ ಮಾತನಾಡಲು ಇಷ್ಟಪಡುವುದಿಲ್ಲ. ಏಕೆಂದರೆ ಮುಂದೆ ಕೇಂದ್ರ ಸರ್ಕಾರದವರಿಂದ ಸೆಕೆಂಡರಿ ಎಜ್ಯುಕೇಷನ್ ಸುಧಾರಣಾ ಸಮಿತಿಯವರ ವರದಿ ಬರುವುದಿದೆ. ಆಗ ನಮ್ಮ ಅಭಿಪ್ರಾಯ ಹೇಳಬಹುದು.

ಶ್ರೀ ಕೆ. ಹನುಮಂತಯ್ಯ.—ಆ ರಿಪೋರ್ಟ್ ಬರಲಿ, ಬರದಿರಲಿ, ಏನು ಮಾಡಬೇಕೆಂಬದನ್ನು ತಾವು ಹೇಳಿ.

ಶ್ರೀ ಬಿ. ಹುಚ್ಚೇಗೌಡ.—ಮುಖ್ಯವಾಗಿ ವಿದ್ಯಾಭ್ಯಾಸವನ್ನು ನಾವು ಯಾರಿಗೆ ಒದಗಿಸಬೇಕೋ ಅವರಿಗೆ ಒದಗಿಸುವುದಕ್ಕೆ ಈ ಸುಧಾರಣೆಗಳಲ್ಲಿ ಸಾಧ್ಯವಿದೆಯೇ ಎಂಬದನ್ನು ನೋಡುವುದಾದರೆ, ಖಂಡಿತವಾಗಿ ಆಗುವುದಿಲ್ಲವೆಂದು ನಾನು ಹೇಳಬೇಕಾಗಿದೆ. ಇದುವರೆಗೂ ಇಂಥ ಎಷ್ಟೋ ರಿಪೋರ್ಟುಗಳು ಬಂದವು. ಈ ಸುಧಾರಣೆಯಲ್ಲಿ ಕೂಡ ದೇಶದಲ್ಲಿನ ಪ್ರತಿಯೊಬ್ಬ ಮಗುವಿಗೂ ವಿದ್ಯಾಭ್ಯಾಸ ಕೊಡಲಿಕ್ಕೆ ಸಾಧನೆಮಾಡಿಲ್ಲ. ಇದರಲ್ಲಿರುವ ರೀತಿಯಲ್ಲಿ 10 ವರ್ಷದ ಒಂದು ಪ್ರೋಗ್ರಾಂ ಇದೆ. ಮೊದಲನೆಯ ವರ್ಷವೇ ಅದರಂತೆ ಮಾಡಲಿಕ್ಕೆ ನಮ್ಮಲ್ಲಿ ದುಡ್ಡಿಲ್ಲದಿರುವಾಗ ಇನ್ನು ಉಳಿದ 9 ವರ್ಷಗಳಿಗೆ ಏನು ಮಾಡುತ್ತೀರಿ ? ಆದ್ದರಿಂದ ಯಾವುದನ್ನೂ ಸಾಧನೆ ಮಾಡುವುದಕ್ಕಾಗದಿರುವ ಇಂಥ ಯೋಜನೆಯಿಂದ ಪ್ರಯೋಜನವೇನು ? ಈ ರೀತಿ ಮಾಡುವುದಕ್ಕಿಂತ ಬೇರೆ ಯಾವುದಾದರೂ ಕಾರ್ಯತಃ ಸಾಧಿಸಬಹುದಾದ ರೀತಿಯಲ್ಲಿ ಮಾಡಿದ್ದರೆ ಚೆನ್ನಾಗಿತ್ತು. ಈಗ ನಮ್ಮ ದೇಶದಲ್ಲಿ ನೋಡುವುದಾದರೆ, ಒಟ್ಟು ಎಷ್ಟು ಸ್ಕೂಲುಗಳನ್ನು ತಾವು ಕೊಟ್ಟಿದ್ದೀರಿ ? 10,000 ಪ್ರೈಮರಿ ಸ್ಕೂಲುಗಳು ನಮ್ಮಲ್ಲಿವೆ. ಈಗಿನ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರವೇ ಸಾವಿರ ಪ್ರಜಾಸಂಖ್ಯೆಯಿರುವ ಅಥವಾ ಅದಕ್ಕೆ ಜಾಸ್ತಿಯಿರುವ ಎಲ್ಲಾ ಗ್ರಾಮಗಳಿಗೂ ಕೂಡ ಇನ್ನೂ ಪ್ರಾಥಮಿಕ ಪಾಠಶಾಲೆಗಳನ್ನು ಕೊಟ್ಟಿಲ್ಲ. ಇನ್ನೂ ಇಂಥಾ 36 ಗ್ರಾಮಗಳಲ್ಲಿ ಸ್ಕೂಲಿಲ್ಲ. ಇನ್ನು 400 ರಿಂದ 999 ಪ್ರಜಾಸಂಖ್ಯೆಯಿರತಕ್ಕಂಥ 2,000 ಗ್ರಾಮಗಳಿಗೆ ಸ್ಕೂಲುಗಳನ್ನು ಕೊಡಬೇಕಾಗಿದೆ. ಅಲ್ಲಿಂದ ಮುಂದೆ, 200—300 ಜನರಿರುವ ಗ್ರಾಮಗಳಿಗೆ ಸ್ಕೂಲುಗಳನ್ನು ಕೊಡಬೇಕೆಂದರೆ ಇನ್ನು 3,082 ಸ್ಕೂಲುಗಳನ್ನು ಕೊಡಬೇಕಾಗಿ ಬರುತ್ತದೆ. ಹೀಗಿರುವಲ್ಲಿ, ಈ ಸುಧಾರಣಾ ಸಮಿತಿಯವರು ಹೇಳಿದ್ದಾರೆ: ಒಬ್ಬೊಬ್ಬ ಉಪಾಧ್ಯಾಯರಿರುವ ಸ್ಕೂಲುಗಳಿಗೆಲ್ಲಾ ಇನ್ನೊಬ್ಬ ಉಪಾಧ್ಯಾಯರನ್ನು ಕೊಡಬೇಕು ; ನ್ಯೂಟೈಪ್ ಸ್ಕೂಲುಗಳನ್ನು ತೆಗೆಯಬೇಕು, ಎಲ್ಲಾ ಸ್ಕೂಲುಗಳಿಗೂ ತರಪೇತಾದ ಉಪಾಧ್ಯಾಯರುಗಳನ್ನೇ ಕೊಡಬೇಕು ಎಂದು ಹೇಳಿದ್ದಾರೆ. ಈ ರೀತಿಯಾಗಿ ಮಾಡುತ್ತಾಹೋದರೆ, ಅದರಲ್ಲೂ ಈಗ ನಮ್ಮ ದೇಶದಲ್ಲಿ 3,000 ಗ್ರಾಮಗಳಿಗೆ ಜರೂರಾಗಿ ಸ್ಕೂಲುಗಳನ್ನೇ ಕೊಡಬೇಕಾದುದು ಉಳಿದಿರುವಾಗ, ಅದನ್ನೆಲ್ಲಾ ಮಾಡುವುದಕ್ಕೆ ಹೇಗೆ ಸಾಧ್ಯವೋ ಹೇಳಲಾರೆ. ವರ್ಷಕ್ಕೆ 500 ಸ್ಕೂಲುಗಳಂತೆ 10 ವರ್ಷಗಳವರೆಗೆ ಜಾಸ್ತಿ ಮಾಡುತ್ತಾಹೋದರೆ, 10 ವರ್ಷಗಳೂ 40 ಲಕ್ಷ ರೂಪಾಯಿಗಳನ್ನು ಹೆಚ್ಚು ಹೆಚ್ಚಿಗೆ ಒದಗಿಸಬೇಕಾಗಿ ಬರುತ್ತದೆ. ಇದಕ್ಕೆ ದಾರಿ ಇಲ್ಲ. ಹಿಂದೆ ಈ ವಿದ್ಯಾಭ್ಯಾಸಕ್ಕಾಗಿ ಎಷ್ಟೋ ವಿಧವಾದ ತೆರಿಗೆಗಳನ್ನು ಒಪ್ಪಿಕೊಂಡಿದ್ದೆವು. ಆದಾಯ ತೆರಿಗೆಯನ್ನು ಕೂಡ ತಂದು ಅದನ್ನು ವಿದ್ಯಾಭ್ಯಾಸಕ್ಕಾಗಿಯೇ earmark ಮಾಡುತ್ತೇವೆಂದು ಹೇಳಿದ್ದರು. ಆಮೇಲೆ ಅದೇ ರೀತಿ ವಿದ್ಯಾಭ್ಯಾಸದ ತೆರಿಗೆಯನ್ನು ಕೂಡ ಹಾಕಿದರು. ಇಷ್ಟಾದರೂ ಅದಾವುದನ್ನೂ ವಿದ್ಯಾಭ್ಯಾಸಕ್ಕಾಗಿಯೇ ಮೀಸಲಾಗಿಡಲಿಲ್ಲ. ಆದ್ದರಿಂದ ಈಗ ಒಂದುವೇಳೆ ತಾವು ತೆರಿಗೆ ಹಾಕಿ ಅದನ್ನು ವಿದ್ಯಾಭ್ಯಾಸಕ್ಕೇ ಉಪಯೋಗಿಸುತ್ತೇವೆಂದರೂ ನಮಗೆ ನಂಬಿಕೆಯಿಲ್ಲ. ಸ್ವಾತಂತ್ರ್ಯ ಬಂದಮೇಲೆ ದೇಶದಲ್ಲಿ ವಿದ್ಯಾಭ್ಯಾಸ ಜಾಸ್ತಿಯಾಗುತ್ತದೆಂದು ನಾವೆಲ್ಲಾ ಭಾವಿಸಿದ್ದೆವು. ಅದಕ್ಕೆ ಬದಲು ಕಾಂಗ್ರೆಸ್ ಸರ್ಕಾರ ಬಂದಮೇಲೆ ವಿದ್ಯಾಭ್ಯಾಸ ಪ್ರಗತಿಯಲ್ಲಿರುವುದು ಹೋಗಿ Reverse gearನಲ್ಲಿದೆ. ಮೊದಲು ಬಲಾತ್ಕಾರ ವಿದ್ಯಾಭ್ಯಾಸ ಜಾರಿಗೆ ತರಬೇಕೆಂದು ಷುರುಮಾಡಿದರು. ಅದು ಸಾಧ್ಯವಾಗುವುದಿಲ್ಲವೆಂದು ಹೇಳಿ ಆಮೇಲೆ Partial Compulsory ವಿದ್ಯಾಭ್ಯಾಸವನ್ನು ತಂದರು. ಈಗ ಅದೂ ಹೊರಟು ಹೋಯಿತು. ಹೀಗೆ ಬರೀ ರಿಪೋರ್ಟುಗಳನ್ನು ಬರೆಯುವುದರೊಳಗೇ ನಮ್ಮ ಪ್ರಯತ್ನವೆಲ್ಲಾ ಮುಗಿದು ಹೋಗುತ್ತಿದೆ. ಈ ರಿಪೋರ್ಟುಗಳೆಲ್ಲಾ ಕೊನೆಗೆ ಕಸದ ಬುಟ್ಟಿಗೆ ಹೋಗುತ್ತವೆ, ಅಷ್ಟೇ. ಒಂದನ್ನೂ ಕೂಡ ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಏಕೆಂದರೆ, ಇದುವರೆಗಿನ ಆಡಳಿತ ರೀತಿಯನ್ನು ನೋಡುವುದಾದರೆ, ನೀವು, ಇದರಲ್ಲಿ ಹೇಳಿರುವಂತೆ, 22,000 additional ಉಪಾಧ್ಯಾಯರುಗಳನ್ನು, ಅದರಲ್ಲೂ ತರಪೇತಾದ ಉಪಾಧ್ಯಾಯರುಗಳನ್ನು ಕೊಡುವುದಕ್ಕೆ ಸಾಧ್ಯವೇ ? ಒಂದು ಸ್ಕೂಲಿಗೆ ಒಬ್ಬರು ಉಪಾಧ್ಯಾಯರನ್ನು ಕೊಡಬೇಕೆಂದರೆ 440 ರೂಪಾಯಿಗಳು ಬೇಕಾಗುತ್ತವೆ. ಅಂಥಾದ್ದರಲ್ಲಿ ಈಗ ಸ್ಕೂಲುಗಳಿರುವ ಕಡೆಗಳಲ್ಲೆಲ್ಲಾ ಇನ್ನೊಬ್ಬರು ಉಪಾಧ್ಯಾಯರನ್ನು ಕೊಡಬೇಕೆಂದು ಹೇಳಿರುತ್ತಾರೆ !

ಸ್ಕೂಲುಗಳಿಲ್ಲದಿರುವ ಸುಮಾರು ನಾಲ್ಕು ಸಾವಿರ ಗ್ರಾಮಗಳಿಗೆ ವರ್ಷಕ್ಕೆ 400 ಸ್ಕೂಲುಗಳಂತೆ, ಒಬ್ಬೊಬ್ಬರು ಉಪಾಧ್ಯಾಯರಿರುವ ಸ್ಕೂಲುಗಳನ್ನು ಕೊಟ್ಟರೆ

(ಶ್ರೀ ಬಿ. ಹುಚ್ಚೇಗೌಡ.)

16 ಅಥವಾ 18 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇನ್ನು ಸೂಪರ್‌ವೈಜರಿ ಸಿಬ್ಬಂದಿಯನ್ನೂ ಲೆಕ್ಕ ಹಾಕಿದರೆ ಸುಮಾರು 25 ಲಕ್ಷ ರೂಪಾಯಿ ಖರ್ಚಾಗುತ್ತದೆ. ಹಿಂದೆ ಇಷ್ಟು ಹಣವನ್ನೊದಗಿಸುತ್ತಿದ್ದರು. ಮೊದಲು 4 ಲಕ್ಷ ಕೊಟ್ಟು ಸ್ಕೂಲು ಮತ್ತು equipment ಕೊಡಲಿ, ಇನ್ನು 44 ಲಕ್ಷ ಮುಂದಿನ ವರ್ಷ ಕೊಟ್ಟು training of additional teachersಗೆ ಅನುಕೂಲಮಾಡಿಕೊಡಲಿ. ಹಾಗಿಲ್ಲದೆ ಒಂದು ವರ್ಷ ಮಾಡಿ ಕೈಬಿಟ್ಟರೆ ಅದರಿಂದೇನು ಪ್ರಯೋಜನ? ಹಿಂದೆ ಮಾಡಿದ್ದ ಯೋಜನೆಯಂತೆ ನಿರ್ಬಂಧ ಪ್ರೈಮರಿ ಶಿಕ್ಷಣಕ್ಕೆ ವರ್ಷಕ್ಕೆ 140 ಪಾಠಶಾಲೆಗಳಂತೆ ತೆರೆಯಬೇಕೆಂದು ಮಾಡಿದ್ದರು. 1949ನೆಯ ಇಸವಿಯಲ್ಲಿ ಇದಕ್ಕೂ ಸೊನ್ನೆಯಾಯಿತು. 1950-51ರಲ್ಲಿ 20 ಸ್ಕೂಲುಗಳಾಗಿ, ಒಂದು ವರ್ಷ 53 ಸ್ಕೂಲು, ಇನ್ನೊಂದು ವರ್ಷ 110 ಸ್ಕೂಲು ಹೀಗಾಗಿ ಆ ಯೋಜನೆ ಸರಿಯಾಗಿ ನಡೆಯುತ್ತಿಲ್ಲ. ಸಾಮಾನ್ಯವಾಗಿ ವರ್ಷಕ್ಕೆ 400 ಸ್ಕೂಲುಗಳನ್ನು ಕೊಡಬೇಕೆಂದು ಕಡ್ಡಾಯವಾಡಿದುದನ್ನೂ ಜಾರಿಗೆ ತರದೇಯಿರುವವರು ವರ್ಷಕ್ಕೆ 500 ಸ್ಕೂಲುಗಳನ್ನು ಕೊಡುತ್ತೇವೆಂದು ಹೇಳಿದರೆ, ಹೀಗೆ ಹತ್ತು ವರ್ಷಕೊಡುತ್ತೇವೆಂದು ಹೇಳಿದರೆ ಅದನ್ನು ನಂಬುವುದು ಹೇಗೆ? ಇದು ಸುಮ್ಮನೆ ಜನರಿಗೆ ಮೋಸಮಾಡುವುದಕ್ಕೆ ಇಲ್ಲದಿದ್ದರೆ ಮರುಳುಮಾಡುವುದಕ್ಕೆ ಮಾಡಿದ್ದಾರೆಂದು ಭಾಸವಾಗುತ್ತದೆ...........

ಶ್ರೀ ಕೆ. ಹನುಮಂತಯ್ಯ.—ಎಷ್ಟಾದರೂ ಚರ್ಚೆ ಮಾಡೋಣ, ಆದರೆ 'ಮೋಸಮಾಡುವುದಕ್ಕೆ ಮಾಡಿದ್ದಾರೆ' 'ಸುಳ್ಳು ಹೇಳುತ್ತಾರೆ' ಎಂದು ಹೇಳುವುದು ಸರಿಯಲ್ಲ. It would not be even parliamentary. I will leave it at that.

ಶ್ರೀ ಬಿ. ಹುಚ್ಚೇಗೌಡ.—It is a fact, Sir. ವರ್ಷಕ್ಕೆ ನಾನೂರು ಸ್ಕೂಲುಗಳನ್ನು ಕೊಡುತ್ತೇವೆಂದು ಹೇಳಿದ್ದರು; ಹಾಗೆ ಕೊಟ್ಟಿದ್ದೇವೆಂದು ಈಗ ಅವರು ಎದೆ ಮುಟ್ಟಿ ಹೇಳಲಿ. ನಾನು ಹೇಳಿದುದು ನಿಜವೋ ಅಲ್ಲವೋ ಎನ್ನುವುದು ಗೊತ್ತಾಗುತ್ತದೆ. ಹೀಗಿರುವಾಗ 400 ಸ್ಕೂಲುಗಳನ್ನೂ ಕೊಡದೇ ಇರುವಾಗ, ಮುಂದೆ 500 ಕೊಡುತ್ತೇವೆಂದರೆ ಅದನ್ನು ನಂಬುವುದು ಹೇಗೆ? ಯಾವ ಧೈರ್ಯದಮೇಲೆ ನಾನು ಹೇಳುವುದನ್ನು contradict ಮಾಡುತ್ತಾರೋ ಮಾಡಲಿ. ಸುಮ್ಮನೆ ಪುಸ್ತಕಗಳನ್ನು ಬರೆಯಬಹುದು. ಆದರೆ ಅನುಭವದಮೇಲೆ ನಾನು ಹೇಳುತ್ತಿದ್ದೇನೆ. ಒತ್ತಾಯ ಶಿಕ್ಷಣದ ಯೋಜನೆಯನ್ನು ಸರ್ಕಾರದವರು ವಾಪಸುತೆಗೆದುಕೊಂಡದ್ದೇಕೆ? ನಾವು ನೋಡುತ್ತಿರುವಹಾಗೆ ಪ್ರೈಮರಿ ಸ್ಕೂಲುಗಳಲ್ಲಿ ಮೊದಲನೆಯ ವರ್ಷ ಹೆಚ್ಚು ವಿದ್ಯಾರ್ಥಿಗಳು ಓದುತ್ತಾರೆ, ಎರಡನೆಯ ವರ್ಷ ಸ್ವಲ್ಪ ಕಡಮೆಯಾಗುತ್ತದೆ, ಮುಂದೆ ಹೋಗುತ್ತಾ ಇನ್ನೂ ಕಡಿಮೆಯಾಗುತ್ತದೆ, ವಿದ್ಯಾರ್ಥಿಗಳ ಸಂಖ್ಯೆ ಈ ವರದಿಯಲ್ಲೇ ಹೇಳಿರುವಂತೆ, ಮೊದಲನೆಯ ವರ್ಷದ ತರಗತಿಯಲ್ಲಿ 1,21,000 ವಿದ್ಯಾರ್ಥಿಗಳಿದ್ದಾರೆ. ನಾಲ್ಕನೆಯ ವರ್ಷ 67 ಸಾವಿರ ಇರುತ್ತಾರೆ.

ಅಧ್ಯಕ್ಷರು.—ಈ ವರದಿಯನ್ನು ವೇಸ್ಟ್ ಪೇಪರ್ ಬ್ಯಾಸ್ಕೆಟ್ಟಿಗೆ ಹಾಕುತ್ತಾರೆಂದು ಈಗ ತಾವೇ ಹೇಳಿದಿರಿ; but you are making use of it.

ಶ್ರೀ ಬಿ. ಹುಚ್ಚೇಗೌಡ.—ಅಡ್ಮಿನಿಸ್ಟ್ರೇಷನ್ ರಿಪೋರ್ಟಲ್ಲ.

Mr. SPEAKER.—The Report on Educational Reforms.

ಶ್ರೀ ಬಿ. ಹುಚ್ಚೇಗೌಡ. ಕೊನೆಗೆ ಇದು ಆ ಅವಸ್ಥೆಗೇ ಬರುತ್ತದೆಂದು ಹೇಳಿದೆ.

ಜಿಲ್ಲೆಗೊಂದರಂತೆ 9 ತಾಲ್ಲೂಕುಗಳಲ್ಲಿ ಒತ್ತಾಯ ಶಿಕ್ಷಣ ಕ್ರಮವನ್ನು ಜಾರಿಗೆ ತಂದರು. ಹಿಂದೆ ಮೊದಲ ವರ್ಷದಲ್ಲಿ 1,21,000 ಹುಡುಗರಿದ್ದುದು ಆಮೇಲೆ 1,04,000 ಆಯಿತು. ಎಂದರೆ ಶೇಕಡ 86ರಷ್ಟಾಯಿತು. ಈ ವರದಿಯಲ್ಲಿ ನೋಡಿದರೆ, 2,86,000 ಇದ್ದುದು ನಾಲ್ಕನೆಯ ವರ್ಷದಲ್ಲಿ ಕೇವಲ 67,000 ಹುಡುಗರಿದ್ದಾರೆ, ಒತ್ತಾಯ ಶಿಕ್ಷಣ ಜಾರಿಗೆ ತರದೇಯಿರುವುದರಿಂದ. ಇದನ್ನು ನೋಡಿದರೆ ಒತ್ತಾಯ ಶಿಕ್ಷಣ ಜಾರಿಗೆ ತರದೇಯಿದ್ದರೆ ಜನರಿಗೆ ವಿದ್ಯೆ ಎಷ್ಟು ಮಟ್ಟಿಗೆ ದೊರೆಯುತ್ತದೆಂಬುದು ಗೊತ್ತಾಗುತ್ತದೆ. ಇಷ್ಟು ಉಪಯುಕ್ತವಾದ ಯೋಜನೆಯನ್ನು ನಿಲ್ಲಿಸಲು ಕಾರಣವೇನು? ಡಿಸ್ಟ್ರಿಕ್ಟಿಗೆ ಒಂದು ತಾಲ್ಲೂಕಿನಂತೆ 9 ತಾಲ್ಲೂಕಾಯಿತು. ಇದೇರೀತಿ 36 ತಾಲ್ಲೂಕುಗಳಲ್ಲಿ partial compulsory education ಯೋಜನೆಯನ್ನು ಜಾರಿಗೆ ತಂದರು; ಅದನ್ನೂ ವಾಪಸು ತೆಗೆದುಕೊಂಡರು. ಹೀಗಿರುವಾಗ ವಿದ್ಯಾಭ್ಯಾಸದಲ್ಲಿ ಇನ್ನೂ ಮುಂದುವರಿಯುತ್ತೇವೆ, ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ವಿದ್ಯಾಭ್ಯಾಸಕ್ಕೆ ಕೊಡುತ್ತೇವೆ ಎಂದು ಸರ್ಕಾರದವರು ಹೇಳಿದರೆ ಹೇಗೆ ನಂಬುವುದು?

ಎಲ್ಲಿ ಸ್ಕೂಲು ಚೆನ್ನಾಗಿ ನಡೆಯುತ್ತದೆಯೋ ಅಲ್ಲಿಗೆ ಉಪಾಧ್ಯಾಯರಿಗೆ, ಶಿಕ್ಷಣ, ಸಲಕರಣೆ, ಅವರಿಗೆ ಸಂಬಳ, ಗ್ರೇಡು, ಇಕ್ವಿಪ್‌ಮೆಂಟ್ ಎಲ್ಲವನ್ನೂ ಕೊಡಿ. ಇನ್ನು ಕಂದಾಯ ಕೊಡುವವನಿಗೆ ಸ್ವತಂತ್ರ ಇಂಡಿಯಾ ದೇಶದಲ್ಲಿ ತಾನೂ ಒಬ್ಬ ಪ್ರಜೆ ಎಂದು ಹೇಳಿಕೊಳ್ಳುವುದಕ್ಕೆ ಯಾವುದಾದರೂ ಸೌಲಭ್ಯವಿದೆಯೆ? ಇದನ್ನು ನೋಡಿದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನು ಹೇಳಿದಹಾಗೆ, ಇದಕ್ಕೆ ಖರ್ಚುಮಾಡುವ ಹಣದಲ್ಲಿ ಸ್ವಲ್ಪ ಖರ್ಚುಮಾಡಿ ನಾಲ್ಕು ಸಾವಿರ ಗ್ರಾಮಗಳಿಗೆ ತಕ್ಷಣ ಸ್ಕೂಲುಗಳನ್ನು ಕೊಡಿ. ಇದು 27ಲಕ್ಷ ರೂಪಾಯಿಗಳಲ್ಲಿ ಆಗುತ್ತದೆ. ಉಪಾಧ್ಯಾಯರಿಗೆ ಟ್ರೇನಿಂಗ್ ಇಲ್ಲದಿದ್ದರೂ ಚಿಂತೆಯಿಲ್ಲ. ಓನಾಮವೇ ಯಿಲ್ಲದಿರುವಾಗ ಬಿ. ಎ. ಪಾಸು ಮಾಡಿಸುವುದು ಸಾಧ್ಯವೆ? ಯಾರು ಕಷ್ಟಪಟ್ಟು ಸರ್ಕಾರಕ್ಕೆ ಹಣಕೊಡುತ್ತಾರೋ ಅವರಿಗೆ ಈ ಯೋಜನೆಯಿಂದ ಏನಾದರೂ ಸಹಾಯವಾಗುತ್ತದೆಂದು ನಾನು ಖಂಡಿತವಾಗಿಯೂ ನಂಬಿಲ್ಲ. ವಿದ್ಯಾಭ್ಯಾಸವೆಂದರೆ, ಮಾನಸಿಕವಾಗಿಯೂ ದೈಹಿಕವಾಗಿಯೂ ಉತ್ತಮಗೊಳ್ಳುವಂತೆ ಶಿಕ್ಷಣ ಕೊಡಬೇಕು. ದೇಹದಾರ್ಢ್ಯವೂ ಇರಬೇಕು, ಮನಸ್ಸಿನ ಶಕ್ತಿಯೂ ಹೆಚ್ಚಬೇಕು. ಇವೆರಡೂ ಹೆಚ್ಚುವಂತೆ ಜ್ಞಾನವನ್ನು ಕೊಡಬೇಕಾದುದು ಕರ್ತವ್ಯ. ಇವೆರಡಕ್ಕೂ ಸಮಾನಾವಕಾಶವನ್ನು ಮೊದಲು ಕೊಡಬೇಕು. ವರ್ಷಕ್ಕೆ 40 ಲಕ್ಷ ರೂಪಾಯಿ ಹೆಚ್ಚು ಒದಗಿಸಿದರೆ, ಅದನ್ನು ಯಾವುದರಮೇಲೆ ಖರ್ಚುಮಾಡುವುದು? ಮೊದಲು ಕೆಳಗಿನ ಮಟ್ಟದಿಂದ, ಎಂದರೆ ಮೊದಲನೆಯ ತರಗತಿ, ಎರಡನೆಯ ತರಗತಿ ಹೀಗೆ ಮಾಡುವುದು. ಅಲ್ಲಿಯವರೆಗೂ ಯಾವರೀತಿ ಜನರಿಗೆ ಸಹಾಯವೊದಗುತ್ತದೆಂಬುದನ್ನು ಯೋಚಿಸಿದರೆ......

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—500 ಸ್ಕೂಲುಗಳನ್ನು ಪ್ರತಿವರ್ಷವೂ ಹೆಚ್ಚಾಗಿ ಕೊಟ್ಟರೆ, ಅವುಗಳನ್ನು ಸ್ಕೂಲುಗಳಿರುವ ಕಡೆ ಕೊಡುತ್ತಾರೋ ಅಥವಾ ಇಲ್ಲದಿರುವ ಕಡೆಗಳಿಗೆ ಕೊಡುತ್ತಾರೋ?

ಶ್ರೀ ಬಿ. ಹುಚ್ಚೇಗೌಡ.—ನಾನು ಹೇಳುವುದು 40 ಲಕ್ಷ ರೂಪಾಯಿ ಒದಗಿಸಿ 500 ಸ್ಕೂಲುಗಳನ್ನು ಕೊಡ

ಬಹುದು. ಸುಮ್ಮನೆ ಹೀಗೆ additional schools ಎಲ್ಲ ಕಡೆಯೂ ಕೊಡುವುದಕ್ಕೆ ಬದಲಾಗಿ ಈಗ ಸ್ಕೂಲೇ ಇಲ್ಲದೇಯಿರುವ ಕಡೆ ಕೊಡಿ ಎಂದು.

ಶ್ರೀ ಟಿ. ಮರಿಯಪ್ಪ.—ಅದನ್ನೂ ಹೇಳಿ, ಆದರೆ ಕೊಟ್ಟಲ್ಲೇ ಕೊಡುತ್ತಾರೆಂಬ ಭೀತಿ ಬೇಡ.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿಯವರೆಗಿನ ಅನುಭವ ವನ್ನು ಹೇಳುತ್ತಿದ್ದೇನೆ.

ಈ ವರದಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿ ಯನ್ನು 6 ವರ್ಷ ಮಾಡಿದ್ದಾರೆ. ನಮ್ಮ ರಾಜ್ಯಾಂಗ ದಲ್ಲಿ 14 ವರ್ಷದವರೆಗೆ ಕಡ್ಡಾಯವಾಗಿ ಉಚಿತ ವಿದ್ಯಾಭ್ಯಾಸ ಕೊಡಬೇಕೆಂದು ಹೇಳಿದೆ. ಅದರಲ್ಲಿ ಪ್ರೈಮರಿ ಅಥವಾ ಸೆಕೆಂಡರಿ ಎಂದು ಏನೂ ಹೇಳಿಲ್ಲ.

ಶ್ರೀ ವಿ. ವೆಂಕಟಪ್ಪ.—14 ನೆಯ ವಯಸ್ಸಿನವರೆಗೆ ಎಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಹೌದು, 14ನೆಯ ವಯಸ್ಸಿನವರೆಗೆ ಪ್ರತಿಯೊಬ್ಬರಿಗೂ ಉಚಿತವಾಗಿ ಕಡ್ಡಾಯವಾಗಿ ವಿದ್ಯಾಭ್ಯಾಸ ಕೊಡುವುದು ಸರ್ಕಾ ರದ ಕರ್ತವ್ಯ. ಈ ವರದಿಯಂತೆ ಇದರಲ್ಲಿಯೂ ಎರಡು ವರ್ಷ ಖೋತಾ ಆಗಿದೆ. ಆರುವರ್ಷ ವಿದ್ಯಾಭ್ಯಾಸ ಮಾಡಿದರೂ ಮತ್ತೆ ಅವನು ಮುಂದೆ ಬರವಣಿಗಸ್ತ ನಾಗುತ್ತಾನೋ ಅಥವಾ ಅನಕ್ಷರಸ್ಥನಾಗುತ್ತಾನೋ ಗೊತ್ತಿಲ್ಲ ; ಇದನ್ನು ಹೇಳುವುದಕ್ಕಾಗುವುದಿಲ್ಲ. ಅಂತೂ 14 ವರ್ಷ ವಯಸ್ಸಿನವರೆಗೆ ವಿದ್ಯಾಭ್ಯಾಸ ಕೊಡುವುದು ಸರ್ಕಾರದ ಕರ್ತವ್ಯ. ಈ ಅವಧಿಯಲ್ಲಿ ಭೂಗೋಳ ಪರಿಚಯ, ಪ್ರಪಂಚದ ಚರಿತ್ರೆ, ನಮ್ಮ ದೇಶ ದಚರಿತ್ರೆ, ಎಲಿಮೆಂಟರಿ ಸೈನ್ಸ್, ಆರೋಗ್ಯಶಾಸ್ತ್ರ ಇವುಗಳಲ್ಲದೆ ಇನ್ನೇನಾದರೂ ಸಂಗೀತ, ಕಲೆ, ಇನ್ನಾ ವುದಾದರೂ ಕಸಬು—ಇವುಗಳಲ್ಲಿ ಸುಮಾರು ಎಂಟು ವರ್ಷ ಅವಧಿಯಲ್ಲಿ ಶಿಕ್ಷಣ ಕೊಡಬೇಕಾಗುತ್ತದೆ.

2 P.M.

ಈ 8 ವರ್ಷದ ಅವಧಿಯಲ್ಲೇ ಸಾಧ್ಯವಾಗದ ಇರ ತಕ್ಕಂಥಾದ್ದನ್ನು ತಾವು ಈಗ ಹೇಳಿರುವಂತೆ ಈ 5ನೆಯ ವರ್ಷದ ವಯಸ್ಸಿನಲ್ಲೇ ಆಗಲಿ ಅಥವ ಆ ಬಾಲ ಕರ 6ನೆಯ ವರ್ಷದ ವಯಸ್ಸಿನಲ್ಲೇ ಆಗಲಿ ಹೀಗೆ ಅವ ರಿಗೆ ಈ 2 ವರ್ಷಗಳ ಅವಧಿಯಲ್ಲಿ ಇಂಗ್ಲೀಷನ್ನು ಕಲಿ ಸುತ್ತೇವೆಂದು ಹೇಳಿ ಕಲಿಸುವ ಇಂಗ್ಲೀಷಿನಿಂದ ಏನಾ ದರೂ ಪ್ರಯೋಜನವಿದೆ ಎಂದು ನಾನಂತೂ ಖಂಡಿತ ಭಾವಿಸುವುದಿಲ್ಲ. ಹಾಗೆ ಕೇವಲ 2 ವರ್ಷಗಳ ಕಾಲ ದಲ್ಲಿ ಕಲಿಸುವಂಥ ಇಂಗ್ಲೀಷಿನಿಂದೇನು ಪ್ರಯೋಜನ ? ಹಾಗೆ ತಾವು ಆ 2 ವರ್ಷಗಳ ಅವಧಿಯಲ್ಲಿ ಆ ಇಂಗ್ಲೀ ಷನ್ನು ಕಲಿಸುವುದಕ್ಕೆ ಬದಲಾಗಿ ಹಿಂದಿಯನ್ನಾದರೂ ಕಲಿಸಿದರೆ ಅವರು ತಮ್ಮ ನೆರೆಹೊರೆಯವರೊಡನೆ ಬೆರೆ ಯುವುದಕ್ಕಾದರೂ ಒಂದು ಅವಕಾಶ ಉಂಟಾಗು ತ್ತದೆ. ನಾವೀಗ ಇಂಡಿಯನ್ ಯೂನಿಯನ್ನಿಗೆ ಸೇರಿ ದ್ದೇವೆ. ನಾವೆಲ್ಲರೂ ನಮ್ಮ ದೇಶದ, ನಮ್ಮ ಭಾರ ತದ ಕಾನೂನುಗಳನ್ನು ಕಲಿತಿರಬೇಕಾದ್ದು ಅತಿಮುಖ್ಯ. ಹಾಗೆ ನಾವು ಅವುಗಳನ್ನು ಕಲಿಯಬೇಕಾಗಿದ್ದರೆ ನಮಗೆ ನಮ್ಮ ರಾಷ್ಟ್ರಭಾಷೆಯನ್ನು ಕಲಿಯಬೇ ಕಾದ್ದು ಅತಿಮುಖ್ಯ. ಆದುದರಿಂದ ತಾವು ಹುಡುಗ ರಿಗೆ ಆ ಯಾವುದೋ ಒಂದು ಇಂಗ್ಲೀಷ್ ಭಾಷೆಯನ್ನು ಹೇಳಿಕೊಡುವ ಬದಲು ಈ ಹಿಂದಿಯನ್ನಾದರೂ ಕಲಿಸಿ ದರೆ ಅದರಿಂದ ಅವರಿಗೊಂದು ಅನುಕೂಲವಾದೀತು. ಕೇವಲ 3 ವರ್ಷಗಳ ಕಾಲ ಈ ಹಿಂದಿಯನ್ನು ಅಭ್ಯಾಸ ಮಾಡಿದರೆ ಹುಡುಗರು ಹಿಂದಿಯಲ್ಲಿ ಪದವೀಧರರಾಗ ಬಹುದೆಂತಲೂ ಸಹ ನಾನು ಕೇಳಿದ್ದೇನೆ. ಹಾಗೆ ಈ ಹಿಂದಿಯಲ್ಲಾದರೂ ನಮಗೆ ಅಷ್ಟರಮಟ್ಟಿಗೆ ಒಂದು ಜ್ಞಾನೋದಯವಾದರೆ ಅದಾದರೂ ಒಂದು ಪ್ರಯೋ ಜನವಾಯಿತೆಂದೇ ನಾನು ಭಾವಿಸುತ್ತೇನೆ. ಹೀಗೆ ಮಾಡುವುದನ್ನು ಬಿಟ್ಟು ತಾವು 2ವರ್ಷಗಳಲ್ಲಿ ಹುಡುಗ ರಿಗೆ ಇಂಗ್ಲೀಷನ್ನು ಹೇಳಿಕೊಟ್ಟರೆ ಅದರಲ್ಲಿ ಹುಡುಗರಿಗೆ ಎಷ್ಟರಮಟ್ಟಿಗೆ ಜ್ಞಾನೋದಯವಾದೀತು ? ಈ ಅಂಶ ವನ್ನು ಆ ಸಮಿತಿಯವರು ಆಲೋಚನೆಮಾಡಲಿಲ್ಲವೇ ಎಂದು ಪ್ರಶ್ನೆಮಾಡಬೇಕಾಗಿದೆ.

ಶ್ರೀ ಕೆ. ಹನುಮಂತಯ್ಯ.—ಯಾರನ್ನ ?

ಶ್ರೀ ಬಿ. ಹುಚ್ಚೇಗೌಡ.—ಈ ವರದಿಯನ್ನು ತಯಾ ರಿಸಿದವರನ್ನು.

ಶ್ರೀ ಕೆ. ಹನುಮಂತಯ್ಯ.—ಆ ವರದಿಯನ್ನು ಬರೆ ದವರು ನಿಮ್ಮ ಪಾರ್ಟಿಯ ನಾಯಕರು. ನಿಮ್ಮಪಕ್ಷ ದಲ್ಲೇ ಇರತಕ್ಕವರು.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಈ ವರದಿಯನ್ನು ತಯಾರಿಸಿದ್ದು ಛೇರ್ಮನ್ನರು. ಅವರು ಅಲ್ಲಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ತಾವು ಈ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಾರ್ವತ್ರಿಕವಾಗಿ ದೇಶದಲ್ಲಿರತಕ್ಕ ಪ್ರತಿಯೊಬ್ಬ ಬಾಲಕ, ಬಾಲಕಿಯರಿಗೂ ಕಡ್ಡಾಯ ವಾಗಿ ಕೊಡಬೇಕೆಂದು ಹೇಳಿರುವುದರಿಂದ, ಈ ವಿದ್ಯಾ ಭ್ಯಾಸಕ್ಕೆ ತಾವು ಮೊದಲನೆಯ ಪ್ರಾಶಸ್ತ್ಯವನ್ನು ಕೊಡಬೇಕಾಗಿದೆ. ಆದರೆ ದೇಶದಲ್ಲಿ ನಮಗೆ ಬೇಕಾ ದಷ್ಟು ಸಮಸ್ಯೆಗಳಿರಬಹುದು ; ಅವುಗಳಿಲ್ಲವೆಂದು ನಾನು ಹೇಳುತ್ತಿಲ್ಲ. ಅವುಗಳು ಅನೇಕವಿವೆಯೆಂಬು ದನ್ನು ನಾನು ಒಪ್ಪಿಕೊಳ್ಳುತೇನೆ. ಅಷ್ಟೆಲ್ಲಾ ಇದ್ದಾಗ್ಯೂ ಕೂಡ ತಾವು ಈ ಪ್ರಾಥಮಿಕ ವಿದ್ಯಾಭ್ಯಾಸ ವನ್ನು ಬಹಳ ಪ್ರಾಮುಖ್ಯವಾಗಿ ದೇಶದಲ್ಲಿರತಕ್ಕ ಪ್ರತಿ ಯೊಬ್ಬ ವಿದ್ಯಾರ್ಥಿಗಳಿಗೂ ಕೊಡಲೇಬೇಕು. ಇದು ನಿಮ್ಮ ಮುಖ್ಯ ಕರ್ತವ್ಯ ಮತ್ತು ಮೊದಲನೆಯದು ; ಉಳಿದವುಗಳೆಲ್ಲಾ ಮುಂದೆ ಮಾಡತಕ್ಕವುಗಳಾಗಿವೆ. ತಾವು ಯೂನಿವರ್ಸಿಟಿ ವಿದ್ಯಾಭ್ಯಾಸ ಕೊಡುವುದೂ, ಸೆಕೆಂಡರಿ ಎಜ್ಯುಕೇಷನ್ನಿನಲ್ಲಿ ಮಾರ್ಪಾಡು ಮಾಡು ವುದೂ ಮತ್ತು ಉಪಾಧ್ಯಾಯರಿಗೆ ಟ್ರೈನಿಂಗ್‌ಕೊಡು ವುದೂ ಇವೆಲ್ಲಾ ಮುಂದಿನ ಕೆಲಸಗಳು. ಮೊದಲು ಹುಡುಗರಿಗೆ ಓನಾಮವೇ ಬಾರದಿರುವಾಗ, ಇಂಥಾ ವರೇ ವಿಶೇಷವಾಗಿರುವಾಗ, ತಾವು ಬಾಕಿ ವಿಷಯಗ ಳನ್ನು ಮಾಡಿದರೆ ಏನುತಾನೆ ಪ್ರಯೋಜನವಾಗುತ್ತದೆ. ಮುಖ್ಯವಾಗಿ ಜನಸಾಮಾನ್ಯರ ಜೀವನ ಉತ್ತಮಗೊ ಳ್ಳಬೇಕು ; ಅವರ ಜ್ಞಾನಾಭಿವೃದ್ಧಿಯಾಗಬೇಕು ; ಅವರ ಒಂದು standard of living ಉತ್ತಮ ವಾಗಬೇಕು ; ಅವರು ತಮ್ಮ ಮಾನಸಿಕ ವಿಜ್ಞಾನ ವನ್ನು ಹೆಚ್ಚುಮಾಡಿಕೊಳ್ಳಬೇಕು. ಈ ರೀತಿಯಾಗಿ ತಾವುಮಾಡಿದ್ದೇ ಆದಲ್ಲಿ ಆಗ ದೇಶ ಮುಂದಕ್ಕೆ ಬರಲು ಒಂದು ಅವಕಾಶವಾದೀತು. ಹೀಗಿಲ್ಲದೆ ದೇಶದಲ್ಲಿ ಎಲ್ಲೋ ಕೇವಲ ಶೇಕಡ 2ರಷ್ಟು ಅಥವಾ 3ರಷ್ಟು ಜನ ಗಳು ಮಾತ್ರ ವಿದ್ಯಾವಂತರಾದರೆ ಅದರಿಂದ ಯಾರಿ ಗೇನು ಪ್ರಯೋಜನ ? ದೇಶಕ್ಕೇನು ಕ್ಷೇಮವಾದೀತು ?

ಇನ್ನು ತಾವು ಈ ಪ್ರಾಥಮಿಕ ವಿದ್ಯಾಭ್ಯಾಸವನ್ನು ದೇಶಾದ್ಯಂತವೂ ಯೂನಿವರ್ಸಲ್ ಆಗಿ ಮತ್ತು ಕಡ್ಡಾ ಯವಾಗಿ ಜಾರಿಗೆ ತರಬೇಕೆಂದರೆ ಸುಮಾರು ಇದಕ್ಕೆ 800 ಕೋಟಿ ರೂಪಾಯಿಗಳು ಬೇಕಾಗಿರುತ್ತದೆ ಯೆಂದು ಗೊತ್ತಾಗುತ್ತದೆ. ಹೀಗೊಂದು 800 ಕೋಟಿ ರೂಪಾಯಿಗಳ ಅಂದಾಜ ಹಾಕಿಕೊಂಡಿರು ವಾಗ, ನಮ್ಮ ಒಟ್ಟು ಇಂಡಿಯಾ ದೇಶದ, ಎಂದರೆ ಎಲ್ಲಾ stateಗಳ, ವರಮಾನವೂ ಸೇರಿಕೊಂಡು ವರ್ಷಕ್ಕೆ 860 ಕೋಟಿ ರೂಪಾಯಿಗಳಿರುತ್ತದೆಯೆಂದು ಹೇಳುತ್ತಿರುವಾಗ, ಹೀಗೆ ಬರೀ ವಿದ್ಯಾಭ್ಯಾಸ ಒಂದಕ್ಕೆ 800 ಕೋಟಿ ರೂಪಾಯಿಗಳು ಖರ್ಚಾಗಿಹೋದರೆ

(ಶ್ರೀ ಬಿ. ಹುಚ್ಚೇಗೌಡ.)

ಇನ್ನುಳಿದ ಬಾಬುಗಳಿಗೆಲ್ಲಾ ಏನುಮಾಡುವುದು? ಹೀಗೆ ಖರ್ಚುಮಾಡಿ ಇದನ್ನು ಕಾರ್ಯಗತ ಮಾಡಲು ನಿಜವಾಗಿಯೂ ತಮಗೆ ಸಾಧ್ಯವೇ ? ಅಂತೂ ಹೀಗೆ ಒಟ್ಟಿನಲ್ಲಿ ಇಡೀ ಹಿಂದೂಸ್ಥಾನದಲ್ಲಿರತಕ್ಕ ಶಾಲೆಗೆ ಹೋಗುವಂಥ ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸಲು 800ಕೋಟಿ ರೂಪಾಯಿಗಳು ಬೇಕಾಗಿರುತ್ತವೆಂದು ಗೊತ್ತಾಗಿದೆ. ಆದ್ದರಿಂದ ಹೀಗೆ ದುಬಾರಿ ಖರ್ಚಿಗೆ ಅವಕಾಶವಿಲ್ಲದಂತೆ ನಾವು ಈ ಪ್ರಾಥಮಿಕ ಶಾಲೆಯ ಅಭ್ಯಾಸಕ್ಕೆ ಮೊದನೆಯ ಗಮನುವನ್ನು ಕೊಡಬೇಕಾಗಿದೆ.

ತಾವು ಏನು ಹೇಳುತ್ತಿದ್ದೀರೆಂದರೆ, ವರ್ಷ ಒಂದಕ್ಕೆ 500 ಪಾಠಶಾಲೆಗಳಂತೆ 10 ವರ್ಷದಲ್ಲಿ 5,000 ಪಾಠಶಾಲೆಗಳನ್ನು ತೆರೆಯಬೇಕು ಎಂದು. ಆದರೆ ನಾನು ಹೇಳುತ್ತಿರುವುದು, ಹಾಗೆ ಮಾಡುವುದಕ್ಕೆ ಬದಲಾಗಿ ಒಂದೇ ವರ್ಷದಲ್ಲಿ 5,000 ಪಾಠಶಾಲೆಗಳನ್ನು ಪ್ರಾರಂಭ ಮಾಡಿ ಎಂದು. ಇದಕ್ಕಾಗಿ 10 ವರ್ಷಗಳ ಕಾಲ ತಾವು ವರ್ಷಂಪ್ರತಿ 44 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಬದಲು ಒಂದೇ ವರ್ಷದಲ್ಲಿ ಆ ಮೊಬಲಗಿನ ಅರ್ಧದಷ್ಟೇ ದುಡ್ಡಿನಲ್ಲಿ ಒಂದೇ ಸಾರಿಗೆ ಮಾಡಿದರೆ ತಮಗೆ ಇದರಿಂದ ಸುಮಾರು 20 ಲಕ್ಷ ರೂಪಾಯಿಗಳವರೆಗೂ ಖರ್ಚು ಬರಬಹುದು. ಈ ಖರ್ಚಿನಲ್ಲೇ ತಾವು ಆ, 5,000 ಪಾಠಶಾಲೆಗಳನ್ನು ಪ್ರಾರಂಭಿಸಬಹುದು. ಹೀಗೆ ತಾವು ಒಂದೇ ಸಾರ್ತಿಗೆ ಅಷ್ಟೂ ಸ್ಕೂಲುಗಳನ್ನೂ ತೆರೆಯುಫ್ ದಾದರೆ ಆಗ ತಾವು ಸ್ಕೂಲಿಗೊಬ್ಬರು ಉಪಾಧ್ಯಾಯರಿರುವಂತೆ ಮಾಡಿದರೂ ಪರವಾಯಿಲ್ಲ. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ನನ್ನ ಆಕ್ಷೇಪಣೆಯೂ ಸಹ ಇರುವುದಿಲ್ಲ. ತಾವು ಹೀಗೆ ಮಾಡಬೇಕು. ಅದರೆ ತಮ್ಮ ವರದಿಯಲ್ಲಿ ಹೇಳಿರುವುದು ಹಿಂದು ಮುಂದಾದಂತೆ ಕಾಣಿಸುತ್ತಿದೆ.

ತಾವು ಈ ಬಾಬಿನಲ್ಲಿ ಸ್ವಲ್ಪ ಮಟ್ಟಿಗೆ ಖರ್ಚನ್ನು ಕಡಮೆ ಮಾಡಿಕೊಳ್ಳಬೇಕೆಂದರೆ, ಆಗ ತಾವು ಈ ಪಾಠಶಾಲೆಗಳ ಆಡಳಿತವನ್ನು ಆಯಾ ಪಂಚಾಯಿತಿಗಳಿಗೆ ವಹಿಸಿದರೆ ಇದರಿಂದ ನಿಮಗೆ ಕೊಂಚ ಖರ್ಚು ಕಡಮೆಯಾಗಬಹುದು.

ಶ್ರೀ ವಿ. ವೆಂಕಟಪ್ಪ.—ಈ ಹಿಂದೆಯೇ ಅದನ್ನೆಲ್ಲಾ ಅನುಭವಿಸಿ ಆಯಿತಲ್ಲ!

ಶ್ರೀ ಬಿ. ಹುಚ್ಚೇಗೌಡ.—ಹೌದು. ಬೆಕ್ಕಿಗೆ ಬಿಸಿ ಹಾಲನ್ನು ತೋರಿಸಿ, ಪುನಃ ಆದು ಹಾಲಿನ ಸಮೀಪಕ್ಕೆ ಬಾರದಂತೆ ಮಾಡುವ ರೀತಿಯಲ್ಲಿ ಈ ಹಿಂದೆ ಪಂಚಾಯಿತಿಯವರಿಗೆ ಕೊಟ್ಟಿದ್ದರು. ಆದರೆ ತಾವೆಲ್ಲರೂ ಈಗ ಹೇಳುತ್ತಿರುವ ಪ್ರಕಾರ ನಮಗೆಲ್ಲಾ ಸ್ವಾತಂತ್ರ್ಯ ಬಂದಿದೆ. ಹಾಗೆ ಸ್ವಾತಂತ್ರ್ಯ ಲಭ್ಯವಾಗಿರುವುದರಿಂದಲೇ ಈ ದಿವಸ ತಾವು ತಮ್ಮ ತಮ್ಮ ಚುನಾವಣೆಕ್ಷೇತ್ರಗಳಿಂದ ಆರಿಸಿ ಬಂದು ಇಲ್ಲಿ ಮಂತ್ರಿಗಳಾಗಿರುತ್ತೀರಿ. ತಾವು ತಮ್ಮ ತಮ್ಮ ಚುನಾವಣೆಕ್ಷೇತ್ರಗಳಲ್ಲೇ ಇದ್ದುಕೊಂಡು ತಮ್ಮ ಪಂಚಾಯಿತಿಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳತಕ್ಕವರು ಮುಂದೆ ಬಂದು ರಾಜ್ಯಭಾರ ಮಾಡಲು ಅರ್ಹರಾಗಿದ್ದಾರೆಂದರೆ ಅದು ಶುದ್ಧ ಅಭಾಸದ ಮಾತಾಗುತ್ತದೆ. ಹಾಗೆ ನಮ್ಮ ನಮ್ಮ ಪಂಚಾಯಿತಿಗಳನ್ನು ನಾವು ನಡೆಸಿಕೊಳ್ಳಲು ನಮಗೆ ಶಕ್ತಿ ಇರುವುದಿಲ್ಲವೆಂದು ಯಾರಾದರೂ ಹೇಳುವುದಾದರೆ ಅದು ನಾಚಿಗೆ ಗೇಡು.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ತಾವಾದರೇನೋ ಅಂಥ ಪಂಚಾಯಿತಿ ಮಾಡುತ್ತೀರಿ ?

ಶ್ರೀ ಬಿ. ಹುಚ್ಚೇಗೌಡ.—ಹಾಗೆ ಆ ಪಂಚಾಯಿತಿಗಳನ್ನು ಉದಾಸೀನ ಮಾಡಿದ್ದರಿಂದಲೇ ಈಗ ಈ ಪಾಠಶಾಲೆಗಳನ್ನು ನಡೆಸಲು ಇಷ್ಟು ಕಷ್ಟಕ್ಕೆ ಬಂದಿರುವುದು. ಜನರಿಗೆ ಮನಸ್ಸು ಬಂದು ಇದು ನಮ್ಮ ಪಾಠಶಾಲೆ, ಇದನ್ನು ನಾವು ಅಭಿವೃದ್ಧಿಗೆ ತರಬೇಕು, ಇದರಿಂದ ನಮ್ಮ ಜನಾಂಗ ಮತ್ತು ದೇಶ ಮುಂದುವರಿಯಬೇಕು ಎಂಬ ಭಾವನೆಗಳು ಜನರ ಮನಸ್ಸಿನಲ್ಲಿ ಹುಟ್ಟುವಂತೆ ಮಾಡದ ವಿನಃ ತಾವು ಯಾವ ರೀ-ಆರ್ಗನೈಜೇಷನ್ನೇನೇ ತನ್ನಿ ಅಥವಾ ರಿ-ಫಾರಂಸ್ ಗಳನ್ನೇ ತನ್ನಿ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹೀಗೆ ಮಾಡದೆ ತಾವು ಇದನ್ನು ಜಾರಿಗೆ ತರುವುದಾದರೆ ಇದನ್ನು ಕೇವಲ ಎಲ್ಲೋ ತಿಳಿದಿರತಕ್ಕಂಥ ಕೆಲವರಿಗೆ ಮಾತ್ರ ಅವರ ಅಭಿವೃದ್ಧಿಗಾಗಿ ತಂದ ಹಾಗಾಯಿತೇ ವಿನಾ ಇದರಿಂದ ದೇಶಾದ್ಯಂತವೂ ಜನರಿಗೆಲ್ಲಾ ಒಂದು ಅನುಕೂಲವಾಗುತ್ತದೆಂದು ನಾನು ಮಾತ್ರ ಖಂಡಿತ ಒಪ್ಪುವುದಿಲ್ಲ; ಮತ್ತು ಅಂಥ ಒಂದು ನಂಬಿಕೆಯೂ ಸಹ ನನಗೆ ಇದರಲ್ಲಿ ಇಲ್ಲ.

ಹೀಗೆಯೇ ಇದನ್ನು ಇನ್ನೂ ಲಂಬಿಸುತ್ತಾ ಹೋದರೆ, ನಮಗೀಗ ಸಾಕಷ್ಟು ಸ್ಕೂಲುಗಳಿರುವುದಿಲ್ಲ, ಸ್ಕೂಲು ಕಟ್ಟಡಗಳಿರುವುದಿಲ್ಲ. ಅವುಗಳಿಗೆ, ಸರಿಯಾಗಿ ಇರುವ ಪಾಠಶಾಲೆಗಳಿಗಾದರೂ ತಕ್ಕಷ್ಟು ಫರ್ನಿಚರ್ಸ್ ಇತ್ಯಾದಿ ಎಕ್ವಿಪ್‌ಮೆಂಟ್ಸ್‌ಗಳಿರುವುದಿಲ್ಲ, ಜೊತೆಗೆ ನುರಿತ ಉಪಾಧ್ಯಾಯರಿರುವುದಿಲ್ಲ, ಇತ್ಯಾದಿ ಲೋಪದೋಷಗಳನ್ನೆಲ್ಲಾ ಸರಿಪಡಿಸಿ, ಇದಾದನಂತರ ನುರಿತ ಉಪಾಧ್ಯಾಯರನ್ನು ಹೊಂದಿಸಿ, ಅನಂತರ ನಾವು ಈ ಬದಲಾವಣೆಗಳನ್ನು ಜಾರಿಗೆ ತರುವುದೆಂದರೆ, ನೂರು ವರ್ಷಗಳಾದರೂ ಇದು ಸಾಧ್ಯವಾಗದ ಮಾತು. ಅಲ್ಲಿಗೂ ಆಗುವುದಿಲ್ಲ.

ಶ್ರೀ ವಿ. ವೆಂಕಟಪ್ಪ.—ಹಾಗೆ ಎಲ್ಲಿ ಹೇಳಿದೆ ? ಯಾರು ಹೇಳಿದ್ದಾರೆ ?

ಶ್ರೀ ಟಿ. ಮರಿಯಪ್ಪ.—ವರ್ಷ ಒಂದಕ್ಕೆ 2,800 ಜನ ಉಪಾಧ್ಯಾಯರನ್ನು ತರಪೇತು ಮಾಡುತ್ತಾ 10 ವರ್ಷಗಳ ಅವಧಿಯಲ್ಲಿ 28 ಸಾವಿರ ಜನ ನುರಿತಂಥ ಉಪಾಧ್ಯಾಯರನ್ನು ತಯಾರಿಸಬೇಕೆಂದು ಮಾತ್ರ ಹೇಳಿದ್ದಾರೆಯೇ ಹೊರತು, ಹೀಗೆಲ್ಲಾ ಎಲ್ಲಿಯೂ ಹೇಳಿಲ್ಲವಲ್ಲಾ ?

ಶ್ರೀ ಬಿ. ಹುಚ್ಚೇಗೌಡ.—ತಾವು ಹೀಗೆ ಹೇಳುತ್ತೀರಿ. ನಾನು ಕೇಳುತ್ತೇನೆ, ಆ ರೀತಿಯಾಗಿ ಅವರು ಸ್ಕೂಲುಗಳನ್ನು ಪ್ರಾರಂಭಿಸಿಯೇ ಪ್ರಾರಂಭಿಸುತ್ತಾರೆ ಅನ್ನುವುದಕ್ಕೆ ಗ್ಯಾರಂಟಿಯೆಲ್ಲಿದೆ ? ತಾವು ಹಾಗೆ ಉಪಾಧ್ಯಾಯರನ್ನು ತರಪೇತು ಮಾಡಲು 19 ಲಕ್ಷ 69 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಬದಲು ಮೊದಲೇ ಉಪಾಧ್ಯಾಯರನ್ನು ಕೆಲಸಕ್ಕೆ ನೇಮಿಸಿಕೊಂಡುಬಿಡಿ. ಅನಂತರ ಅವರಿಗೆ ತಾವು ಈ ಟ್ರೈನಿಂಗನ್ನು ಕೊಡಿ. ಇದೇ ನನ್ನ ಮುಖ್ಯ ಪಾಯಿಂಟ್. ತಾವು ವರದಿಯಲ್ಲ ಹೇಳಿರುವುದು, ನನ್ನ ಅಭಿಪ್ರಾಯದಲ್ಲಿ, ಹಿಂದು ಮುಂದಾಗಿದೆಯೆಂಬುದನ್ನು ತಿಳಿಸುವ ಉದ್ದೇಶದಿಂದಲೇ ನಾನೀಗ ತಮಗಿಷ್ಟನ್ನೂ ಹೇಳಬೇಕಾಯಿತು. ಅದಕ್ಕಾಗಿ ನಾನು ಒಟ್ಟಿನಲ್ಲಿ ತಮಗೆ ಹೇಳಬೇಕಾಗಿರುವುದಿಷ್ಟು:—ತಾವು 10 ವರ್ಷಗಳಲ್ಲಿ ಮಾಡಬೇಕೆಂದು ಹೇಳಿರುವುದನ್ನು ಒಂದೇ ಸಾರ್ತಿಗೆ ಮಾಡಿಬಿಡಿ ಎಂದು. ತಾವು ಹೇಳುವಂತೆ ಈಗ 4,000 ಜನರಿಗೆ ಏತಕ್ಕೆ ಟ್ರೈನಿಂಗ್ ಕೊಡಬೇಕು ? ಹಾಗೆ ಟ್ರೈನಿಂಗ್ ಕೊಟ್ಟನಂತರವೇ ಪಾಠಶಾಲೆಗಳನ್ನು ಪ್ರಾರಂಭಿಸಬೇಕು ಎಂಬುದಾಗಿ ಏತಕ್ಕೆ ಹೇಳಿದ್ದೀರಿ ? ನಾವೆಲ್ಲರೂ ಇಲ್ಲಿಯು ತನಕ ಯಾವ ರೀತಿ ಕಲಿತುಕೊಂಡು ಬಂದಿದ್ದೇವೆ? ಈಗಿರತಕ್ಕ 16

ಸಾವಿರ ಉಪಾಧ್ಯಾಯರುಗಳಿಗೆ ಸರಿಯಾದ ಟ್ರೈನಿಂಗ್ ಇಲ್ಲದಿದ್ದಾಗ್ಲೂ ಅವರು ಇಲ್ಲಿಯ ತನಕವೂ ಹುಡುಗರಿಗೆ ವಿದ್ಯಾಭ್ಯಾಸ ಮಾಡಿಸುತ್ತಾ ಬಂದಿಲ್ಲವೇನು? ಹೀಗಿರುವಾಗ ಮುಂದಕ್ಕೆ ಮಾತ್ರ ಹೀಗೆ ಟ್ರೈನಿಂಗಾದ ಉಪಾಧ್ಯಾಯರು ಇರಬೇಕೆಂದು ವಾದ ಹೂಡಿರುವುದು ಯಾವ ನ್ಯಾಯ? ತಾವೆಲ್ಲರೂ ಟ್ರೈನಿಂಗ್ ಆದ ಉಪಾಧ್ಯಾಯರ ಕೈಯಲ್ಲೇ ಪಾಠಗಳನ್ನು ಕಲಿತಿಕೊಂಡಿರೇನು? ಹೀಗೆಲ್ಲಾ ಇರುವುದರಿಂದ ನಾನೀಗ ತಮಗೆ ಹೇಳುತ್ತಿರುವುದು, ತಮಗೆ ಬೇಕಾಗಿರುವ ಉಪಾಧ್ಯಾಯರನ್ನು ಟ್ರೈನಿಂಗ್ ಕೊಟ್ಟು ನೇಮಿಸಿಕೊಳ್ಳಬೇಕೆಂದು ಹೇಳುವುದಕ್ಕೆ ಬದಲಾಗಿ ಅವರನ್ನು ಮೊದಲೇ ಕೆಲಸಕ್ಕೆ ಸೇರಿಸಿಕೊಂಡು, ಅನಂತರ ಅವರಿಗೆ ಟ್ರೈನಿಂಗ್ ಕೊಡಿ; ಹಾಗೆ ಮಾಡುವುದನ್ನು ಯಾರೂ ಬೇಡವೆನ್ನುವುದಿಲ್ಲ.

ಈಗ ಇನ್ನೊಂದು ಮುಖ್ಯ ವಿಚಾರವೇನೆಂದರೆ— 'ಮದುವೆ ಆದ ಹೊರತು ಹುಚ್ಚು ಬಿಡುವುದಿಲ್ಲ-ಹುಚ್ಚು ಬಿಡದ ಹೊರತು ಮದುವೆ ಆಗುವುದಿಲ್ಲ' ಎನ್ನುವಂತೆ...

ಶ್ರೀ ವಿ. ವೆಂಕಟಪ್ಪ.—ಯಾರಿಗೆ?

ಶ್ರೀ ಬಿ. ಹುಚ್ಚೇಗೌಡ.—ಯಾರಿಗೆ! To the Members of the Legislature ಗೆ— ಅಗಲೇ ಕೆಲವರು ಸ್ಕೂಲನ್ನು ಕೊಟ್ಟರೂ ಪಾಠಶಾಲೆಗೆ ಬರುವುದಿಲ್ಲವೆಂದು ಹೇಳಿದರು.

ಶ್ರೀ ವಿ. ವೆಂಕಟಪ್ಪ.—ಯಾರು ಬರುವುದಿಲ್ಲವೆಂದು ಹೇಳಿದರು?

ಶ್ರೀ ಬಿ. ಹುಚ್ಚೇಗೌಡ.—ಹುಡುಗರೇ ಬರುವುದಿಲ್ಲವೆಂದು ಹೇಳಿದರು.

Mr. SPEAKER.—Sri Hutche Gowda was an in-patient in the hospital; let him not exert too much.

ಶ್ರೀ ಬಿ. ಹುಚ್ಚೇಗೌಡ—First year ನಲ್ಲಿ ಮೂರು ಲಕ್ಷ ಇದ್ದರೆ fifth year ನಲ್ಲಿ 60 ಸಾವಿರ ಇದ್ದಾರೆ; ಕಾರಣ, ಹುಡುಗರು ಬರಲಿಲ್ಲ ಎಂದು ಹೇಳುತ್ತೀರಿ. ಇದಕ್ಕೆ ಕಾರಣ ಅವರಿಗಿರುವ ಆರ್ಥಿಕ ದುಸ್ಥಿತಿ. ಎಷ್ಟೋ ಹುಡುಗರಿಗೆ ಎರಡು ಹೊತ್ತು ಊಟಕ್ಕೆ ಗತಿಯಿಲ್ಲ, ಇತರ ಮಕ್ಕಳಂತೆ ಬಟ್ಟೆ ಹಾಕಿಕೊಳ್ಳುವುದಕ್ಕೆ ಅವಕಾಶವಿಲ್ಲ, ತಿಂಡಿಗೆ ಅವಕಾಶವಿಲ್ಲ, ಇಷ್ಟೆಲ್ಲಾ ಅನಾನುಕೂಲಗಳಿವೆ. ಆದ್ದರಿಂದ ಸರ್ಕಾರಕ್ಕೆ ಸೂಚಿಸುವುದು, ಸಾಮಾನ್ಯವಾಗಿ ಇಷ್ಟು ಹಣ ವ್ಯಯಮಾಡುವಾಗ ಒಂದು ಹೊತ್ತು ಹುಡುಗರಿಗೆ ತಿಂಡಿ ಕೊಡಬೇಕು ಎಂದು. ಏಕೆಂದರೆ ಗ್ರಾಮಾಂತರಗಳಲ್ಲಿ ಬಹಳ ಬಡತನವಿದೆ. ಯಾರು ಬಡವರೆಂದು ಗೊತಾಗುತ್ತದೆಯೋ ಅವರ ಮಟ್ಟಿಗಾದರೂ ಸ್ವಲ್ಪ ತಿಂಡಿ ಕೊಡುವ ಏರ್ಪಾಡು ಮಾಡಿದರೆ ಉತ್ತೇಜನ ಕೊಟ್ಟಂತಾಗುತ್ತದೆ, ಅವರನ್ನು ಕಾಪಾಡಿದಂತಾಗುತ್ತದೆ. ಮುಂದಿನ ಜನಾಂಗವಾಗುವ ಬಾಲಕರ ಹಿತ ನೋಡಿಕೊಳ್ಳುವುದು ಬಹಳ ಮುಖ್ಯವಾದುದು.

ಈಗ ಇತರೆ ದೇಶಗಳನ್ನು ನೋಡಿದರೆ, ಮದರಾಸಿನಲ್ಲಿ ಲೆಕ್ಕ ನೋಡಿದರೆ, 38 ಸಾವಿರ ಸ್ಕೂಲುಗಳಿವೆ. ಅವರು ನಮಗಿಂತ ಹೆಚ್ಚಾಗಿ ಗ್ರಾಮಗಳಲ್ಲಿ ಸ್ಕೂಲುಗಳನ್ನು ಸ್ಥಾಪಿಸಿದ್ದಾರೆ. ಪರ್ಸೆಂಟೇಜ್ ತೆಗೆದುಕೊಂಡರೆ ನಮಗಿಂತಲೂ ಕೂಡ ಅವರು ಮುಂದುವರಿದಿದ್ದಾರೆ. ಸರಿಯಾಗಿ ಸ್ಕೂಲಿಲ್ಲದಿರುವ ಗ್ರಾಮಗಳು ಸುಮಾರು 6-7 ಸಾವಿರ ಮಾತ್ರ ಇರಬಹುದು.

ಶ್ರೀ ಟಿ. ಮರಿಯಪ್ಪ.—17 ಸಾವಿರ.

ಶ್ರೀ ಬಿ. ಹುಚ್ಚೇಗೌಡ.—ಇರಬಹುದು, ಅವರು ಈಗ ಸುಮಾರು 9 ಕೋಟಿ ರೂಪಾಯಿಗಳನ್ನು ಪ್ರೈಮರಿ ಸ್ಕೂಲುಗಳಿಗೆ ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲೆಷ್ಟು ಎಂದು ನೋಡಿದರೆ, ಸುಮಾರು ಒಂದು ಕೋಟಿ ಹತ್ತು ಲಕ್ಷ ಖರ್ಚಾಗಬಹುದು. ಅಲ್ಲೂ ಕೂಡ ಒತ್ತಾಯ ಶಿಕ್ಷಣಕ್ಕೆ 15 ಕೋಟಿ ರೂಪಾಯಿಗಳಾಗಬೇಕು. ಅದೇ ಧಾಮಾಷಾ ಪ್ರಕಾರ ನಾವೂ ಮಾಡುವುದಾದರೆ, ಒಂದು ಕೋಟಿ 20 ಲಕ್ಷದ ಜೊತೆಗೆ ಇನ್ನೂ 30 ಲಕ್ಷ ಖರ್ಚು ಮಾಡಿದರೆ ದೇಶದಲ್ಲಿರುವ ಪ್ರತಿಯೊಂದು ಊರಿಗೂ ಸ್ಕೂಲು ಕೊಡಬಹುದು. 14 ಸಾವಿರ ಸ್ಕೂಲುಗಳನ್ನೂ ಕೂಡ ಒಂದೇಸಲ ಉತ್ತಮಪಡಿಸಬೇಕೇ ಹೊರತು ಕೊಂಚ ಕೊಂಚವಾಗಿ ಮಾಡಬಾರದು. ಎಲ್ಲಿ ಸ್ಕೂಲಿಲ್ಲವೋ ಅಲ್ಲಿಗೆ ಹೆಚ್ಚು ಗಮನ ಕೊಟ್ಟು ಸ್ಕೂಲನ್ನು ಒದಗಿಸಬೇಕು.

ಈಗ ಒಟ್ಟು ಸ್ಕೂಲುಗಳಿಗೆ ಹೋಗುವವರ ಸಂಖ್ಯೆ 22½ ಲಕ್ಷ ಎಂದು ಹೇಳಿದ್ದಾರೆ. ಅದರಿಂದ 12 ವರ್ಷ ವಯಸ್ಸಿನೊಳಗಿರುವ ಮಕ್ಕಳು 14 ಲಕ್ಷ 80 ಸಾವಿರ. 6 ಲಕ್ಷ ಮಾತ್ರ ಸ್ಕೂಲಿಗೆ ಹೋಗುತ್ತಿದ್ದಾರೆ. ಇನ್ನೂ 7.9 ಲಕ್ಷ ಸ್ಕೂಲಿಗೆ ಹೋಗಬೇಕಾಗಿದೆ. ಇದರ ಜೊತೆಗೆ 14 ವರ್ಷ ವಯಸ್ಸಿನ ಹುಡುಗರನ್ನು ಲೆಕ್ಕ ಹಾಕಿದರೆ ಇನ್ನೂ 2½ ಲಕ್ಷ ಹುಡುಗರು ಜಾಸ್ತಿಯಾಗುತ್ತಾರೆ. ಒಟ್ಟು 13 ಲಕ್ಷ ಹುಡುಗರನ್ನು ಹೊಸದಾಗಿ ಸ್ಕೂಲಿಗೆ ಸೇರಿಸಬೇಕಾಗಿದೆ. ಈ 13 ಲಕ್ಷಕ್ಕೆ ಕೂಡ ಓನಾಮ ಕಲಿಯುವುದಕ್ಕೆ ಅವಕಾಶ ಮಾಡಬೇಕು.

ಆಮೇಲೆ ಮೂರು ವರ್ಷದಿಂದ ಆರು ವರ್ಷಗಳವರೆಗೆ ಬಹಳ ಮುಖ್ಯವಾದ ಕಾಲ. ಅದರಲ್ಲೂ ಗ್ರಾಮಾಂತರಗಳ ಜನರಿಗೆ ಇಂಥ ವಯಸ್ಸಿನಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಆರ್ಥಿಕ ದುಸ್ಥಿತಿಯಿಂದ ಅನಾನುಕೂಲವಾಗಿದೆ, ಮಕ್ಕಳಿಗೆ ಬೇಕಾದ ಬಟ್ಟೆ ಬರೆ, ಆಹಾರ ಒದಗಿಸಲು ಕಷ್ಟವಾಗಿದೆ. ಆ ಮಕ್ಕಳು ಯಾರೂ ದಿಕ್ಕಿಲ್ಲದೆ ಮೂರು ವರ್ಷ ಕಾಲ ಕಳೆಯಬೇಕು. ದೊಡ್ಡ ದೊಡ್ಡ ಪಟ್ಟಣವಾಸಗಳಲ್ಲಿರುವ ಹಾಗೆ ಶಿಶು ವಿಹಾರ ಅಥವಾ ಇತರ ಸೌಲಭ್ಯಗಳು ಗ್ರಾಮಾಂತರಗಳಲ್ಲಿಲ್ಲ. ಹಳ್ಳಿಯವರು 10-12 ರೂಪಾಯಿ ಕೊಟ್ಟು ಓದಿಸಲು ಶಕ್ತರಲ್ಲ. ಆದ್ದರಿಂದ ಅವರಿಗೆ ಅಗತ್ಯವಾದ ಸ್ಕೂಲನ್ನು ಏರ್ಪಡಿಸುವುದನ್ನು ಪಂಚಾಯಿತಿ ಮತ್ತು ಲೋಕಲ್ ಬಾಡೀಸ್‌ಗೆ ವಹಿಸಿದೆ. ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡ್ ಅಥವಾ ಪಂಚಾಯಿತಿ ಮುಂತಾದ ಸಂಸ್ಥೆಗಳಿಗೆ ಇದರ ಭಾರವನ್ನು ವಹಿಸಲು ಶಕ್ತಿ ಬರುವವರೆಗೆ, ಸರ್ಕಾರದವರೇ ಇದನ್ನು ತೆಗೆದುಕೊಳ್ಳುವವರೆಗೆ ಆ ಸಂಸ್ಥೆಗಳಿಗೆ ಸ್ವಲ್ಪ ಗ್ರಾಂಟು ಕೊಟ್ಟು ಮೂರರಿಂದ ಆರುವರ್ಷಗಳವರೆಗೆ ಮಕ್ಕಳಿಗೆ ಸರಿಯಾದ ಒಂದು ತಿಳಿವಳಿಕೆ, ಆರೋಗ್ಯ, ನಡೆ ನುಡಿ ವಗ್ಯೈರೆಗಳಲ್ಲಿ ಶಿಕ್ಷಣ ಕೊಡಲು ಅವಕಾಶ ಮಾಡಬೇಕು; ಇದು ಅತಿ ಮುಖ್ಯವಾದುದು. ಈ ವಯಸ್ಸಿನಲ್ಲಿ ಸರಿಯಾದ ವಿದ್ಯಾಭ್ಯಾಸ ಕೊಡಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಆಮೇಲೆ ಮಕ್ಕಳಿಗೆ ಕಸುಬು ಕಲಿಸುವ ವಿಚಾರ ಪ್ರೈಮರಿ ವಿದ್ಯಾಭ್ಯಾಸದ ಕಾಲದಲ್ಲಿ ಅಷ್ಟಾಗಿ ಕಸಬಿನಿಂದ ಸಹಾಯವಾಗುವುದಿಲ್ಲ. ಹುಡುಗರಿಗೆ ಆಟದಿಂದ ಕಲಿಸಬೇಕು. ಕಸಬನ್ನು ಕಲಿಸುವಾಗ ಮಾಡಿಸಬೇಕೆಂದರೆ ಕಷ್ಟ. ಒಂದುವೇಳೆ ಕಸುಬು ಕಲಿಸಬೇಕಾದರೆ ನೋಡಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಬೇಕೇ ಹೊರತು ಕಸುಬು ಕಲಿಸುವುದಕ್ಕೆ ಹೋಗಿ, ಬಡಗಿ ಕೆಲಸ, ಕಮ್ಮಾರನ ಕೆಲಸ, ಕುಂಬಾರನ ಕೆಲಸ ಮಾಡಬೇಕು ಎಂದು ಹೇಳಿದರೆ ಅದು ಸಾಧ್ಯವಿಲ್ಲ. ಅಂಥ ದೊಡ್ಡ ದೊಡ್ಡ ಕೆಲಸ ಮಾಡಿಸಬಾರದು. ತಿಳಿವಳಿಕೆ, ಜ್ಞಾನ ಬರುವುದಕ್ಕೆ ಎಷ್ಟು ಬೇಕೋ ಅಷ್ಟು

(ಶ್ರೀ ಬಿ. ಹುಚ್ಚೇಗೌಡ.)

ಮಾಡಬೇಕು, ಅದೂ ಕೂಡ ಆಟದ ರೂಪದಲ್ಲಿ ಮಾಡಬೇಕು. ಅದು ಬಿಟ್ಟು ಕಡ್ಡಾಯ ಮಾಡುವುದು ಸರಿಯಲ್ಲ.

ಇಷ್ಟು ಹೇಳಿ ನಾನು ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ತಿಳಿಸುವುದು, ಮೊದಲನೆಯದಾಗಿ ಈಗ ಎಲ್ಲಿ ಸ್ಕೂಲಿಲ್ಲವೋ ಅಲ್ಲಿಗೆ ಈ ವರ್ಷ ಸುಮಾರು 2 ಸಾವಿರ ಸ್ಕೂಲನ್ನು ಮುಂಜೂರುಮಾಡಿ ಮುಂದಿನ ವರ್ಷ 2 ಸಾವಿರ ಮಾಡಿ ಹೀಗೆ 4 ಸಾವಿರ ಸ್ಕೂಲುಗಳನ್ನು 2 ವರ್ಷಗಳಲ್ಲಿ ತೆಗೆದು ತಮ್ಮ ಸುಧಾರಣೆಯನ್ನು ಯಾವ ರೀತಿ ಮಾಡಬೇಕೋ ಆ ರೀತಿ ಪ್ರೈಮರಿ ಸೆಕ್ಷನ್‌ನಿಂದ ಪ್ರಾರಂಭಿಸಬೇಕು. ಹಣವಿದ್ದರೆ ಮುಂದಕ್ಕೂ ಇದನ್ನು ಮುಂದುವರಿಸಬಹುದು. ಆಮೇಲೆ ಈ ವಿದ್ಯಾಭ್ಯಾಸ ಕಡ್ಡಾಯವಾಗಿ ನೀಡಬೇಕಾದ್ದು ಇಂಡಿಯಾ ಸರ್ಕಾರದ ಕರ್ತವ್ಯ. ಅವರು ಪೂರ್ಣವಾಗಿ ಈ ಖರ್ಚನ್ನು ಒಪ್ಪಿಕೊಳ್ಳತಕ್ಕದ್ದು ನ್ಯಾಯವಾಗಿದೆ. ಏಕೆಂದರೆ ನಮ್ಮ ದೇಶದಿಂದ ಸುಮಾರು 10-11 ಕೋಟಿ ರೂಪಾಯಿಗಳು ವರಮಾನ ತೆರಿಗೆ ಮತ್ತು ಸೆಂಟ್ರಲ್ ಎಕ್ಸೈಜ್‌ನಿಂದ ಅವರಿಗೆ ಹೋಗುತ್ತಿದೆ. ಸದ್ಯಕ್ಕೆ 3½ ಕೋಟಿ ರೂಪಾಯಿಗಳು ಬಂದರೂ ಕೆಲವು ವರ್ಷಗಳಲ್ಲಿ ಅದು ಕಡಮೆಯಾಗುತಲ್ತ ಬಂದು ನಿಂತುಹೋಗುತ್ತದೆ. ಮುಂದೆ ವಿದ್ಯಾಭ್ಯಾಸದ ಖರ್ಚು ಜಾಸ್ತಿಯಾಗುವುದರಿಂದ 14 ವರ್ಷಗಳವರೆಗೆ ಇರುವ ಕಡ್ಡಾಯ ವಿದ್ಯಾಭ್ಯಾಸವನ್ನು ಮಾಡಿಸುವ ಜವಾಬ್ದಾರಿಯನ್ನು ನಮ್ಮಿಂದ ಅವರು ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಹಾಗೆ ಮಾಡಿಲ್ಲ. ಹೊಸದಾಗಿ ಹಣ ಕಾಸಿನ ವಿಲೀನೀಕರಣವಾದಮೇಲೆ ನಮ್ಮ ದೇಶದಲ್ಲಿರುವ ಅನೇಕ ಆದಾಯದ ಬಾಬುಗಳು ಅವರಿಗೆ ಸೇರಿದ್ದರಿಂದ ಸರಿಯಾಗಿ ಈ ಇಲಾಖೆ ನಡೆಸುವ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳದೆ ಇರುವುದರಿಂದ ಈಗಲಾದರೂ 14 ವರ್ಷಗಳವರೆಗೆನಡೆಯುವ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ತೆಗೆದುಕೊಂಡು ಅವರು ನಡೆಸುವಂತೆ ಒತ್ತಾಯ ಮಾಡಬೇಕೆಂದು ಹೇಳುತ್ತೇನೆ.

Sri SYDNEY A. THOMAS (Nominated).—Mr. Speaker, Sir, Burke's famous dictum that " the State without the means of change is without the means of its own conservation" is as true of educational reforms which we now discuss as it is true with political and even social reform. So, it is refreshing to find that the Government of Mysore, sensing a need for a change for a reform, for a re-orientation in the system of education, went forward and constituted a committee for this purpose. Both the Committee and the Government, I feel, are to be congratulated for the enthusiasm and alacrity with which they addressed themselves to the task, for within the short space of three months, they placed in our hands a comprehensive and detailed report. I do not intend to go into all the salient features of the report. In fact, I hesitate to give an opinion on the recommendations of experts. Moreover, I must confess I am guilty of not being fully aware of the pattern of education in rural parts. So, I shall confine myself to one or two aspects which strike me.

Education in Mysore, during the last quarter century and more, has shown good progress, if not spectacular then at least noteworthy. But this progress has been mainly in the sphere of expansion of institutional facilities, and while this may be a laudable accomplishment, in the process the qualitative factor has to some extent been neglected.

Again the criticism has been levelled, and not without justification, that too much emphasis has been placed on the academic side, and too little emphasis placed on the practical side, with the result that education has suffered as a whole. This is indeed serious, and so it is a matter for much gratification to note that the theme of education with a vocational bias runs throughout the Report on Reforms, and the committee has offered some very practical suggestions to effect the change-over from the present conservatively academic type of education.

The introduction of a pre-vocational bias implies the permeation of the entire system of education by a system of craft work, practical training and manual dexterity. No education can completely educate the total personality of a child if the arts and the crafts and the intelligent training of practical aptitudes fail to find their proper place in our educational system. The practical advantages are obvious, and must necessarily follow. However, I do feel that the crux of the problem is now to make this desirable change and yet observe a careful sense of proportion or balance between the academic and vocational aspects, so that the cleverer students may find a wider scope for their talents and that those who are comparatively dull at book work, and often lose heart, may have suitable opportunities for learning manual dexterity and that their minds may be awakened through practical

activities. Again the system must not be too rigid and children made to fit into it, for like the Procrustean bed in the Greek legend they may be strained or maimed in the process. So it will be the duties of teachers and parents to carefully study the individualities of each child watching its inclinations and aptitudes.

Education has been described as a "preparation for life"; more recently it has been described as a "participation in life". It is now generally admitted that a good education must enable a child to earn a suitable and sufficient livelihood so as to ensure freedom from want. In this context the real problem is to find suitable employment for school-leavers who do not desire to pursue higher education, and the percentage in this category is always necessarily large. In the past, and for that matter in the present as well, the majority of school-leavers merely drift to any jobs that may be available. In many cases neither the pupils nor the parents themselves appear to have any predelictions in the matter, with the result that force of circumstance decides what form of employment a pupil takes up. A boy who may be brilliant on the mechanical side is often found to be a quill driver in the Secretariat—a real misfit. I feel that this important aspect has not been given consideration by the Reforms Committee, and I would here recommend that all High Schools appoint a member of the Staff as a Careers Master. In smaller schools the Principal or Head Master will probably have to undertake the duty himself. It will be his responsibility to acquaint himself with all avenues of employment. He will be required to make a careful study of the pupils themselves so as to ensure that Square pegs are not fitted into round holes, and to get into touch with parents to enlist their support and co-operation. He will also have to closely liaise with local employment bureaus, and business and industrial houses, to be acquainted with the openings they can provide.

In fact we must agree with the opinion expressed by the Sargent Scheme that the employment bureau is an essential adjunct to any educational scheme.

I now wish to refer to the niggardly and inverted attitude by the Government which has been characteristic of the lot and the treatment of teachers—not only by the Mysore Government, but generally throughout the country.

Though the Committee on Reforms has made a protracted reference to the training, employment conditions and prospects of teachers, I still feel that not enough attention has been paid to them, and I consider that another Committee should be constituted to attend to this most important aspect. The Education Act of 1944 now on the statute book of the United Kingdom has opened up a new era for teachers there. It lays down exactly what a teacher can expect, so much so that in England people do not take up the teaching profession only as a means of livelihood, but dedicate themselves to the education of youth as a vocation.

Sir, the teaching profession has been described as "the most responsible, the least advertised, the worst paid and the most richly rewarded profession in the world". Again it has been said that "Education is an honourable profession but a poor trade".

Sri J. MOHAMED IMAM.—The teacher is sure of a place in the heavens!

Sri SYDNEY A. THOMAS.—Probably so, Sir. However, much of these definitions I do not wish to alter but the labourer is worthy of his hire, and so far the hire has not been worthy of the labourer.

Teachers are an important, in fact one of the most important factors in nation building. If we accept this axiom, then there must be no delay or temporising in the matter of the amelioration of the lot of teachers. In fact the entire structure of Educational Reform depends on the contented lot of teachers, and so long as we do not provide for their betterment, so long must all the recommendations naturally remain a pious hope.

The question of finance is fundamental to all or most of the recommendations contained in the report. As yet no reply has been forthcoming

(Sri SYDNEY A. THOMAS.)

from Government as to how they are going to find the means to financially implement the scheme. Probably we shall have to go again with the beggar's bowl to the Centre, and assistance may only be forthcoming so far as Primary education is concerned—we cannot expect any more.

The writing on the wall is very clear. Unless we can find the means of financing the scheme ourselves, then, as some one remarked in Kolar the other day, the entire report would be consigned to the limbo of oblivion. I would go further and say that it would go into the Mysore archives to remain there as a testimony of the enthusiasm and zeal with which the Hanumanthaiya Government went forward in the cause of Education, only to be frustrated by the want of not only money, but by a lack of realism by failing to understand that misconceived policies, such as prohibition, thwarted the progress of Education. I am not a politician, I have no political ideas in the fire when I sincerely advise you to scrap your prohibition policy. Sir, prohibition is being given precedence over education. Let not future generations. posterity, and history, record that the Government of Mysore gave precedence to prohibition over education. It would be a real tragedy.

2-30 P.M.

Already in trying to find money for education, I find that the Aided Schools Grants have been cut by 10 per cent in 1952-53. Within the scope of this cut, they have brought in the Anglo-Indian Schools of the Civil Station, Bangalore, when there is a specific guarantee in the Constitution under article 337 that these grants will not be touched for the first three years after the commencement of the Constitution. I have taken up this matter with the Department of Education, but as yet I have not had a satisfactory reply and the matter is pending, with the result that the cut is still there.

I now wish to make a very special and pointed reference to paragraph 40 on page 129 of the Report and with your permission Mr. Speaker, I wish to read:

> "Doubts and anxieties have been expressed about the future of the Anglo-Indian schools which have been teaching through the medium of English, if the policy of the Regional Language as the medium of instruction were to become a universal, unexceptionable policy. We are of the opinion that the change-over to the new pattern should not by any means be allowed to create hardships so that all schools may fall into the general pattern smoothly, and gradually."

These doubts and anxieties are very very real, and the Anglo-Indian Community and the Heads of Anglo-Indian Schools are very seriously perturbed over these recommendations. Under article 30 (1), all minorities, whether based on religion or language, shall have the right to establish and administer educational institutions of their choice. The Anglo-Indian community is a minority based on language and shall have the right to establish and administer schools of their choice which in turn means that they shall have the right to teach in their mother tongue. Their mother-tongue is English. I am in a position to know, when that article 30 was on the constitutional anvil, Mr. Frank Anthony, Leader of the Anglo-Indian Community in the Constituent Assembly, sought to move an amendment that after the word "choice" the words "shall teach in the medium of the mother-tongue" be added. Probably the Chief Minister who was then a Member of the Constitutent Assembly can bear testimony to this. At that time, Pandit Jawaharlal Nehru intervening in the debate, said, that the amendment was redundant as 'choice' obviously meant choice and a minority such as the Anglo-Indians would naturally choose to teach in their mother-tongue which was English. As such Sir, I feel that this particular recommendation in respect of the medium of instruction in Anglo-Indian Schools is inconsistent with article 30 and I should

like a categorical assurance, a Ministerial assurance on the floor of this House that the recommendations in respect of this particular paragraph will not be implemented.

I do not wish to say much Sir. But all in all, I feel that the Report on the Educational Reforms is a very good one. It has come in for much criticism much of which is unwarranted. But as I already said, I hesitate to give an opinion where experts have made their recommendations. The Committee has co-ordinated the many facts of Mysore's educational set up and have drawn their inferences and made their recommendations remarkably well. I feel that like the Five-Year Plan, the Educational Report and Reforms should be above party politics and internal bickerings. I think we should give it a fair trial and a Committee should be set up to watch especially that aspect of the Reform regarding academic *cum* vocational training so that we may proceed on proper lines.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ - ಆನೇಕಲ್).— ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ತಮ್ಮ ಅಮೋಘ ಅನುಭವ ಮತ್ತು ಜ್ಞಾನದ ಫಲವಾಗಿ ತಯಾರಿಸಿರತಕ್ಕ ಈ ವರದಿಯು ನಮ್ಮ ಹಸ್ತಗತವಾಗಿದೆ. ಈ ವರದಿಯಲ್ಲಿ ಸಂಸ್ಥಾನದಲ್ಲಿರತಕ್ಕ ವಿದ್ಯಾಭ್ಯಾಸದ ನ್ಯೂನತೆಗಳ ಬಗ್ಗೆ ಅನೇಕ ಉಪಯುಕ್ತವಾದ ಸಲಹೆಗಳನ್ನು ಮತ್ತು ಮುಂದಿನ ವಿದ್ಯಾಭ್ಯಾಸ ಯಾವ ರೀತಿ ಮಾರ್ಪಾಡಾಗಬೇಕು ಎಂಬ ಬಗ್ಗೆ ಕೂಡ ಸುಧಾರಣೆಗಳನ್ನು ನಮ್ಮಮುಂದೆ ಇಟ್ಟಿದ್ದಾರೆ. ಈ ಸುಧಾರಣೆಯು ಪುಸ್ತಕ ಸುಮಾರು 500 ಪುಟಗಳವರೆಗೂ ಇದೆ. ಇದರಲ್ಲಿ ದೀರ್ಘ ಭಾಷಣ ಮಾಡಿ ಪ್ರತಿಯೊಂದು ಅಂಶವನ್ನೂ ವಿಮರ್ಶಿಸಿ ತಿಳಿಸುವುದು ಅಸಾಧ್ಯವೇ ಸರಿ. ಆದರೆ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸದಲ್ಲಿ ಕೆಲವು ಮಾರ್ಪಾಟುಗಳನ್ನು ಬಹಳ ಚನ್ನಾಗಿ ಮಾಡಿದ್ದಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಪೂರ್ವದಿಂದಲೂ ಕೂಡ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಟ್ಟು ಅದರ ಬಗ್ಗೆ ಆಸಕ್ತಿ ವಹಿಸಿದುದರ ಪರಿಣಾಮವಾಗಿ ಇಂದು ಸಂಸ್ಥಾನದಲ್ಲಿ ವಿದ್ಯೆ ಕಲಿಯತಕ್ಕಂಥ ಪ್ರಾಥಮಿಕ ಪಾಠಶಾಲೆಗೆ ಹೋಗತಕ್ಕ ಹುಡುಗರ ಪೈಕಿ ಶೇಕಡ 60ರಷ್ಟು ಜನ ವಿದ್ಯಾವಂತರಾಗಿದ್ದಾರೆ. ಇದು ನಮಗೆ ಸಂತೋಷದ ವಾರ್ತೆಯೇ ಸರಿ. ಸಂಸ್ಥಾನಾಮುಳೆ ಪ್ರತಿಯೊಂದುಡಿಸ್ಟ್ರಿಕ್ಟಿನ ಒಂದೊಂದು ತಾಲ್ಲೂಕಿನಲ್ಲೂ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಆಚರಣೆಗೆ ತಂದುದರ ಫಲವಾಗಿ ಆ ತಾಲ್ಲೂಕುಗಳಲ್ಲಿ ಶೇಕಡ 83ರಷ್ಟು ಬಾಲಕ, ಬಾಲಕಿಯರು ಪ್ರಾಥಮಿಕ ಪಾಠಶಾಲೆಯಲ್ಲಿ ಕಲಿಯತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಇಡೀ ಸಂಸ್ಥಾನವನ್ನು ಗಮನಿಸಿದರೆ ಶೇಕಡ 60ರಷ್ಟು ಈಗಿರತಕ್ಕ ವಿದ್ಯಾಭ್ಯಾಸದ ಪದ್ಧತಿಯಿಂದಲೇ ವಿದ್ಯಾವಂತರಾಗಿದ್ದಾರೆ. ಇನ್ನು ಮುಂದೆ 6 ವರ್ಷದಿಂದ 14 ವರ್ಷದವರೆಗೆ ಪ್ರತಿಯೊಬ್ಬ ಬಾಲಕ, ಬಾಲಕಿಯರೂ ವಿದ್ಯಾವಂತರಾಗಲೇಬೇಕು ಎಂಬ ನಮ್ಮ ರಾಜ್ಯಾಂಗಕ್ಕನುಸಾರವಾಗಿ ವಿದ್ಯಾವಂತರಾಗಬೇಕಾದ ಹುಡುಗ, ಹುಡುಗಿಯರ ಸಂಖ್ಯೆ-ಎಂದರೆ ಸುಮಾರು 14,90,000 ಜನ - ಇಷ್ಟು ಜನ ಬಾಲಕ, ಬಾಲಕಿಯರಿಗೆ ವಿದ್ಯಾಭ್ಯಾಸವನ್ನು ಕೊಡಬೇಕಾಗುತ್ತದೆ. 15,000 ಪ್ರಾಥಮಿಕ ಶಾಲೆಗಳನ್ನು ತೆರದದ್ದೇ ಆದರೆ ಈ 14 ಲಕ್ಷದ 90,000 ಜನ ಬಾಲಕ, ಬಾಲಕಿಯರಿಗೆ ವಿದ್ಯಾಭ್ಯಾಸ ಕೊಡಲು ನಮಗೆ ಅವಕಾಶವಾಗುತ್ತದೆ. ಇಷ್ಟು ಪಾಠಶಾಲೆಗಳನ್ನು ತೆರೆಯುವುದಾದರೆ ಎಷ್ಟು ಮಂದಿ ಉಪಾಧ್ಯಾಯರುಗಳು ಬೇಕು; ಅದಕ್ಕೆ ಖರ್ಚು ಎಷ್ಟಾಗುತ್ತದೆ ಎಂಬುದರ ಕಡೆಗೆ ನಮ್ಮ ಗಮನವನ್ನು ಸ್ವಲ್ಪ ಹೊರಳಿಸೋಣ. ಈಗ ಸಂಸ್ಥಾನದಲ್ಲಿ ಒಟ್ಟು ಇಷ್ಟು ಪಾಠಶಾಲೆಗಳನ್ನು ತೆರೆಯುವುದಾದರೆ 49,600 ಮಂದಿ ಉಪಾಧ್ಯಾಯರುಗಳು ಬೇಕಾಗುತ್ತಾರೆ. ಈಗ ಸಂಸ್ಥಾನದಲ್ಲಿರತಕ್ಕ ಉಪಾಧ್ಯಾಯರುಗಳ ಸಂಖ್ಯೆ 21,200 ಮಾತ್ರ. ಅಂದಮೇಲೆ 28,400 ಮಂದಿ ಉಪಾಧ್ಯಾಯರುಗಳನ್ನು ನಾವು ನೇಮಕಮಾಡುವುದಾದರೆ ಮಾತ್ರ ಈ 15 ಸಾವಿರ ಪಾಠಶಾಲೆಗಳಲ್ಲೂ ಕೂಡ ಉಪಾಧ್ಯಾಯರಿದ್ದು ವಿದ್ಯಾವ್ಯಾಸಂಗಕ್ಕೆ ತಕ್ಕ ಸೌಕರ್ಯ ಒದಗಿಸಿದಂತಾಗುತ್ತದೆ. ಆ ರೀತಿ ಮಾಡುವುದಾದರೆ, ಮೊದಲನೆ ಒಂದು ವರ್ಷಕ್ಕೆ 500 ಮಂದಿ ಉಪಾಧ್ಯಾಯರು ನಿವೃತ್ತರಾಗುತ್ತಾರೆ ಎಂದು ಲೆಕ್ಕಹಾಕಿಕೊಂಡರೂ 2·2 ಲಕ್ಷ ರೂಪಾಯಿಗಳನ್ನು ನಿವೃತ್ತರಾಗತಕ್ಕ ಉಪಾಧ್ಯಾಯರುಗಳಿಗೆ ಒದಗಿಸಬೇಕಾಗುತ್ತದೆ. ಮೊದಲನೆ ವರ್ಷದಲ್ಲಿ ಹೊಸದಾಗಿ ತೆಗೆದುಕೊಳ್ಳತಕ್ಕ 2,800 ಮಂದಿ ಉಪಾಧ್ಯಾಯರುಗಳಿಗೆ 33·6 ಲಕ್ಷರೂಪಾಯಿ ಖರ್ಚಾಗುತ್ತದೆ. ಈ ರೀತಿ ಮೊದಲನೆ ಒಂದು ವರ್ಷದಲ್ಲಿ 35.8 ಲಕ್ಷ ರೂಪಾಯಿಗಳಷ್ಟು ಒದಗಿಸಬೇಕಾಗುತ್ತದೆ. ಇದೇ ರೀತಿ ಎರಡನೇ ವರ್ಷದಲ್ಲಿ 500+500=1,000 ಶಾಲೆಗಳನ್ನು ಹೆಚ್ಚಿಸಬೇಕಾಗುತ್ತದೆ. ಅದಕ್ಕೆ 67.2 ಲಕ್ಷ ರೂಪಾಯಿಗಳ ರೆಕರಿಂಗ್ ಮತ್ತು 4·4 ಲಕ್ಷ ರೂಪಾಯಿಗಳ ನಾನ್ ರೆಕರಿಂಗ್ ಈ ರೀತಿ ಒಟ್ಟು 71·6 ಲಕ್ಷ ರೂಪಾಯಿಗಳಷ್ಟು ಹಣವನ್ನು ಉಪಾಧ್ಯಾಯರುಗಳಿಗೆ ನಾವು ವೆಚ್ಚಮಾಡಬೇಕಾಗುತ್ತದೆ. ಆ ಹಣವನ್ನು ಒದಗಿಸಲು ಯಾವ ಪ್ರಯತ್ನವು ನಡೆದಿದೆ ಎಂಬುದರ ಬಗ್ಗೆ ನಮಗೆ ವಿವರಗಳು ದೊರೆತಿಲ್ಲ. ಈ ಸುಧಾರಣಾ ಸಮಿತಿಯವರು ಒಟ್ಟು 5,000 ಪಾಠಶಾಲೆಗಳನ್ನು ವರ್ಷಕ್ಕೆ 500ರಂತೆ 10 ವರ್ಷಗಳಲ್ಲಿ ತೆರೆದು ಎಲ್ಲಾ ಬಾಲಕ ಬಾಲಕಿಯರಿಗೂ ಅವಕಾಶ ಮಾಡಿಕೊಡತಕ್ಕದ್ದು ಎಂಬುದಾಗಿ ಏನು ಮಾಡಿದ್ದಾರೆಯೋ ಇದು ಸರಿಯಾಗಿದೆ. ಇದಕ್ಕೆ ನಮ್ಮ ಅನುಮತಿ ಇದೆ. ಇದಕ್ಕೆ ನಾವೆಲ್ಲರೂ ನಮ್ಮ ಹೃತ್ಪೂರ್ವಕವಾದ ಬೆಂಬಲವನ್ನು ಕೊಟ್ಟೇ ತೀರಬೇಕು. ಆದರೆ ಇದನ್ನು ಆಚರಣೆಗೆ ತರುವುದು ಬಹಳ ಕಷ್ಟ ಎನ್ನುವುದನ್ನು ಮಾತ್ರ ಹೇಳಲೇಬೇಕಾಗುತ್ತದೆ.

ಇನ್ನು ಪಾಠಶಾಲೆಯಲ್ಲಿ ಪಾಠ ನಡೆಸಲಿಕ್ಕೆ ಇಟ್ಟಿರತಕ್ಕ ಕಾಲವನ್ನು ತೆಗೆದುಕೊಂಡರೆ, ಇದುವರೆಗೂ 11 ರಿಂದ ಸಾಯಂಕಾಲ 5 ರವರೆಗೂ ಪಾಠಶಾಲೆಯಲ್ಲಿ ಪಾಠಪ್ರವಚನಗಳು ನಡೆಯುತ್ತಾ ಇವೆ; ಬೆಳಿಗ್ಗೆ ಇರತಕ್ಕ ಕೆಲವು ಕಡೆಗಳಲ್ಲಿ ಮಧ್ಯಾಹ್ನದಮೇಲೆ ಹೈಸ್ಕೂಲು ಅಥವಾ ಮಿಡ್ಲ್‌ಸ್ಕೂಲ್‌ನ ಉಪಯೋಗಕ್ಕೆ ಕೊಡುತ್ತಾರೆ.

ಹೀಗಿರುವಲ್ಲಿ 8 ಗಂಟೆಯಿಂದ 10½ ಗಂಟೆಗಳವರೆಗೆ ಪಾಠ, ಮಧ್ಯೆ ಅರ್ಧ ಗಂಟೆ ವಿರಾಮ, ಅನಂತರ 11

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.)

ರಿಂದ 12 ರವರೆಗೆ ಮತ್ತೆ ಪಾಠವೆಂದರೆ, ಮೂರು-ನಾಲ್ಕು ಮೈಲಿಗಳಿಂದ ಬಂದಿರತಕ್ಕ ಮಕ್ಕಳಿಗೆ ಬಹಳ ಕಷ್ಟವಾಗುತ್ತದೆ, ಏಕೆಂದರೆ, ಹುಡುಗರು ಸ್ಕೂಲಿಗೆ ಹೊರಡುವ ಮುನ್ನ 8 ಘಂಟೆಯೊಳಗೆ ಉಪಹಾರ ಕೊಟ್ಟು ಕಳುಹಿಸತಕ್ಕ ಚೈತನ್ಯವುಳ್ಳ ತಾಯಿಂದಿರು ಎಷ್ಟು ಜನರಿದ್ದಾರೋ ಕಾಣೆ! ಆದ್ದರಿಂದ ಏನಿದ್ದರೂ ತಂಗಳು ಊಟ ಮಾಡಿಕೊಂಡು ಹೋಗಬೇಕು, ಇಲ್ಲದಿದ್ದರೆ ಬರೀ ಹೊಟ್ಟೆಯಲ್ಲೇ ಪಾಠಶಾಲೆಗೆ ಹೋಗಬೇಕು. ಆರೋಗ್ಯದ ದೃಷ್ಟಿಯಿಂದ ನೋಡುವುದಾದರೆ, ಈ ತೆರದ ಏರ್ಪಾಡಿನಿಂದ ಮಕ್ಕಳ ಆರೋಗ್ಯ ಕೆಡುತ್ತದೆಂದು ನನಗೆ ತೋರುತ್ತದೆ.

ಇದಾದಮೇಲೆ, ಮಧ್ಯಾಹ್ನ 3 ಘಂಟೆಯಿಂದ 5 ಘಂಟೆಯವರೆಗೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಪಾಠಶಾಲೆಗೆ ಬಂದೇ ಬರಬೇಕೆಂದಿದೆ. ಅಂದಮೇಲೆ, ತಂದೆ ತಾಯಿಗಳಿಗೆ ಅವರ ಕೆಲಸಕಾರ್ಯಗಳಲ್ಲಿ ನೆರವಾಗುವುದಕ್ಕೆ ಅನುಕೂಲವಾಗಿರುವಂತೆ ಸ್ಕೂಲುಗಳನ್ನು ನಡೆಸುತ್ತೇವೆಂಬುದರ ಅರ್ಥ ಗೊತ್ತಾಗುವುದಿಲ್ಲ. ಬೆಳಗ್ಗೆ 8 ರಿಂದ 12½ ವರೆಗೆ ಸ್ಕೂಲಿನಲ್ಲಿದ್ದು ಮತ್ತೆ 3 ರಿಂದ 5ರ ವರೆಗೆ ಮತ್ತೆ ಸ್ಕೂಲಿನಲ್ಲಿರಬೇಕೆಂದರೆ, ಇನ್ನು ತಂದೆ ತಾಯಿಗಳಿಗೆ ನೆರವಾಗುವುದು ಹೇಗೆಂಬುದೇ ನನಗೆ ಅನುಮಾನವಾಗಿದೆ.

ಇನ್ನು curriculum. ಒಂದು ವಾರದಲ್ಲಿ 21 ಘಂಟೆಗಳ ಕಾಲ ಪಾಠ ನಡೆಯಬೇಕು. ಅದರ ಪೈಕಿ 5 ಘಂಟೆಗಳ ಕಾಲವನ್ನು ಪ್ರತಿವಾರದಲ್ಲೂ ದೇಹ ಶ್ರಮದ ಪಾಠಗಳಾಗಿ ಇಟ್ಟೇ ಇಡಬೇಕೆಂದು ಕಡ್ಡಾಯವಾಗಿ ಇಲ್ಲಿ ತಿಳಿಸಿದ್ದಾರೆ. ಕಡ್ಡಾಯವಾಗಿ ತಿಳಿಸತಕ್ಕ ಈ ಪಾಠಗಳನ್ನು ನೋಡುವುದಾದರೆ, ಅವುಗಳನ್ನು ನಿಜವಾಗಿಯೂ ಆಚರಣೆಗೆ ತರುವುದಕ್ಕೆ ಸಾಧ್ಯವೇ ಎಂಬ ಸಂದೇಹ ಪ್ರತಿಯೊಬ್ಬರಿಗೂ ಉಂಟಾಗಿದೆ. ಪಾಠಶಾಲೆಯಲ್ಲಿ ಪಾಠ ಹೇಳಿಕೊಡುವುದರಲ್ಲಿ ಅವರವರ ಅಭಿರುಚಿ ನೋಡಿಕೊಂಡು ಪಾಠ ಹೇಳುವುದಾದರೆ ಅದು ಎಷ್ಟುಮಟ್ಟಿಗೆ ಸಾಧ್ಯವೆಂಬುದನ್ನು ನಾನು ಹೇಳಬೇಕಾಗಿಲ್ಲ. ಅದರಲ್ಲೂ ಇಲ್ಲಿ ಇಷ್ಟೊಂದು ಪಾಠ ಭಾಗಗಳನ್ನು ನಮೂದಿಸಿದ್ದಾರೆ. 13 ಪಾಠಗಳಿವೆ. ತೋಟ ಮಾಡುವುದು, ವ್ಯವಸಾಯಕ್ಕೆ ಜಮೀನನ್ನು ತೆಗೆದುಕೊಂಡು ಆರಂಬವಾಡಿ ಮಕ್ಕಳಿಗೆ ವ್ಯವಸಾಯ ಮಾಡುವುದನ್ನು ತೋರಿಸಿಕೊಡುವುದು—ಮುಂತಾದುವುಗಳೆಲ್ಲವನ್ನೂ ಮಾಡುತ್ತೇವೆನ್ನುವುದಾದರೆ ಪಾಠಶಾಲೆಯಲ್ಲಿರತಕ್ಕ ಒಬ್ಬ ಉಪಾಧ್ಯಾಯರಿಗೆ ಎಷ್ಟರಮಟ್ಟಿಗೆ ಸಾಧ್ಯವೆಂಬುದನ್ನು ಯೋಚಿಸಬಹುದು. ಅಲ್ಲದೆ ಪ್ರಾಥಮಿಕ ಶಾಲೆಗಳಿಗೆ ಕಳುಹಿಸತಕ್ಕ ಮಕ್ಕಳೆಲ್ಲಾ 6 ರಿಂದ 12 ವರ್ಷ ವಯಸ್ಸಿನೊಳಗಿನವರಾಗಿರುತ್ತಾರೆ. ಇವರಿಂದ ತಾನೆ ಎಷ್ಟುಮಟ್ಟಿಗೆ ದೇಹ ಶ್ರಮದ ಕೆಲಸಗಳನ್ನು ವಹಿಸಲಿಕ್ಕೆ ಸಾಧ್ಯವೆಂಬುದನ್ನೂ ನೋಡಬಹುದು. ಈ ಕರಿಕ್ಯೂಲಂನಲ್ಲಿ ಎರಡನೆಯದಾಗಿ ನೂಲುವುದನ್ನು ಸೂಚಿಸಿದ್ದಾರೆ. ಇದನ್ನೇನೋ ಎಂಟು-ಹತ್ತು ವರ್ಷದ ಹುಡುಗರು ಮಾಡಬಹುದೆಂದು ಹೇಳಬಹುದು. ಅಂಥದರಲ್ಲಿ ಇದನ್ನೂ 6 ವರ್ಷದ ಮಕ್ಕಳು ಮಾಡಬಹುದೆಂದು ಈ ಸುದಾರಣೆಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಇದನ್ನು ಯಾವರೀತಿ ಬದಲಾವಣೆ ಮಾಡಿಕೊಂಡು ಆಚರಣೆಗೆ ಕೊಡಬಹುದೋ ಅದರಂತೆ ಕೊಡಬಹುದು. ಆಮೇಲೆ, ನೇಯ್ಗೆ ಕಲಿಸಬಹುದೆಂದು ಹೇಳಿದ್ದಾರೆ. ಕೆಲವು ಭಾಗಗಳಲ್ಲೇನೋ ನೇಯ್ಗೆಯವರೇ ಹೆಚ್ಚಾಗಿದ್ದಾರೆಂದು ಹೇಳಿದರೂ 12 ವರ್ಷದ ವಯಸ್ಸಿನೊಳಗಿನ ಹುಡುಗರಿಂದ ನೇಯುವುದಕ್ಕೆ ಸಾಧ್ಯವಿರುತ್ತದೆಯೇ? ಹಾಗೆಯೇ wood craft ಮುಂತಾಗಿ ಅನೇಕ ವಿಷಯಗಳನ್ನು ಸೂಚಿಸಿದ್ದಾರೆ. ಈ ಸಾಧಾರಣಾ ಸಮಿತಿಯವರೇನೋ ಪರಿಣತರು, ಅವರ ವಿಷಯದಲ್ಲಿ ನನಗೆ ಹೆಚ್ಚಿನ ಗೌರವವಿದೆ. ಆದರೂ ಅವರು ಹೇಳಿರುವಂತೆ ಬಟ್ಟೆ ಒಗೆಯುವುದು, ನೇಯುವುದು, ಮರಗೆಲಸ ಮುಂತಾದುವುಗಳನ್ನೆಲ್ಲಾ 12 ವರ್ಷದೊಳಗಿನ ಮಕ್ಕಳು ಮಾಡುವುದು ಹೇಗೆ ಸಾಧ್ಯವೋ ಹೇಳಲಾರೆ.

ಆಮೇಲೆ, ಪ್ರಾಥಮಿಕ ಪಾಠಶಾಲೆಗಳಲ್ಲಿ ಬಾಲಕ ಬಾಲಕಿಯರಿಗೆ ಒಂದೇ ಸಮನಾದ ವಿದ್ಯಾಭ್ಯಾಸವನ್ನೊದಗಿಸಬೇಕೆಂದು ಹೇಳಿದ್ದಾರೆ. ಇದನ್ನು ನಾನೂ ಒಪ್ಪುತ್ತೇನೆ. ಈ ಪಾಠಶಾಲೆಗಳಲ್ಲೇ ಕೋಳಿ ಸಾಕುವುದನ್ನು ಹೇಳಿಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ತಕ್ಕ ಸಿದ್ಧತೆಗಳನ್ನು ಈ ಪಾಠಶಾಲೆಗಳಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವೇ? ಇದರಂತೆಯೇ ಹೊಲಿಗೆ, ಚರ್ಮದ ಕೆಲಸ, ಇಟ್ಟಿಗೆ ತಯಾರಿಸುವುದು ಮುಂತಾದುವುಗಳೂ ಅಷ್ಟು ಸುಲಭವಾದವುಗಳಲ್ಲ. ಏನಿದ್ದರೂ ಕೊನೆಯದಾದ ಬುಕ್ ಬೈಂಡಿಂಗ್ ಮತ್ತು ಸ್ಪಿನ್ನಿಂಗ್ ಇವೆರಡನ್ನು ಮಾತ್ರ ಆಚರಣೆಗೆ ತರುವುದಕ್ಕೆ ತಕ್ಕಮಟ್ಟಿಗೆ ಸಾಧ್ಯವಾಗಬಹುದೆಂದು ನನ್ನ ಅಭಿಪ್ರಾಯ.

ಆಮೇಲೆ ವ್ಯವಸಾಯದ ವಿಷಯದಲ್ಲಿ ಒಂದು ಮಾತು. ಇಲ್ಲಿ 82ನೆಯ ಪುಟದಲ್ಲಿ ಹೇಳಿದ್ದಾರೆ,

> "Agriculture is rich in its educational possibilities. Some of the harder agricultural operations, which the children of the primary school are not able to do by themselves, can very well be done with the assistance and co-operation of the parents."

ಇದೇನೋ ನನಗೆ ಅರ್ಥವಾಗುವುದಿಲ್ಲ. ಮಾನ್ಯ ವಿದ್ಯಾಮಂತ್ರಿಗಳು ಅವರು ಉತ್ತರ ಕೊಡುವಾಗ್ಗೆ ಇದನ್ನು ತಿಳಿಸುತ್ತಾರೆಂದು ನಂಬಿದ್ದೇನೆ.

ಆಮೇಲೆ ಮಾಧ್ಯಮಿಕ ಶಾಲೆಗಳ ವಿಚಾರ. ಮಾಧ್ಯಮಿಕ ಶಾಲೆಗಳಲ್ಲೂ ಕೂಡ ಯಥಾ ಪ್ರಕಾರ ಪ್ರೈಮರಿ ಶಾಲೆಗಳಲ್ಲಿನಂತೆಯೇ ದೈಹಿಕ ಶ್ರಮದ ಕೆಲಸ ಹಾಗೂ ಔದ್ಯೋಗಿಕ ಶಿಕ್ಷಣ'ಗಳನ್ನು ಆಚರಣೆಗೆ ತರಬೇಕೆಂದು ಹೇಳಿದ್ದಾರೆ. ಇದರ ಸಂಬಂಧದಲ್ಲಿ ನಮಗೆ ಇನ್ನೊಂದು ದೊಡ್ಡ ಅನುಮಾನ ಬಂದಿದೆ. ನಮ್ಮ ರಾಜ್ಯಾಂಗದ ಪ್ರಕಾರ 14 ವರ್ಷ ವಯಸ್ಸಿನವರೆಗೂ ಎಲ್ಲಾ ಬಾಲಕ ಬಾಲಕಿಯರಿಗೂ ಉಚಿತ ವಿದ್ಯಾಭ್ಯಾಸ ಕೊಟ್ಟೇಕೊಡಬೇಕೆಂದು 45ನೆಯ ಆರ್ಟಿಕಲ್‌ನಲ್ಲಿ ವಿಧಾಯಕವಾಗಿದೆ. ನಾವು ರಾಜ್ಯಾಂಗಕ್ಕೆ ತಲೆಬಾಗಿದ್ದೇವೆ. ರಾಜ್ಯಾಂಗದಂತೆ ನಡೆದುಕೊಳ್ಳುತ್ತಿದ್ದೇವೆ. ಆದರೆ ಇಲ್ಲಿ ಹೇಳಿರುವಂತೆ ವಿದ್ಯಾಭ್ಯಾಸದ ಸುಧಾರಣಾ ಕ್ರಮವನ್ನು ತಾವು ಆಚರಣೆಗೆ ತರುವುದಾದರೆ, 6ರಿಂದ 12 ವರ್ಷದವರೆಗೆ ಮಾತ್ರ ಪ್ರೈಮರಿ ವಿದ್ಯಾಭ್ಯಾಸದಲ್ಲಿ ಹುಡುಗರಿಗೆ ಉಚಿತ ಶಿಕ್ಷಣದೊರೆಯುತ್ತದೆ. ಅಲ್ಲಿಂದ ಮುಂದೆ ಮೊದಲನೆಯ ಎರಡು ವರ್ಷಗಳೂ ಈಗ ಹೈಸ್ಕೂಲಿನಲ್ಲಿರತಕ್ಕ ರೀತಿಯಲ್ಲಿ 3 ರೂಪಾಯಿ 3½ ರೂಪಾಯಿಗಳು, ಕೊಡಬೇಕಾಗಿಬರುತ್ತೆ. ಇದರ ಜೊತೆಗೆ 5¼ ರೂಪಾಯಿಗಳನ್ನು ಬೇರೆ ಕೊಟ್ಟೇತೀರಬೇಕೆಂದು ಹೇಳಿದ್ದಾರೆ. ಹೀಗಾಗಿ ಮಕ್ಕಳ 13 ಮತ್ತು 14ನೆಯ ವಯಸ್ಸಿನಲ್ಲೇ ಫೀಸುಕೊಡಬೇಕಾಗಿದೆ. ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಉಚಿತ ವಿದ್ಯಾಭ್ಯಾಸವನ್ನು ಕೊಡಲಿಕ್ಕೆ ಇದರಲ್ಲಿ ಸಾಧ್ಯವೇ ಇಲ್ಲ. ಈ

ವಿಚಾರದಲ್ಲಿ ಅನುಮಾನಕ್ಕೆ ಅವಕಾಶವುಂಟಾಗಿದೆ. ಈ ಅಂಶವನ್ನು ಈ ಸಮಿತಿಯ ಸದಸ್ಯರಾದ ಮಾನ್ಯ ಶ್ರೀ ಕೋದಂಡರಾವ್ ಅವರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಹಿಂದೆ ಇದ್ದಂಥ ರೀತಿಯಲ್ಲಿ ಪ್ರೈಮರಿ ಶಾಲೆಯಲ್ಲಿ ನಾಲ್ಕು ವರ್ಷಗಳು, ಮಾಧ್ಯಮಿಕ ಶಾಲೆಯಲ್ಲಿ ನಾಲ್ಕು ವರ್ಷಗಳೂ—ಒಟ್ಟು 8 ವರ್ಷಗಳು ಅಂದರೆ ಮಕ್ಕಳ 14ನೆಯ ವಯಸ್ಸಿನವರೆಗೂ ಉಚಿತ ವಿದ್ಯಾಭ್ಯಾಸವುತಾನಾಗಿಯೇ ದೊರೆಯುತ್ತಿತ್ತು. ಅಂಥದ್ದು ತಪ್ಪಿ 12ನೆಯ ವರ್ಷದಿಂದಾಚೆಗೆ ಉಚಿತ ವಿದ್ಯಾಭ್ಯಾಸ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಈ ಸುಧಾರಣಾ ವರದಿಯಲ್ಲಿ ಅರ್ಥವಾಗುತ್ತದೆ. ರಾಜ್ಯಾಂಗಕ್ಕೆ ವಿರೋಧವಾಗಿ ಇದನ್ನು ಅಚರಣೆಗೆ ತರುವುದು ಹೇಗೆ ಎಂಬ ಅನುಮಾನ ನನಗೆ ಪ್ರಾಪ್ತಿಯಾಗಿದೆ.

ಆಮೇಲೆ, ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಟ್ಟದಲ್ಲಿ ಯಾವ ವ್ಯತ್ಯಾಸವೂ ಬೇಕಿಲ್ಲ ಸೆಕೆಂಡರಿ ವಿದ್ಯಾಭ್ಯಾಸದ ಮಟ್ಟದಲ್ಲಿ ಬದಲಾವಣೆಮಾಡಬೇಕು, ಬಾಲಕ ಬಾಲಕಿಯರಿಗೆ ಪ್ರತ್ಯೇಕ ಪಾಠಶಾಲೆಗಳಿರಬೇಕೆಂದು ಹೇಳಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲೇ ಸಮಿತಿಯವರು ನಮೂದಿಸಿರುವ ರೀತಿಯಲ್ಲಿ ಶಿಕ್ಷಣ ಕೊಡಲು ಸಾಧ್ಯವಿಲ್ಲವೆಂದೇ ಹೇಳುತ್ತಿರುವಾಗ, ಹಾಗೂ ಇದರ ಮಾದರಿಯಲ್ಲೇ ಸೆಕೆಂಡರಿ ವಿದ್ಯಾಭ್ಯಾಸವನ್ನೂ ಮುಂದುವರಿಸಬೇಕೆಂದು ಅವರ ಸಲಹೆಯಿರುವಾಗ, ಇನ್ನು ಬಾಲಕ ಬಾಲಕಿಯರಿಗೆ ಬೇರೆ ಬೇರೆ ಸ್ಕೂಲುಗಳನ್ನು ಕೂಡ ಮಾಡಬೇಕು ಎಂದರೆ ಬಾಲಕರಿಗೇ ಬೇರೆ ತೆರದ ಉಪಕರಣಗಳು, ಬಾಲಕಿಯರಿಗೇ ಬೇರೆ ತೆರದ ಉಪಕರಣಗಳು ಎಂದು ಎರಡು ಕಡೆಯೂ ಹೊಂದಿಸಿಕೊಡುವುದಕ್ಕೆ ನಮ್ಮಿಂದ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡಬೇಕು. ಈ ಬಗ್ಗೆ ವಿದ್ಯಾಮಂತ್ರಿಗಳು ಏನು ಹೇಳುತ್ತಾರೋ ನೋಡಿಕೊಂಡು ನಾವು ನಮ್ಮ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ.

ಇಂಟರ್ ಮೀಡಿಯಟ್ ಕಾಲೇಜನ್ನು ಹೈಸ್ಕೂಲಿಗೆ ಸೇರಿಸಬೇಕೆಂದು ಇಲ್ಲಿ ಸೂಚಿಸಿರುವುದನ್ನು ನಾನೂ ವಿರೋಧಿಸುತ್ತೇನೆ. ಇದರ ವಿಚಾರದಲ್ಲಿ, ಮಾನ್ಯ ಗೋವಿಂದರೆಡ್ಡಿಯವರು ತಮ್ಮ ಅಭಿಪ್ರಾಯವನ್ನು ಕೊಡುತ್ತಾ ಖಂಡಿತವಾಗಿಯೂ ಇಂಟರ್‌ಮೀಡಿಯಟ್ ಭಾಗವನ್ನು ಹೈಸ್ಕೂಲಿಗೆ ಸೇರಿಸಕೂಡದು ಅದು ಈಗಿರುವಂತೆಯೇ ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟೇ ಕೆಲಸ ಮಾಡಬೇಕೆಂದು ತಿಳಿಸಿದ್ದಾರೆ. ಹಾಗೆಯೇ ಮುಂದೆ ರಚಿತವಾಗುವ ವಿಶ್ವವಿದ್ಯಾನಿಲಯ ಸಮಿತಿಗಳಲ್ಲಿ official elements ಜಾಸ್ತಿಯಾಗುವುದು ಸೂಕ್ತವಲ್ಲವೆಂದು ಅದನ್ನು ಕೂಡ ವಿರೋಧಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದು ಸಾಧುವಾಗಿದೆ.

ಆಮೇಲೆ ವಿಶ್ವವಿದ್ಯಾನಿಲಯದಲ್ಲಿ ಬಾಲಕರಿಗೂ ಮಹಿಳೆಯರಿಗೂ ಒಟ್ಟಿಗೆ ವಿದ್ಯಾಭ್ಯಾಸ ನಡೆಯಬೇಕೆಂದು ಹೇಳಿದ್ದಾರೆ. ಅದನ್ನು ನಾನೂ ಒಪ್ಪುತ್ತೇನೆ.

ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಮಹಿಳೆಯರಿಗೇ ಪ್ರತ್ಯೇಕ ಶಾಲೆಗಳನ್ನು ಎಲ್ಲಾ ಕಡೆಯೂ ತೆರೆಯಲು ದುಬಾರಿ ವೆಚ್ಚವಾಗುತ್ತದೆ. ಆದುದರಿಂದ ಇದನ್ನು ನಾವು ಒಪ್ಪಬೇಕಾಗಿದೆ. ಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಬಾಲಕ ಬಾಲಕಿಯರಿಗೆ ಒದಗಿಸುವುದಾದರೆ ಬಾಲಕ ಬಾಲಕಿಯರಿಗೆ ಒಂದೇ ರೀತಿ ಫೀಜು ಏಕೆ ಹಾಕಬಾರದು, ಬಾಲಕಿಯರಿಗೆ ಏಕೆ ರಿಯಾಯಿತಿ ತೋರಿಸಬೇಕೆಂದೂ ಏನೋ ಈ ವರ್ಷದಿಂದ ಹೊಸದಾಗಿ ವಿದ್ಯಾರ್ಥಿನಿಯರೂ ಪೂರ್ತ ಫೀಜು ಕೊಡುವಂತೆ ಮಾಡಿದ್ದಾರೆ. ಈ ವಿಷಯದಲ್ಲಿ ಅನೇಕವಾಗಿ ಮಹಿಳೆಯರ ವಿರೋಧವಿದೆಯೆಂಬುದನ್ನು ಈ ಸಮಯದಲ್ಲಿ ತಿಳಿಸಲಿಚ್ಛಿಸುತ್ತೇನೆ. ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರೂ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿ ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ಮಹಿಳೆಯರಿಗೆ ವಿದ್ಯಾಭ್ಯಾಸಕ್ಕೆ ಏನೇನು ವಿಶೇಷ ಸೌಲಭ್ಯಗಳು ದೊರೆತಿವೆಯೋ ಅವುಗಳನ್ನು ಮುಂದುವರಿಸಿಕೊಂಡು ಹೋಗುವುದು ಉಚಿತವೆಂದು ಸಮಿತಿಯವರು ಏಕಾಭಿಪ್ರಾಯವನ್ನು ಕೊಟ್ಟಿದ್ದಾರೆ. ಕೆಲವು ಸದಸ್ಯರು ಪ್ರತ್ಯೇಕಾಭಿಪ್ರಾಯಗಳನ್ನು ಬರೆಯುವಾಗಲೂ ವಿದ್ಯಾರ್ಥಿನಿಯರಿಗೆ ಹಿಂದಿದ್ದ ಸೌಲಭ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತಿಳಿಸಿದ್ದಾರೆ. ಈ ಬಗ್ಗೆ ಸರ್ಕಾರದವರು ಗಮನಕೊಟ್ಟು ಮಾದರಿ ಮೈಸೂರು ಮಾದರಿಯಾಗಿಯೇ ಇರುವಂತೆ ಇದರ ಕೀರ್ತಿಯನ್ನು ಬೆಳೆಸಿಕೊಂಡು ಹೋಗಬೇಕೆಂದು ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ. ಹೊರಗಿನ ಪ್ರಾಂತಗಳಲ್ಲಿ ಮಹಿಳೆಯರ ವಿದ್ಯಾಭ್ಯಾಸದ ಮಟ್ಟ ಮೈಸೂರಿಗಿಂತ ಹೆಚ್ಚಾಗಿದೆ. ಅಲ್ಲಿ ವಿದ್ಯಾರ್ಥಿಗಳು ಹೆಚ್ಚು ಹಣವನ್ನು ವಿದ್ಯೆಗಾಗಿ ಖರ್ಚು ಮಾಡುತ್ತಿದ್ದಾರೆ, ಇಲ್ಲಿ ಸುಲಭವಾಗಿ ವಿದ್ಯೆಯನ್ನು ಕೊಡುತ್ತಿದ್ದೇವೆಂದು ಮಾನ್ಯ ವಿದ್ಯಾ ಸಚಿವರು ತಿಳಿಸಿದರು. ಅದಕ್ಕೆ ನನ್ನ ಉತ್ತರವಿಷ್ಟೇ: ಮೈಸೂರು ಸಂಸ್ಥಾನ ಇದುವರೆಗೆ ಇತರ ಎಲ್ಲ ಸಂಸ್ಥಾನಗಳಿಗೂ ಮಾದರಿಯಾಗಿದ್ದು ಇನ್ನು ಮುಂದೆ ಬೇರೆ ಸಂಸ್ಥಾನಗಳ ಮಾದರಿಯನ್ನೇಕೆ ಅನುಕರಣ ಮಾಡಬೇಕು? ಅದರಲ್ಲಿಯೂ ಎಲ್ಲವನ್ನೂ ಬಿಟ್ಟು ವಿದ್ಯಾಭ್ಯಾಸದಲ್ಲಿ, ಅದರಲ್ಲಿಯೂ ಮಹಿಳೆಯರಿಗೆ ಸುಲಭದಲ್ಲಿ ವಿದ್ಯೆ ಕೊಡುವುದನ್ನು ಬಿಟ್ಟು ಬಿಡುವುದರಲ್ಲಿ ಬೇರೆಯವರನ್ನೇಕೆ ಅನುಕರಣ ಮಾಡಬೇಕು? ಮಾದರಿ ಸಂಸ್ಥಾನವೆಂದಮೇಲೆ, ಬೇರೆ ವಿಷಯಗಳಲ್ಲಿ ಹೆಚ್ಚು ಸೌಕರ್ಯವನ್ನು ಕಲ್ಪಿಸುವಂತೆ ಇದರಲ್ಲಿಯೂ ಮಾಡಬೇಕೆಂದು ಹೇಳುತ್ತೇನೆ.

ಪ್ರೈಮರಿ ಶಾಲೆಗಳ ಉಪಾಧ್ಯಾಯಿನಿಯರಿಗೆ ಹೆಚ್ಚು ಸೌಲಭ್ಯಗಳನ್ನು ಕೊಡಬೇಕು. ಸಾಧ್ಯವಾದಷ್ಟು ಅವರು ಹೆಚ್ಚು ಹೆಚ್ಚಾಗಿ ಈ ನೌಕರಿಗಳಿಗೆ ಬರಲು ಪ್ರೋತ್ಸಾಹ ಕೊಡಬೇಕು, ಅವರಿಗೆ ಹೆಚ್ಚು ಸೌಕರ್ಯ ಕೊಡಬೇಕು ಎಂದು ವರದಿಯಲ್ಲಿ ಹೇಳಿದ್ದಾರೆ. ಇದೇ ರೀತಿ 25 ವರ್ಷ ಮಹಿಳೆಯರಿಗೆ ಸೌಲಭ್ಯಗಳನ್ನು ಕೊಡುತ್ತಾ, ಅವರ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾ ಹೋಗಬೇಕೆಂದೂ ಹಾಗೆ ಮಾಡುವುದು ಒಳ್ಳೆಯದೆಂದೂ ಡಾ॥ ನರಸಿಂಹಯ್ಯನವರು ಅಭಿಪ್ರಾಯ ಕೊಟ್ಟಿದ್ದಾರೆ. ಇದನ್ನು ನಾನು ಪುಷ್ಟೀಕರಿಸುತ್ತೇನೆ. ಸನ್ನಿವೇಶಗಳ ದೆಸೆಯಿಂದ ತಮ್ಮ ತಮ್ಮ ದುರದೃಷ್ಟವಶಾತ್ ಅನೇಕ ಮಹಿಳೆಯರಿಗೆ 18 ವರ್ಷ ವಯಸ್ಸಾದಮೇಲೆ ಸಂಸಾರದಲ್ಲಿ ತೊಂದರೆ ಬಂದು, ಅನಂತರ ಅವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು, ಎಸ್.ಎಸ್.ಎಲ್.ಸಿ. ಮಾಡಿದವರನ್ನೇ ಉಪಾಧ್ಯಾಯಿನಿಯರಾಗಿ ನೇಮಕ ಮಾಡಬೇಕೆಂದು ಗೊತ್ತು ಮಾಡಿರುವುದರಿಂದ, ಅಷ್ಟು ವಿದ್ಯೆಯನ್ನು ಕಲಿಯಬೇಕಾದರೆ ಬಹಳ ವರ್ಷಗಳಾಗುತ್ತವೆ. ಅಷ್ಟು ಹೊತ್ತಿಗೆ ಅನೇಕ ಮಹಿಳೆಯರಿಗೆ 27 ವರ್ಷ ವಯಸ್ಸು ದಾಟಿರುತ್ತದೆ. ಆದುದರಿಂದ ಅವರು ಕೆಲಸಕ್ಕೆ ಸೇರಲು 27 ವರ್ಷದೊಳಗಿರಬೇಕೆಂದು ಕಡ್ಡಾಯ ಮಾಡದೆ, ಅದನ್ನು 30 ವರ್ಷ ಅಥವಾ 32 ವರ್ಷದವರೆಗೆ ಹೆಚ್ಚಿಸಿದರೆ ಒಳ್ಳೆಯದು. ಮಹಿಳೆಯರಿಗೆ ವಯಸ್ಸಾದಷ್ಟೂ ಅವರು ಹೆಚ್ಚಿನ ಅನುಭವದಿಂದ ಮಕ್ಕಳಿಗೆ ಪಾಠ ಹೇಳುತ್ತಾರೆ. ಪ್ರೈಮರಿ ಶಾಲೆಗಳಲ್ಲಿ ಉಪಾಧ್ಯಾಯಿನಿಯರೇ ಸಾಧ್ಯವಾ

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.)

ದಷ್ಟು ಹೆಚ್ಚಾಗಿ ನೇಮಕ ವಾಗುವುದರಿಂದ ಇನ್ಸ್‌ಪೆಕ್ಟರುಗಳಾಗಿ ಮಹಿಳೆಯರೇ ಇರಲು ಅವಕಾಶವಿರಬೇಕು. ಈಗಲೂ ಮಹಿಳೆಯರನ್ನು ನೇಮಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಈ ಬಗ್ಗೆ ನಾನು ಹೇಳುವುದೊಂದು ವಿಚಾರವಿದೆ. ಹಿಂದಿನಿಂದಲೂ ಮೈಸೂರು ಸಂಸ್ಥಾನದಲ್ಲಿ ಮಹಿಳೆಯರಿಗೆ ಒಂದು ಸೌಲಭ್ಯವನ್ನೂ ರಿಯಾಯಿತಿಯನ್ನೂ ಹೆಚ್ಚಾಗಿ ತೋರಿಸಿದ್ದರು; ಆದರೆ ಇತ್ತೀಚೆಗೆ, ಕ್ರಮೇಣ ಅದು ಕಡಮೆಯಾಗುತ್ತಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಉದಾಹರಣೆಗೆ ಮಹಿಳೆಯರ ಅಸ್ಪತ್ರೆಗಳನ್ನು ನೋಡಿಕೊಳ್ಳಲು ಡಾ|| ಅಲ್ಬುಕರ್ಕ್‌ರವರನ್ನು ವೈದ್ಯ ಇಲಾಖೆಯಲ್ಲಿ ನೇಮಿಸಿದ್ದರು......

Mr. SPEAKER.—How is that relevant?

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಎಲಿಮೆಂಟರಿ ಎಜ್ಯುಕೇಷನ್ ಡೆಪ್ಯುಟಿ ಡೈರೆಕ್ಟರಾಗಿದ್ದ ಶ್ರೀಮತಿ ಇಂದಿರಮ್ಮನವರು ನಿವೃತ್ತರಾದಮೇಲೆ, ಆಸ್ಥಾನವನ್ನು ಮತ್ತೊಬ್ಬರು ಮಹಿಳೆಯರಿಗೆ ಕೊಡದೆ, ಅದನ್ನು ಪುರುಷರೇ ತೆಗೆದುಕೊಂಡಿದ್ದಾರೆ. ಅದಕ್ಕೆ ಸರಿಯಾದ ಇನ್ನಾರೂ ಮಹಿಳೆಯರಿರಲಿಲ್ಲವೆ? ಹೀಗೆ ಮಹಿಳೆಯರಿಗಿದ್ದ ಸೌಲಭ್ಯಗಳು ದಿನ ಕ್ರಮೇಣ ಕಡಮೆಯಾಗುತ್ತಿರುವುದು ಶೋಚನೀಯ ಪ್ರಸಂಗ. ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಮುಂದುವರಿಯಬೇಕು, ದೇಶ ನಾಗರಿಕತೆಯ ತುದಿಯನ್ನು ಏರಬೇಕು ಎಂದು ಹೇಳಿ, ಅದಕ್ಕಾಗಿ ಇಷ್ಟು ಸಮಿತಿಗಳಲ್ಲಿ, ಸಭೆಗಳಲ್ಲಿ ಚರ್ಚೆಗಳು ನಡೆದು ಈ ಸುಧಾರಣೆಗಳು ಈ ಸಭೆಯ ಮುಂದೆ ಬಂದಿರುವ ಈ ಸಮಯದಲ್ಲಿ ಒಂದು ಅತಿ ಮುಖ್ಯವಾದ ಅಂಶವನ್ನು ಗಮನಿಸಬೇಕು. ಮಹಿಳೆಯರ ವಿದ್ಯಾಭ್ಯಾಸ ಇನ್ನು ಮುಂದೆ ದಿನಕ್ರಮೇಣ ಇಳಿದರೆ, ಅವರಿಗೆ ಸೌಲಭ್ಯಗಳು ಕಡಮೆಯಾದರೆ, ಅವರ ವಿದ್ಯಾಭ್ಯಾಸವೇ ನಶಿಸಿ ಹೋಗುವ ಪರಿಸ್ಥಿತಿ ಬರುವುದೆಂಬುದನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಒಂದು ಹೆಣ್ಣು ಮಗು ಕಾಲೇಜಿಗೆ ಹೋಗಬೇಕಾದರೆ, ಅದಕ್ಕೆ ವಾಹನ ಸೌಕರ್ಯಕ್ಕೇ ತಿಂಗಳಿಗೆ 13—14 ರೂಪಾಯಿ ಖರ್ಚಾಗುತ್ತದೆ. ಈ ವರದಿಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಫೀಜನ್ನು ಶೇಕಡ 25ರಷ್ಟು ಹೆಚ್ಚಿಸಬೇಕೆಂದು ಸೂಚಿಸಲಾಗಿದೆ. ಈಗ ಹೈಸ್ಕೂಲ ತರಗತಿಗೆ ಮೂರು ರೂಪಾಯಿ ಇದ್ದುದನ್ನು ಇದೂ ಕಾಲು ರೂಪಾಯಿ ಮಾಡಿದರೆ, ವಿದ್ಯಾರ್ಥಿನಿಯರಿಗೆ ಒಂದಕ್ಕೆ ಮೂರರಷ್ಟು ಫೀಜು ಹೆಚ್ಚು ಮಾಡಿದಂತಾಗುತ್ತದೆ. ಹೇಗೆಂದರೆ ಈಗ ಇರುವ ರಿಯಾಯಿತಿಯೂ ಹೋಗಿ ಇದೇ ಫೀಜು ಮುಂದೆ ವಿದ್ಯಾರ್ಥಿನಿಯರಿಗೂ ಜಾರಿಗೆ ಬರುವುದಾದರೆ, ಒಂದಕ್ಕೆ ಮೂರರಷ್ಟು ಹೆಚ್ಚಿಸಿದಂತಾಗುತ್ತದೆ. ಒಂದೇ ಸಾರಿ ಹೀಗೆ ಮೂರರಷ್ಟು ಹೆಚ್ಚಿಸುವುದು ನ್ಯಾಯವೆ, ಸಾಧುವೆ ಎಂಬುದನ್ನು ತಮ್ಮ ವಿವೇಚನೆಗೇ ಬಿಡುತ್ತೇನೆ. ಮಹಿಳೆಯರೂ ಫೀಜು ಕೊಟ್ಟು ಓದಬೇಕೆಂದು ಮಾಡಿರುವುದರಿಂದ ವಿದ್ಯಾರ್ಥಿನಿಯರು ತಮ್ಮಲ್ಲಿ ಹಣವಿದ್ದರೆ ಓದಲು ಸಾಧ್ಯವೇ ಹೊರತು, ಹಣವಿಲ್ಲದವರು ವಿದ್ಯಾಭ್ಯಾಸವನ್ನು ಬಿಟ್ಟುಬಿಡಬೇಕಾಗುತ್ತದೆ. ಯಾವ ಒಂದು ಸೌಲಭ್ಯವನ್ನು ಹಿಂದಿನ ಸರ್ಕಾರಗಳು ಮೊದಲಿನಿಂದಲೂ ಸಂಸ್ಥಾನದಲ್ಲಿ ಒದಗಿಸಿಕೊಂಡು ಬಂದಿದ್ದವೋ ಅದರ ಫಲವಾಗಿ ಮಹಿಳೆಯರ ವಿದ್ಯಾಭ್ಯಾಸ ಸ್ವಲ್ಪವಾದರೂ ಮುಂದುವರಿಯಿತು. ಆದರೂ ಇನ್ನೂ ಎಷ್ಟೋ ಹಿಂದಿದ್ದಾರೆಂಬುದು ಈ ಅಂಕಿಗಳಿಂದ ಗೊತ್ತಾಗುತ್ತದೆ. 1951-52ನೆಯ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾ ಸಂಸ್ಥೆಗಳಲ್ಲಿ ಓದುತ್ತಿದ್ದವರಲ್ಲಿ ವಿದ್ಯಾರ್ಥಿಗಳು 17,608 ಜನ, ವಿದ್ಯಾರ್ಥಿನಿಯರು 702 ಮಂದಿ ಮಾತ್ರ. ಒಟ್ಟು ಸಂಸ್ಥಾನದ ಎಲ್ಲಾ ಕಾಲೇಜುಗಳಲ್ಲಿ ಶೇಕಡಾವಾರು ಲೆಕ್ಕ ಹಾಕಿದರೆ ಶೇಕಡ 3.98 ರಷ್ಟು ಹುಡುಗಿಯರು ವಿದ್ಯಾಭ್ಯಾಸ ಮಾಡಿದಹಾಗಾಯಿತು.

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಅಂಕಿಗಳು ಎಲ್ಲಿವೆ?

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಸುಧಾರಣಾ ಸಮಿತಿಯ ವರದಿ ಪುಟ 492ರಲ್ಲಿವೆ. ಹೈಸ್ಕೂಲುಗಳಲ್ಲಿ ಓದುತ್ತಿದ್ದ ಹುಡುಗರು 51,137, ಹುಡುಗಿಯರು 2,394 ಎಂದರೆ, ಶೇಕಡ 4.68 ವಿದ್ಯಾರ್ಥಿನಿಯರು ವ್ಯಾಸಂಗಮಾಡಿದ ಹಾಗಾಗುತ್ತದೆ. ಮಿಡ್ಲ್‌ಸ್ಕೂಲುಗಳಲ್ಲಿ ಓದುತ್ತಿದ್ದ ಹುಡುಗರ 1,03,812, ಹುಡುಗಿಯರು 8030 ಜನ ಶೇಕಡ 7.73 ಮಾತ್ರ ವಿದ್ಯಾರ್ಥಿನಿಯರು ವ್ಯಾಸಂಗಮಾಡಿದ ಹಾಗಾಯಿತು ಇನ್ನು ಪ್ರೈಮರಿ ಪಾಠಶಾಲೆಗಳಲ್ಲಿ ಬಾಲಕರು 4,19,574 ಜನ, ಬಾಲಕಿಯರು 1,50,455 ಮಂದಿ; ಎಂದರೆ 35.8 ಮಂದಿ ಹುಡುಗಿಯರು ವಿದ್ಯಾಭ್ಯಾಸ ಮಾಡಿದ ಹಾಗಾಯಿತು. ಹಿಂದಿನಿಂದಲೂ ಮಹಿಳೆಯರ ವಿದ್ಯಾಭ್ಯಾಸಕ್ಕೆ ಅನೇಕ ಸೌಲಭ್ಯ ಸಲಕರಣೆಗಳನ್ನು ಕೊಟ್ಟು ಉಚಿತವಿದ್ಯಾಭ್ಯಾಸ ಪದ್ಧತಿಯನ್ನು ನಡೆಸಿದುದರ ಪರಿಣಾಮವಾಗಿ ಇಷ್ಟು ಮಟ್ಟಿಗಾದರೂ ನಮ್ಮ ಸಂಸ್ಥಾನದಲ್ಲಿ ಮಹಿಳೆಯರಲ್ಲಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಹೆಚ್ಚಿತು. ಇದನ್ನು ಒಂದೇ ಏಟಿಗೆ ತೊಡೆದು ಹಾಕಿ, ಮಹಿಳೆಯರೂ ಪೂರ್ತಿ ಫೀಜುಕೊಡಬೇಕೆಂದು ಮಾಡಿದರೆ ದೊಡ್ಡ ವೃಕ್ಷದ ಬುಡಕ್ಕೆ ಕೊಡಲಿ ಏಟು ಹಾಕಿದಂತಾಗುತ್ತದೆ. ಯಾರಿಗೂ ತಿಳಿಯದ ಹಾಗೆ ಹಠಾತ್ತನೆ ಈ ರೀತಿ ಆಜ್ಞೆಮಾಡಿದರೆ ಮೆಡಿಕಲ್ ಕಾಲೇಜಿನಲ್ಲಿ ಒಂದು, ಎರಡು, ಮೂರು, ನಾಲ್ಕನೆಯ ವರ್ಷದ ತರಗತಿಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿನಿಯರ ಗತಿ ಏನು? ಇದುವರೆಗೆ ಮೆಡಿಕಲ್ ಸ್ಕೂಲಿನಲ್ಲಿ ಶುಲ್ಕವಿರಲಿಲ್ಲ. ಉಚಿತ ವಿದ್ಯಾಭ್ಯಾಸವೆಂದು ಅದಕ್ಕೆ ಸೇರಿ ನಾಲ್ಕು ವರ್ಷ ವ್ಯಾಸಂಗ ಮಾಡಿದ ವಿದ್ಯಾರ್ಥಿನಿಯರಿದ್ದಾರೆ. ಇದ್ದಕ್ಕಿದ್ದ ಹಾಗೆ ಈ ವರ್ಷದ ಆರಂಭದಲ್ಲಿ ಫೀಜು ಕೊಟ್ಟೇತೀರಬೇಕೆಂದು ಆಜ್ಞೆ ಬಂದದ್ದರಿಂದ ಅವರ ಗತಿಏನು, ಅವರೇನು ಮಾಡಬೇಕು? ಮೊದಲನೆಯ ವರ್ಷಕ್ಕೆ ಸೇರುವ ಹುಡುಗಿಯರು ಇದನ್ನು ತಿಳಿದು ಬೇರೆ ಕಾಲೇಜುಗಳಿಗೆ ಪ್ರವೇಶ ದೊರಕಿಸಿಕೊಂಡು ಹೋಗುತ್ತಿದ್ದಾರೆ. ಆದರೆ ಹಿಂದಿನಿಂದಲೂ ಓದುತ್ತಿದ್ದ ವಿದ್ಯಾರ್ಥಿನಿಯರ ಗತಿಏನು? ಫೀಜಿಲ್ಲದೆಂಬ ಧೈರ್ಯದಿಂದ ಹಿಂದೆ ಆ ವಿದ್ಯಾ ಮಂದಿರವನ್ನು ಪ್ರವೇಶಮಾಡಿದರು. ಆದರೆ ಈಗ ಹಾಗೆ ಮಾಡಿದರೆ, ಇನ್ನು ಮುಂದೆ ಅವರ ವಿದ್ಯಾಭ್ಯಾಸ ಎಷ್ಟು ಮಟ್ಟಿಗೆ ಮುಂದುವರಿಯುತ್ತದೆಂಬುದನ್ನು ನಾನು ಹೇಳುವುದಕ್ಕೆ ಬದಲು ಈ ಸಭೆಯಲ್ಲಿರುವ ಸೋದರ ಸದಸ್ಯರೇ ಯೋಚನೆ ಮಾಡಿ ತಮ್ಮ ಅಭಿಪ್ರಾಯವನ್ನು ಹೊರಗೆಡಹುವುದು ಉಚಿತವೆಂದು ಭಾವಿಸುತ್ತೇನೆ.

ಸ್ವಾಮಿ, ಆ ಮೇಲೆ ಇನ್ನೊಂದು ವಿಷಯ. ಈ ಪಾಠಶಾಲೆಗಳಿಗೆ ಸಂಗೀತ ಉಪಾಧ್ಯಾಯರುಗಳನ್ನು ನೇಮಿಸಿಕೊಳ್ಳುವಾಗ ಜನರಲ್ ಕ್ವಾಲಿಫಿಕೇಷನ್ S. S. L. C. ಪರೀಕ್ಷೆಯನ್ನು ಅವರು ಪಾಸ್‌ಮಾಡಿರಬೇಕೆಂದು ಪಬ್ಲಿಕ್ ಸರ್ವಿಸ್ ನಿಬಂಧನೆಗಳಲ್ಲಿ ಒಂದು ನಿರ್ಬಂಧವಿದೆ. ಅದು ಇರಬಾರದೆಂದು ನನ್ನ ಅಭಿಪ್ರಾಯ. ಈ ವರದಿಯಲ್ಲಿ ಎಂದರೆ, ಸುಧಾರಣಾ ಸಮಿತಿಯರು ಒಪ್ಪಿಸಿರತಕ್ಕ ವರದಿಯಲ್ಲಿ, ಈ ಒಂದು ನಿರ್ಬಂಧ ವಿರಬಾರದೆಂದು ತಿಳಿಸಿದೆ. ನಾನು ಇದನ್ನು

ಒಪ್ಪುತ್ತೇನೆ. ನಾನು ಇತ್ತೀಚೆಗೆ ಕೇಳಿದ್ದರಲ್ಲಿ ಬೆಂಗಳೂರು ಮಹಾರಾಣಿ ಕಾಲೇಜಿನಲ್ಲಿದ್ದ ಒಬ್ಬ ಸಂಗೀತ ಪಾಠದ ಉಪಾಧ್ಯಾಯನಿಯರ ಕೆಲಸ ಖಾಯಂಮಾಡಬೇಕಾಗಿದ್ದ ವೇಳೆಯಲ್ಲಿ ಆ ಹುದ್ದೆಯನ್ನು P. S. C. ಮುಖೇನ ಅಡ್ವರ್‌ಟೈಜ್ ಮಾಡಿಸಿದ್ದಾಗ ಆ ಹುದ್ದೆಗೆ ಒಬ್ಬ S.S.L.C. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮತ್ತು 27 ವರ್ಷವಯಸ್ಸಿನೊಳಗಿರತಕ್ಕಂಥ ಉಮೇದುವಾರರೇ ಬೇಕಾಗಿದೆಯೆಂದು ಸೂಚಿಸಲಾಗಿತ್ತೆಂದು ತಿಳಿದುಬಂದಿರುತ್ತದೆ. ಇಡೀ ಮೈಸೂರು ಸಂಸ್ಥಾನದಲ್ಲೇ ಏಕೆ, ಇಡೀ ದಕ್ಷಿಣ ಭಾರತದಲ್ಲೇ ಕನ್ನಡಿಗರಾಗಿ ಸಂಗೀತ ಶಾಸ್ತ್ರದಲ್ಲಿ ಅತ್ಯಂತ ಉನ್ನತ ಮಟ್ಟದ ಸಂಗೀತ ವಿದುಷಿಯೆಂದು ಪರಿಗಣಿಸಲಾಗಿದ್ದಂಥವರೊಬ್ಬರಿಗೆ, ಆ ರೀತಿಯಾಗಿ ಅಡರ್‌ಟೈಜ್ ಮಾಡಿದ್ದರಿಂದ, ಕೆಲಸ ದೊರೆಯದೆಹೋಗುವ ಸಂಭವವುಂಟಾಗಿದೆಯೆಂದು ಆ ಕೆಲಸಕ್ಕೆ ಈಗ ಬೇರೆ ಒಬ್ಬ ಸಂಗೀತ ಉಪಧ್ಯಾಯರನ್ನು ನೇಮಿಸಿಕೊಳ್ಳಲು ಏರ್ಪಾಡು ನಡೆಯುತ್ತಿದೆ ಎಂದು ಕೇಳುತ್ತೇನೆ. ಆದರೆ ಇದನ್ನು ನಾನೊಂದು ಆಕ್ರಮಣವೆಂದು ಹೇಳುವುದಿಲ್ಲ. ಅಂತೂ ಇನ್ನು ಮುಂದಕ್ಕೆ ಹಾಗೆ ಒಬ್ಬ ಮಹಿಳೆಯರಿಗೆ ದೊರಕಬೇಕಾಗಿದ್ದ ಸ್ಥಾನ ಅವರಿಗೆ ಲಭ್ಯವಾಗದೆ ಪುರುಷರಿಗೆ ದೊರೆಕುವಂತೆ ಅವಕಾಶ ಕಲ್ಪಿಸಿಕೊಟ್ಟ ಹಾಗೆ ಆಯಿ ಹೇಳಬಹುದು. ಇದೇ ಸಂದರ್ಭದಲ್ಲಿ ನಾನು ತಮಗೆ ತೆಂದು ಮತ್ತೊಂದು ಅಂಶವನ್ನು ತಮ್ಮೆಲ್ಲರ ಗಮನಕ್ಕೆ ತರಬೇಕೆಂದು ಇಚ್ಛಿಸಿದ್ದೇನೆ. ಹೀಗೆ P.S.C.ನಲ್ಲಿ ಈ ಸಂಗೀತ ಪಾಠ ಹೇಳತಕ್ಕವರಿಗೆ S.S.L.C. ಪರೀಕ್ಷೆ ಪಾಸ್ ಮಾಡಿರಬೇಕು, ಇವರು 27 ವರ್ಷ ವಯಸ್ಸಿನೊಳಗೇ ಇರಬೇಕು ಎಂಬ ನಿರ್ಭಂಧಗಳು ಇರುವುದು ಸರಿಯಲ್ಲವೆಂದು ವರದಿ ತಿಳಿಸಿರುವುದನ್ನು ಒಪ್ಪುತ್ತೇನೆ. ಇದು ಸಂಗೀತ ಪಾಠ ಹೇಳುವ ಉಪಾಧ್ಯಾಯರಿಗೆ ಹಾಕತಕ್ಕಂಥ ನಿರ್ಬಂಧಗಳಲ್ಲ.

ಒಟ್ಟಿನಲ್ಲಿ ಈ ಸುಧಾರಣೆಗಳನ್ನು ದೇಶದ ಹಿತದೃಷ್ಟಿಯಿಂದಲೇ ತಯಾರಿಸಿದ್ದಾರೆಂದು ಭಾವಿಸಿದರೂ ಕೂಡ ಇದಕ್ಕೆ ಬೇಕಾದ ಹಣವನ್ನು ಸರ್ಕಾರದವರು ಯಾವ ರೀತಿ ಒದಗಿಸುತ್ತಾರೆ ಎಂಬುದೇ ಇಂದು ನಮ್ಮ ಮುಂದೆ ನಿಂತಿರುವಂಥ ಒಂದು ದೊಡ್ಡ ಪೆಡಂಭೂತವಾದ ಪ್ರಶ್ನೆ. ಇದಕ್ಕೆ ಮಾನ್ಯ ಮಂತ್ರಿಗಳಿಂದ ಜವಾಬ್ ಬಂದ ನಂತರ ನಾವು ಇದನ್ನು ಪುನರ್ವಿಮರ್ಶೆ ಮಾಡಬೇಕಾಗಿರುತ್ತದೆ. ಇಷ್ಟೇ ಅಲ್ಲದೆ ಇಂಡಿಯಾ ಸರ್ಕಾರದವರ ಸೆಕಂಡರಿ ಎಜ್ಯುಕೇಷನ್‌ಬೋರ್ಡಿನವರ ವರದಿ ಬಂದ ನಂತರ ಇದನ್ನು ಪುನಃ ವಿಮರ್ಶೆ ಮಾಡಬೇಕಾಗಿರುತ್ತದೆ. ಆಗ ನಮಗೆ ಪುನಹ ಈ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಸೂಚಿಸಲು ಮತ್ತೊಂದು ಅವಕಾಶ ಸಿಕ್ಕುವುದಾಗಿರುವುದರಿಂದ ಈಗ ನಾನು ಇಂದಿನ ನಮ್ಮ ಮುಂದೆ ಇರತಕ್ಕ ಸುಧಾರಣೆಗಳ ಬಗ್ಗೆ ಈ ನನ್ನ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Mr. SPEAKER.—The House will now rise for lunch and meet again at 3-30 P.M.

The House adjourned for Lunch at Three Minutes past Three of the Clock and met again at Thirty Minutes past Three of the Clock.

[Mr. SPEAKER in the Chair.]

Sri V. M. MASCARENHAS (St. John's Hill).—Mr. Speaker, Sir, on this important subject of Educational Reform, when one has so much to say and so little time to say at his disposal, one is at a loss to know what to choose and what to omit. I shall therefore confine my attention to a few observations.

At the very outset, I must confess I am unable to understand the immediate and urgent need for educational reforms in the State at present, specially in regard to secondary and university stages. I stress upon the words 'immediate' and urgent'. Today, we are spending on education about Rs. $3\frac{3}{4}$ crores or roughly 30 per cent of our revenue and I do not know if we are in a position to spend more. Without this financial ability, I would like to ask the Government if any kind of reform contemplated in this Report is feasible. After the country has gained independence, the Governments at the Centre and in the States have realised that production in the country is most essential to raise the economic condition of the masses and towards this end, the country's programme has been made. Therefore, you will see in the Five-Year Plan more than 93 per cent of the outlay is being earmarked for Agriculture, Irrigation, Power, Industries, Social Services, Transport and Communication. It is true, Sir, there is a feeling in some circles that after Independence, our system of education needs a re-orientation. I will admit that. But whether drastic changes are necessary involving crores of rupees with mounting expenditure year after year is a problem that needs serious and careful consideration.

With these general remarks, Sir, I come to the report itself. I first touch upon primary education. My personal feeling is that the Committee has done its best as far as this part of the work is concerned. But their suggestion to do away with the screening test at the end of the primary course is, in my opinion, an unfortunate one. It is not wise to allow a large number of students almost lakhs, in the near future, to go into the secondary stage without some

(SRI V. M. MASCARENHAS).

kind of screening. I will read here with your permission, page 84 :

> "A system of cumulative records showing the continued progress all the time throughout the primary course should be introduced. Academic achievement, proficiency in craft, health, special aptitude, standard, of intelligence, etc., should be assessed from time to time by teachers and records."

I can only say, Sir, these are splendid ideas couched in good English prose. There ends the praise. Is it ordinarily possible when we have more than 5 lakhs of primary school children in the State that this kind of record can either be maintained or can it be perused ? I now come to the Intermediate Class. Here, I am constrained to remark that the recommendation of the Committee to divest the control of the University from the Intermediate Class, in my opinion, is an unfortunate one. Sir, the system of education as we have gone through is in three distinct stages. I would say the primary education belongs to childhood ;

Secondary education pertains to boyhood while the University Education pertains to youth. Well, now we are trying to disturb this system by making the Secondary Education increased by another two years and reducing the University Education from four to two. I am surprised that the Members of the Committee, most of whom were graduates, having themselves gone through a college should have made such a recommendation. If I remember aright, the experience of going to the college from the School Final or the Matriculate to the Junior Intermediate into an atmosphere which is something very strange is unique. Immediately the boy feels, 'I have come to an University'. This is a very healthy atmosphere. Why on earth we reduce this period ? The longer the boy or a girl is allowed to remain in this atmosphere, I personally feel, so much the better for him or for her. I would say there is a misgiving among the Members of the Committee that these Intermediate Colleges have unfortunately not lived up to our expectations. The fault was not theirs. I personally feel that they are ill-manned, ill-equipped and very often they are located in a rented building and you certainly cannot expect these Intermediate Colleges to do better than what they have done. I would suggest in the interest of University Education that these Intermediate Colleges are abolished and the Government seriously consider the question of having only First Grade Colleges. Then, naturally you will have first grade men to man these colleges and I am sure this step will automatically bring about a better college atmosphere. When one talks of reforms, specially in the University, one is tempted to ask, 'I say, but what is wrong'? You talk about reform when something is wrong. But, are we convinced that the University Education we have today is basically wrong ? My friend, Sri Bheemappa Naik, the other day, speaking on this very subject said that a system which produced a Raman, a Ghosh, a Bose and a Roy, and a host of other luminaries could not surely be wrong. I am inclined to have the same opinion, Sir. Coming nearer the point, I just want to illustrate my own experience 30 to 40 years ago. When India included Pakistan and Burma, students of Mysore, studying in the Central and Maharaja's Colleges, every year, out of a batch of hundreds when only three were selected, by merit it was a heartening sight to see that one seat out of these three was secured by Mysore Boys. Similarly, when the Indian Civil Service was thrown open to Native States, almost every year Mysore Boys had a seat in that coveted number of 8 or 10. Last week, I was perusing the list published when I. A. S. and I. P. S. candidates, were selected, what was my shock to read there the names of only two Mysore boys in a list of 300 ? Evidently something is wrong. Mysore once famous for its intelligence, has gone down. The ordinary standard of education has been lowered. The standard of Professors of the University and Colleges has deteriorated. There is no discipline in the schools and colleges. Sir, unless you remedy these basic defects where is the point of

your blaming the system ? You definitely can see that the graduates that pass out of these colleges to-day are in no way equal to those that passed out 30 years ago. They were certainly a better lot than what we have to-day. So, I am one of those who believe that the system is not radically wrong, but something else has happened. The University has become a seat of communalism. Boys go to colleges not because of their intelligence but because they belong to a particular group or community. University Colleges must change the mode of outlook if this country has to prosper. The other day one of my friends in this Assembly went to the extent of saying that jobs of the University must be fixed on communal basis and places should be reserved. I beg to differ from it and I call it a most retrograde step in the University. Sir, the University is a seat of learning to which people with hunger and thirst for knowledge proceed. If that is not so, what is the use of calling it a University ? It is unfortunate that in this Report I do not see any mention of this basic defect. The members of the Committee are fully aware of this because everyone of them has been saying that the standards are going lower and lower. But, why on earth this aspect has not been touched and remedies suggested ? In my opinion the very approach to the University is wrong. I suggest that this may be referred to the University or to another Committee to tell exactly how the University Education in this country should be modified. I do not wish to say more because there are many more who wish to speak. I congratulate the Members of the Committee for their work. They have meant well and they have done fairly well. Let me wish them all success.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈ ವಿದ್ಯಾಭ್ಯಾಸದ ಸುಧಾರಣಾ ಸಮಿತಿಯವರು ಮಾಡಿರತಕ್ಕಂಥ ಶಿಫಾರ್ಸುಗಳು ಅನೇಕವಾಗಿವೆ. ಸುಮಾರು 200 ಶಿಫಾರ್ಸುಗಳು ಸಮಿತಿಯ ವರದಿಯಲ್ಲಿ ಅಡಕವಾಗಿವೆ. ಅವೆಲ್ಲವನ್ನೂ ಈ ದಿವಸ ವಿಮರ್ಶೆಮಾಡುವುದಕ್ಕೆ ಸಾಧ್ಯವಿಲ್ಲ ಮತ್ತು ಈ ಎಲ್ಲ ಶಿಫಾರ್ಸುಗಳ ವಿಮರ್ಶೆ ಕೂಡ ಈಗ ಸದ್ಯಕ್ಕೆ ಅನಾವಶ್ಯಕವಾಗಿದೆ. ಈ ವಿದ್ಯಾಭ್ಯಾಸವನ್ನು ಸಾಮಾನ್ಯವಾಗಿ ಪ್ರೈಮರಿ, ಮಿಡ್ಲ್, ಸೆಕೆಂಡರಿ, ಯೂನಿವರ್ಸಿಟಿ ಎಂಬುದಾಗಿ 4 ದೊಡ್ಡ ಭಾಗಗಳಾಗಿ ವಿಂಗಡಿಸಬಹುದು. ಈ ಸಮಿತಿಯವರು ಪ್ರತ್ಯೇಕ ಪ್ರತ್ಯೇಕವಾಗಿ ಔದ್ಯೋಗಿಕ ಶಿಕ್ಷಣದ ಭಾಗವನ್ನೂ ಕೂಡ ವಿಮರ್ಶೆ ಮಾಡಿದ್ದಾರೆ. ಹಾಗೆಯೇ ಉಪಾಧ್ಯಾಯರ ತರಬೇತು ಶಿಕ್ಷಣವನ್ನೂ ವಿಮರ್ಶೆಮಾಡಿದ್ದಾರೆ ಮತ್ತು ವಯಸ್ಕರ ಶಿಕ್ಷಣದ ವಿಚಾರವನ್ನೂ ವಿಮರ್ಶೆಮಾಡಿದ್ದಾರೆ. ಇದರಂತೆ ಮಹಿಳೆಯರ ಶಿಕ್ಷಣ ವಿಚಾರವನ್ನೂ ಪ್ರತ್ಯೇಕವಾಗಿ ವಿಮರ್ಶೆ ಮಾಡಿದ್ದಾರೆ. ಈಗ ನಮ್ಮ ದೇಶದ ಮುಂದೆ ಈ ವಿದ್ಯಾಭ್ಯಾಸದ ಸಮಸ್ಯೆ ಒಂದು ದೊಡ್ಡ ಆರ್ಥಿಕ ಸಮಸ್ಯೆಯಾಗಿ ಪರಿಣಮಿಸಿದೆ. ಈ ವಿದ್ಯಾಭ್ಯಾಸಕ್ಕೂ ಮತ್ತು ನಮ್ಮ ಸಮಾಜದ ಆರ್ಥಿಕ ಸ್ಥಿತಿಗೂ ಬಹಳ ಸಂಬಂಧವಿದೆ. ವಿದ್ಯಾಭ್ಯಾಸದ ಸಮಸ್ಯೆ ಸರ್ಕಾರಕ್ಕೆ ಹಣಕಾಸಿನ ಸಮಸ್ಯೆಯಾಗಿದೆ. ಅವರು ಮಾಡಿರತಕ್ಕಂಥ ಶಿಫಾರ್ಸುಗಳಲ್ಲಿ ಯಾವುದನ್ನು ಎಷ್ಟರ ಮಟ್ಟಿಗೆ ಯಾವ ಕಾಲದಲ್ಲಿ ಜಾರಿಗೆ ತರಬೇಕು ಎಂಬುದನ್ನು ಯೋಚನೆಮಾಡುವಾಗ ಹಣದ ಪ್ರಶ್ನೆ ಅದರ ಹಿಂದೆಯೇ ಬರುತ್ತದೆ. ಹಾಗೆಯೇ ನಮ್ಮ ಸಮಾಜದಲ್ಲಿ ಈ ವಿದ್ಯಾಭ್ಯಾಸ ಸಮಸ್ಯೆ ಒಂದೊಂದು ವ್ಯಕ್ತಿಗೂ ಒಂದೊಂದು ಸಂಸಾರಕ್ಕೂ, ಒಂದೊಂದು ಗೃಹ ಕೃತ್ಯಕ್ಕೂ ಕೂಡ ಆರ್ಥಿಕ ಸಮಸ್ಯೆಯಾಗಿ ಪರಿಣಮಿಸಿದೆ. ವಿದ್ಯಾಭ್ಯಾಸ ಪೂರ್ವದಲ್ಲಿ ಯಾವ ಒಂದು ಶುದ್ಧ ಭಾವನೆಯಿಂದ, ನಿರಪೇಕ್ಷವಾದ ಭಾವನೆಯಿಂದ ನಡೆಯುತ್ತಿತ್ತೋ ಆ ರೀತಿಯಾಗಿ ಈಗಲೂ ನಡೆಯುತ್ತದೆಂದು ಪರಿಗಣಿಸಲು ಸಾಧ್ಯವಿಲ್ಲ.

ವಿದ್ಯಾಭ್ಯಾಸ ಹೊಂದಿದವನು ಸುಸಂಸ್ಕೃತನಾಗುತ್ತಾನೆ, ಬುದ್ಧಿ ಶಾಲಿಯಾಗುತ್ತಾನೆ ಮತ್ತು ನಾಗರಿಕ ಪ್ರಜೆ ಅನ್ನಿಸಿಕೊಳ್ಳುತ್ತಾನೆ ಎಂಬುದರ ಫಲಿತಾಂಶವನ್ನು ನಿರೀಕ್ಷಿಸುವುದಕ್ಕೆ ಅವನು ತನ್ನ ಜೀವನ ನಿರ್ವಹಣೆಯನ್ನು ಯಾವ ರೀತಿ ಮಾಡುವುದು ಸಾಧ್ಯ ಎಂಬುದನ್ನ ವಿಮರ್ಶೆಮಾಡಬೇಕಾಗುತ್ತದೆ. ವಿದ್ಯಾಭ್ಯಾಸ ಸಮಸ್ಯೆಯನ್ನೂ ಶುದ್ಧವಾಗಿ ಪ್ರಥಮವಾಗಿ ನಾವು ಪರಿಗಣಿಸಲುಪಕ್ರಮಿಸಿದರೆ ಇದರ ಮಹತ್ವ ನಮಗೆ ಕಂಡು ಬರುತ್ತದೆ. ಇದನ್ನು ಪ್ರಯೋಗದಲ್ಲಿ ತರಬೇಕಾದರೆ ಈ ಸಮಸ್ಯೆಯು ಆರ್ಥಿಕ ಸಮಸ್ಯೆಯನ್ನು ಅವಲಂಬಿಸಿದೆ. ಈಗ ಪ್ರಾಥಮಿಕ ವಿದ್ಯಾಭ್ಯಾಸ ಮಟ್ಟದಲ್ಲಿ, ಪ್ರೈಮರಿ ವಿದ್ಯಾಭ್ಯಾಸ ಮಟ್ಟದಲ್ಲಿ, ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸ ಮಟ್ಟದಲ್ಲಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸ ಮಟ್ಟದಲ್ಲಿ, ಮತ್ತು ಹೈಸ್ಕೂಲು ವಿದ್ಯಾಭ್ಯಾಸ ಮಟ್ಟದಲ್ಲಿ ಸರ್ಕಾರದವರು ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೋ ಮತ್ತು ಆ ವ್ಯಕ್ತಿಯ ತಂದೆ ತಾಯಿಗಳು ವಿದ್ಯಾಭ್ಯಾಸಕ್ಕಾಗಿ ಎಷ್ಟು ವ್ಯಯ ಮಾಡುತ್ತಿರುತ್ತಾರೋ ಅದಕ್ಕೆ ತಕ್ಕ ಫಲ ಬರುತ್ತಿಲ್ಲ. ಬಹಳ wastage ಆಗುತ್ತಿದೆ. ನಮ್ಮ ಸಂಸ್ಥಾನದಲ್ಲಿ ಮೂರು ಕೋಟಿಗಿಂತಲೂ ಹೆಚ್ಚು ಹಣವು ವಿದ್ಯಾಭ್ಯಾಸಕ್ಕಾಗಿ ವ್ಯಯವಾಗುತ್ತಿದೆ. ಆದರೆ ಈ ಮೂರು ಕೋಟಿ ರೂಪಾಯಿಗಳಲ್ಲಿ ಪ್ರತಿಯೊಂದು ರೂಪಾಯಿಯೂ ಸಹ ಸರಿಯಾಗಿ ವ್ಯಯವಾಗುತ್ತಿದೆಯೇ, ತಕ್ಕ ಫಲ ನಮ್ಮ ಸಂಸ್ಥಾನದ ಪ್ರಜೆಗಳಿಗೆ ಮತ್ತು ವ್ಯಕ್ತಿಗಳಿಗೆ ಬರುತ್ತಿದೆಯೇ ಎಂಬುದನ್ನೂ ನಾವು ನೋಡಬೇಕಾಗಿದೆ. ಇದನ್ನು ನೋಡಿದರೆ ಪೂರ್ಣ ಫಲ ಲಭಿಸುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದುದರಿಂದ ಈಗ ನಾವು ಇದಕ್ಕಾಗಿ ಮೀಸಲಾಗಿಟ್ಟಿರುವ ಹಣವು ಸರಿಯಾಗಿ ವ್ಯಯವಾಗುವ ರೀತಿ ಅನುಕೂಲವಾದ ಶಿಫಾರ್ಸು ಸಮಿತಿಯವರು ಮಾಡಿರುತ್ತಾರೆಯೇ ಎಂಬುದನ್ನು ನೋಡಬೇಕು. ವಿದ್ಯಾಭ್ಯಾಸದ ವಿಚಾರದಲ್ಲಿ ವಿಶಾಲ ಭಾವನೆಯನ್ನೂ ಹೊಂದಿ ವಿದ್ಯಾಭ್ಯಾಸವು ಪ್ರತಿಯೊಂದು ಮಗುವಿನ ಆಜನ್ಮಸಿದ್ಧವಾದ ಹಕ್ಕು ಎಂದು ತಿಳಿಯಬೇಕು. ಈ ಆಜನ್ಮಸಿದ್ಧ ಹಕ್ಕನ್ನು ಎಲ್ಲಿಯವರೆಗೆ ಎಷ್ಟು ವಯಸ್ಸಿನವರೆಗೆ

(ಶ್ರೀ ಪಿ. ಆರ್. ರಾಮಯ್ಯ.)

ಸಮಾಜ ಮತ್ತು ಸರ್ಕಾರ ಒದಗಿಸಿಕೊಡಬೇಕೆಂಬುದನ್ನು ಯೋಚಿಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಈ ವಿಚಾರವಾಗಿ ನಮ್ಮ ರ್‍ಯಾಜ್ಯಾಂಗದಲ್ಲಿ 6 ವರ್ಷದಿಂದ ಹಿಡಿದು 14 ವರ್ಷದವರೆಗೆ ಪ್ರತಿ ಮಗುವಿಗೂ ಸಹ ಸಾಧ್ಯವಾದ ಮಟ್ಟಿಗೂ ಉಚಿತವಾಗಿ ಬಲಾತ್ಕಾರ ವಿದ್ಯಾಭ್ಯಾಸವನ್ನು ಸರ್ಕಾರ ಕೊಡಲೇಬೇಕೆಂಬುದಾಗಿ ವಿಧಾಯಕವಾಗಿದೆ. ಈ ಆಜನ್ಮ ಸಿದ್ಧವಾದ ಹಕ್ಕನ್ನು ಆಗಮಾಡಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಆದುದರಿಂದ ನಾವು ಇದನ್ನು ವಿಮರ್ಶೆಮಾಡುವಾಗ ಯಾವುದಕ್ಕೆ ಹೆಚ್ಚಿನ ಗಮನ ಕೊಡಬೇಕು, ಯಾವುದು ವಿದ್ಯೆಗೆ ಅಡಿಪಾಯವಾದುದು ಎಂಬುದನ್ನು ಗಮನಿಸಬೇಕಾಗಿದೆ. ಈ ವಿಚಾರವಾಗಿ ಈಗಾಗಲೆ ಹಿಂದಿನ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಯಲ್ಲೂ ಮತ್ತು ಇಂದಿನ ಶಾಸನ ಸಭೆಗಳಲ್ಲೂ ಸರ್ವರೂ ಪ್ರೈಮರಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳಿರುತ್ತಾರೆ. ಪ್ರತಿಯೊಬ್ಬರೂ ಈಗಿನ ಸಂದರ್ಭದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ನಂತರ ಸೆಕೆಂಡರಿ ವಿದ್ಯಾಭ್ಯಾಸ, ಅನಂತರ ಹೈಸ್ಕೂಲು ವಿದ್ಯಾಭ್ಯಾಸ, ಅನಂತರ ಯೂನಿವರ್ಸಿಟಿ ವಿದ್ಯಾಭ್ಯಾಸ ಎಂದುಕೊಂಡು ಸುಮ್ಮನೆ ಈ ವಿದ್ಯಾಭ್ಯಾಸದಲ್ಲಿ ತೊಡಗುವ ಬದಲು ಯಾವ ರೀತಿಯ ವಿದ್ಯಾಭ್ಯಾಸ ಕ್ರಮ ಮಾನವನಿಗೆ ಉದ್ಯೋಗವನ್ನು ಕಲ್ಪಿಸಿಕೊಳ್ಳುವುದಕ್ಕೆ, ಜೀವನ ಪಥವನ್ನು ಸುಗಮವಾಗಿ ಸಾಗಿಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಯೋಚಿಸಬೇಕು. ಹೀಗೆ ಯೋಚನೆ ಮಾಡಿದರೆ ಮೊದನೆಯದಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ಈಗ ನಮ್ಮ ಸಂಸ್ಥಾನದಲ್ಲಿ ನರ್ಸರಿ ಸ್ಕೂಲುಗಳ ವಿಚಾರವನ್ನು ನಾನು ಹೆಚ್ಚಾಗಿ ಪ್ರಸ್ತಾಪಿಸುವುದಿಲ್ಲ. ಏಕೆಂದರೆ, ನರ್ಸರಿ ಸ್ಕೂಲ್‌ಗಳನ್ನು ಸರ್ಕಾರದವರು ಎಲ್ಲಾ ಕಡೆಯೂ ಸ್ಥಾಪಿಸುವುದಕ್ಕಾಗುವುದಿಲ್ಲ. ಆದುದರಿಂದ ಅದನ್ನು ಕೈಬಿಟ್ಟಿರುತ್ತಾರೆ. ಮೂರು ವರ್ಷದಿಂದ ಆರು ವರ್ಷದವರೆಗೆ ನರ್ಸರಿ ಸ್ಕೂಲ್‌ಗಳನ್ನು ಪ್ರತ್ಯೇಕವಾಗಿ ಖಾಸಗೀ ಸಂಸ್ಥೆಗಳು ಮಾಡಬೇಕೆಂದು ಹೇಳಿರುತ್ತಾರೆ. ಪ್ರೈಮರಿ ವಿದ್ಯಾ ವ್ಯಾಸಂಗವನ್ನು 6 ನೆಯ ವರ್ಷದಿಂದ ಪ್ರಾರಂಭಿಸಬೇಕೆಂದು ಹೇಳಿರುತ್ತಾರೆ. ಐದನೆಯ ವರ್ಷದಿಂದಲೇ ಈ ವ್ಯಾಸಂಗವನ್ನು ಪ್ರಾರಂಭಿಸಬೇಕೆಂದು ನನ್ನ ಸ್ವಂತ ಅಭಿಪ್ರಾಯ. ಪ್ರಾಚೀನ ಪದ್ಧತಿಯ ಪ್ರಕಾರವೂ ಐದನೆಯ ವರ್ಷವೇ ವ್ಯಾಸಂಗದ ಪ್ರಾರಂಭಕ್ಕೆ ಯೋಗ್ಯವಾದ ವರ್ಷ.

ನರ್ಸರಿ ಸ್ಕೂಲ್‌ಗಳ ವಿಚಾರವಾಗಿ ಸೂಕ್ಷ್ಮವಾಗಿ ಕೆಲವು ಅಂಶಗಳನ್ನು ತಿಳಿಸುತ್ತೇನೆ. ನರ್ಸರಿ ಸ್ಕೂಲ್‌ಗಳನ್ನು ಏರ್ಪಡಿಸುವುದು ಮತ್ತು ಅವುಗಳಿಂದ ಆಗತಕ್ಕ ಫಲ—ಈ ಬಗ್ಗೆ ಹೆಚ್ಚಾಗಿ ವಿಮರ್ಶೆಮಾಡಲು ಪ್ರಯತ್ನಿಸುವುದಿಲ್ಲ. ಮನಶ್ಶಾಸ್ತ್ರಜ್ಞರು ಅನೇಕ ವಿಧವಾಗಿ ವಿಮರ್ಶೆಮಾಡಿ ಇದು ಅತ್ಯಾವಶ್ಯಕ ಎಂದು ಹೇಳಿರುತ್ತಾರೆ. ನಾನು ಓದಿರತಕ್ಕ ಕೆಲವು ಗ್ರಂಥಗಳ ಆಧಾರದ ಮೇಲೆ ಹೇಳುವುದಾದರೆ, ಚಿಕ್ಕ ಮಕ್ಕಳನ್ನು ಮೂರು ವರ್ಷದಿಂದ ನರ್ಸರಿ ಸ್ಕೂಲಿಗೆ ಕಳುಹಿಸುವುದು ಬಹಳ ಕಷ್ಟವಾಗುತ್ತದೆ. ಚಿಕ್ಕ ಮಕ್ಕಳಿಗೆ ಬುದ್ಧಿ ರೂಪುಗೊಳ್ಳುವ ಕಾಲವದು. ಆ ಕಾಲದಲ್ಲಿ ತಂದೆ ತಾಯಿಗಳು ಮನೆಯಲ್ಲಿ ಹೆಚ್ಚಾಗಿ ಚಿಕ್ಕ ಮಕ್ಕಳ ವಿದ್ಯೆಗೆ ಗಮನ ಕೊಟ್ಟು ತರಬೇತು ಮಾಡಬೇಕು.

ವಿದ್ಯಾ ಸುಧಾರಣಾ ಸಮಿತಿಯವರು ಪ್ರಾಥಮಿಕ ವಿದ್ಯಾಭ್ಯಾಸ ಆರು ವರ್ಷ, ಮಿಡ್ಲ್ ಸ್ಕೂಲ್ ಮತ್ತು ಹೈಸ್ಕೂಲ್ ಸೇರಿಸಿ, ಜೂನಿಯರ್ ಹೈಸ್ಕೂಲ್ ನಾಲ್ಕು ವರ್ಷ, ಇಂಟರ್ ಮೀಡಿಯಟ್ ಸೇರಿಸಿ ಸೀನಿಯರ್ ಹೈಸ್ಕೂಲ್ ನಾಲ್ಕು ವರ್ಷ ಎಂಬುದಾಗಿ ಮಾಡಿರುತ್ತಾರೆ. ಇದು ಬಹಳ ತೊಡಕಾದ ಸಮಸ್ಯೆ. ಸಾಮಾನ್ಯವಾಗಿ ಇಂಡಿಯಾ ಸರ್ಕಾರದವರು ನಮ್ಮ ದೇಶದ ಎಲ್ಲಾ ವಿದ್ಯಾಭ್ಯಾಸ ಪಾರಂಗತರೂ ಅಭಿಪ್ರಾಯಪಟ್ಟಿರುವುದರಲ್ಲಿ ಪ್ರೈಮರಿ ವಿದ್ಯಾಭ್ಯಾಸ ಕ್ರಮದಲ್ಲಿಯೇ ಬೇಸಿಕ್ ಎಜ್ಯುಕೇಷನ್ ಎಂದರೆ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವುದು ಒಳ್ಳೆಯದು ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ ನಮ್ಮ ಈ ಶಿಫಾರ್ಸುಗಳಲ್ಲಿ ಆ ತತ್ವವನ್ನೇನೋ ಒಪ್ಪಿಕೊಂಡಿರುತ್ತಾರೆ.

> "Basic Education is an accepted good. It forms the foundation of the national education policy for the age group 6--14 years."

ಎಂಬುದಾಗಿ ಹೇಳಿರುತ್ತಾರೆ. ಈ ಮೂಲ ಶಿಕ್ಷಣ ಪದ್ಧತಿಯ ಪ್ರಕಾರ ಹಲವಾರು ನೂತನ ಕೆಲಸಗಳನ್ನು ಗೃಹಕೈಗಾರಿಕೆಗೆ ಸಂಬಂಧಿಸಿದ ಕೆಲಸಗಳನ್ನು 6-14 ವರ್ಷದವರು ಕಲಿಯಬೇಕಾಗಿದೆ.

4 P.M.

ಶ್ರೀ ಪಿ. ಆರ್. ರಾಮಯ್ಯ.—ಇವೆಲ್ಲಾ 6 ವರ್ಷದ ಪ್ರೈಮರಿ ಸ್ಕೂಲಿನಲ್ಲ ಸೇರಿಸಿದ್ದಾರೆ. ಬೇಸಿಕ್ ವಿದ್ಯಾಭ್ಯಾಸದ ಮುಖ್ಯ ತತ್ವವೇನೆಂದರೆ, ಯಾವುದಾದರೂ ಒಂದು ಕೈಕಸಬನ್ನೇ ಕೇಂದ್ರವಾಗಿಟ್ಟುಕೊಂಡು ಕೈಕಸಬಿನ ಮುಖಾಂತರ ಬಾಕಿ ಎಲ್ಲಾ ವಿಷಯಗಳನ್ನು ತಿಳಿಸಬೇಕು. ಈ ಅಕ್ಷರಗಳನ್ನು ತಿಳಿಸುವುದು—3 R's- ಮುಖ್ಯವಾದವಲ್ಲ; ಕೈಕಸಬನ್ನೇ ಕೇಂದ್ರವಾಗಿಟ್ಟುಕೊಂಡು ಕಲಿಸಬೇಕೆಂದು ಹೇಳುತ್ತಾರೆ. ಆದ್ದರಿಂದ ನಮ್ಮ ಪ್ರೈಮರಿ ಸ್ಕೂಲುಗಳಲ್ಲಿ ಈ ಕಸಬುಗಳನ್ನೆಲ್ಲಾ ಕಲಿಸಬೇಕಾದರೆ ಯಾವರೀತಿಯಾಗಿ ತಾವು ಮಾಪರ್ಾಟು ಮಾಡಬೇಕು, ತಮ್ಮ aim ಏನು ಎಂಬ ವಿವರ ಇಲ್ಲ. ಹೇಗಾದರೂ ಆಗಲಿ. ಮುಖ್ಯವಾಗಿ ಗ್ರಾಮಾಂತರಗಳಲ್ಲಿ ಈ ಕಸಬುಗಳ ವಿಷಯಕ್ಕೆ ಹೆಚ್ಚು ಗಮನಕೊಡಬೇಕು. ಒಂದು ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಮಹಾತ್ಮಾ ಗಾಂಧಿಯವರು ಈ ಒಂದು ಕೈಕಸಬನ್ನೇ ಕೇಂದ್ರವಾಗಿಟ್ಟುಕೊಂಡು ಶಿಕ್ಷಣ ಕಲಿಸಬೇಕೆಂಬ ವಿಷಯವನ್ನು ಹೇಳಿದರು. ಸಾಮಾನ್ಯವಾಗಿ ಮನಶ್ಶಾಸ್ತ್ರಜ್ಞರಲ್ಲಿ ಅಗ್ರಗಣ್ಯರಾಗಿರತಕ್ಕವರೆಲ್ಲರೂ ಈ ವಿದ್ಯಾಭ್ಯಾಸ ಪದ್ಧತಿಯಲ್ಲಿ ಯಾವ ಬದಲಾವಣೆಯಾಗಬೇಕೆಂಬ ವಿಷಯವನ್ನು ಪರ್ಯಾಲೋಚಿಸಿ ಈ ಒಂದು ವಿಷಯವನ್ನು ಸೂಚನೆಮಾಡಿದ್ದಾರೆ. ಚಿಕ್ಕ ಮಕ್ಕಳಿಗೆ ಕಲತುಕೊಳ್ಳಬೇಕು ಎಂಬ ಮನೋಭಾವ ಬರಬೇಕಾದರೆ ಒಂದು ಇನ್‌ಸೆಂಟೀವ್ ಬೇಕು, ಎಂದರೆ, ಮನಸ್ಸಿನಲ್ಲಿ ಆತ್ಮಪ್ರೇರಣೆಯಾಗಬೇಕು. ಅದು ಹೇಗೆ ಬರುತ್ತದೆ? ಉಪಾಧ್ಯಾಯರು ಅಕ್ಷರಗಳನ್ನು ಹೇಳಿಕೊಡುವುದರಿಂದ ಬರುತ್ತದೆಯೋ ಎಂದರೆ ಬರುವುದಿಲ್ಲ. ಅದು ಕೈಕಸಬಿನಿಂದಲೇ ಸಾಧ್ಯ ಎಂದು ಹೇಳುತ್ತಾರೆ. ಈಗಿನ ವಿದ್ಯಾಭ್ಯಾಸದಲ್ಲಿ Competitive spirit ಇದೆ. 60 ಜನ ಹುಡುಗರಿದ್ದರೆ ಅವರೆಲ್ಲರಿಗಿಂತ ಮೇಲೆ ಬರಬೇಕೆಂಬ competition ನಲ್ಲಿ ಹುಡುಗನ ಒಳಗೆ ಇರತಕ್ಕ ಯಾವ ಒಂದು ಸಾಮರ್ಥ್ಯ ಇದೆಯೋ ಅದು ಹೊರಕ್ಕೆ ಬರಲು ಮಾರ್ಗವಿಲ್ಲ. ಆ ಸಾಮರ್ಥ್ಯ ಹೊರಗೆ ಬರಬೇಕಾದರೆ ಒಂದು

ಇಕಸೆಂಟೀವ್ ಎಂದರೆ ವೊಕೇಷರ್ ಇರಬೇಕೆಂದು ಹೇಳುತ್ತಾರೆ. ಅದನ್ನು ಓದುತ್ತೇನೆ:

"In any case the problem of incentives in education remains, and here the arguments presented by advocates of vocational school are valid. Without some concrete practical problem which is in itself arousing interest, the teacher must rely upon his own personality, upon comparatively feeble indirect inducements, or upon the competitive spirit."

ಕಾಂಪಿಟೇಟೀವ್ ಸ್ಪಿರಿಟ್ ಎನ್ನುವುದು ವಿದ್ಯಾಭ್ಯಾಸದ ಪದ್ಧತಿಯಲ್ಲಿ ಹೋಗಬೇಕೆಂಬುದು ಅನೇಕ ಮನಶ್ಯಾಸ್ತ್ರಜ್ಞರ ಅಭಿಪ್ರಾಯ.

All these are motives which in comparison with a genuine interest in the work itself are of low educational value. The most reliable incentive, and the one most worth developing, is the pupil's own sense of his growing command of the subject; for this springs from the self-regarding sentiment which is the nucleus of the personality. Thus a practical recommendation of some importance is that children should be encouraged constantly to measure their capacities not against those of others, but against their own at an earlier stage, and in particular to reflect upon the means by which the improvement has been brought about.

ಆದ್ದರಿಂದ ಅದು ಈಗ ಆಗಬೇಕಾದರೆ ಯಾವುದಾದರೂ ಒಂದು ವೊಕೇಷರ್ಬೇಕೆಂದು ಅವರು ಹೇಳಿದ್ದಾರೆ. ಮುಖ್ಯವಾಗಿ ನಮ್ಮ ಇವೊತ್ತಿನ ವಿದ್ಯಾಭ್ಯಾಸದ ಕ್ರಮದಲ್ಲಿ ಎರಡು ಲೋಪಗಳಿವೆ. ಒಂದು ಕಾಂಪಿಟೇಟೀವ್ ಸ್ಪಿರಿಟ್. ಕಾಂಪಿಟೇಟೀವ್ ಸ್ಪಿರಿಟ್ ನಿಂದ ಮೊದಲೇ ಆ ಒಂದು ಮನೋಭಾವ ಒಂದು ಒಟ್ಟು ವಿದ್ಯಾರ್ಥಿಗಳಲ್ಲಿ ಒಂದು ಮೈತ್ರಿಯಾಗಲಿ, ಸಹಕಾರ ಭಾವನೆಯಾಗಲಿ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ. ಅದನ್ನು ಹೋಗಲಾಡಿಸಬೇಕು. ಎರಡನೆಯದು ಬರೀ ಅಕ್ಷರ ವಿದ್ಯೆಗೆ ಪ್ರಾಧಾನ್ಯತೆ ಕೊಡದೆ ಒಂದು ವೊಕೇಷರ್ ಎಂದರೆ ಯಾವುದಾದರೂ ಒಂದು ಕಸಬನ್ನೇ ಕೇಂದ್ರವಾಗಿಟ್ಟುಕೊಂಡು ಶಿಕ್ಷಣ ಕೊಡಬೇಕು. ಹಾಗೆ ಕೊಟ್ಟರೆ ಆ ವಿದ್ಯಾರ್ಥಿಯ ಒಳಗಿರತಕ್ಕ ಸಾಮರ್ಥ್ಯಗಳು ಹೊರಗಡೆ ಬರಲಿಕ್ಕೆ ಅವಕಾಶವಾಗುತ್ತದೆ ಎಂದು ಮನಶ್ಯಾಸ್ತ್ರಜ್ಞರು ಹೇಳಿದ್ದಾರೆ. ಆದ್ದರಿಂದ ಆ ತತ್ವವನ್ನನುಸರಿಸಿ ಕೆಲಸ ಮಾಡಿದರೆ ಬೇಸಿಕ್ ಎಜ್ಯುಕೇಷರ್ ಕ್ರಮವನ್ನು ನಾವು ಜಾರಿಗೆ ತರಬೇಕು. ಈ ಬೇಸಿಕ್ ಎಜ್ಯುಕೇಷರ್ ತತ್ವದಲ್ಲಿ ಯಾವರೀತಿಯಾಗಿ ಆದರೂ ಒಂದು compromise ಮಾಡಿ ಅದರಲ್ಲಿ ಸರಿಯಾಗಿ ಕೆಲಸವಮಾಡದೇ ಹೋದರೆ ಅದರ ಪೂರ್ಣಫಲ ದೊರೆಯುವುದಿಲ್ಲ. ಆ ದೃಷ್ಟಿಯಿಂದ ನೋಡಿದರೆ ಈಗ ಬೇಸಿಕ್ ಎಜ್ಯುಕೇಷರ್ ಎಂಬುದು 8 ವರ್ಷ ಇದೆ. ಈ 8 ವರ್ಷ ಎನ್ನುವುದನ್ನು ಇಂಡಿಯಾ ಸರ್ಕಾರದವರು ಹೇಳಿದ್ದಾರೆ; ದೊಡ್ಡದೊಡ್ಡ ವಿದ್ಯಾಪಾರಂಗತರು ಹೇಳಿದ್ದಾರೆ. ಆ ದೃಷ್ಟಿಯಿಂದ 4 ವರ್ಷ ಇದ್ದದ್ದು 6 ವರ್ಷ ಮಾಡುವುದಕ್ಕಿಂತ ಅಖಂಡವಾಗಿ 8 ವರ್ಷ ಬೇಸಿಕ್ ಎಜ್ಯುಕೇಷರ್ ಸಿಸ್ಟಂ ಏರ್ಪಾಡು ಮಾಡಬೇಕು. ಅದನ್ನೇ ಬೇಕಾದರೆ ಪ್ರೈಮರಿ ಅಥವಾ ಎಲಿಮೆಂಟರಿ ಎಂದು ಕರೆಯಿರಿ. ಯಾವರೀತಿಯಾಗಿ ಆದರೂ ಬದಲಾವಣೆ ಮಾಡಿ 8 ವರ್ಷ ಅಖಂಡವಾಗಿ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಗೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರವಲ್ಲದೆ ಇತರ ಪ್ರದೇಶಗಳಲ್ಲೂ ಕೂಡ ಶಿಕ್ಷಣ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕು. ಅದನ್ನು ಈಗಿರತಕ್ಕ ನಮ್ಮ ಪದ್ಧತಿಗೆ ಹೊಂದಿಸಿಕೊಳ್ಳಬಹುದು. ಈಗ 4 ವರ್ಷ ಪ್ರೈಮರಿ, 4 ವರ್ಷ ಮಿಡ್ಲ್‌ಸ್ಕೂಲ್ ಇದೆ. ಈ ಮಿಡ್ಲ್‌ಸ್ಕೂಲ್‌ಗಳನ್ನು ಪ್ರತಿಯೊಂದು ಗ್ರಾಮದಲ್ಲೂ ತೆಗೆಯುವ ಏರ್ಪಾಡು ಮಾಡಬೇಕು. ಇವೊತ್ತಲ್ಲ ನಾಳೆಯಾದರೂ ಮಾಡಬೇಕಾಗುತ್ತದೆ. ಇದು ಒಂದೇ ದಿವಸದಲ್ಲಿ ಆಗತಕ್ಕ ಕೆಲಸವಲ್ಲ, ಕೆಲವುಕಾಲ ಹಿಡಿಯಬಹುದು. ಎಲ್ಲೆಲ್ಲಿ ಪ್ರೈಮರಿ ಸ್ಕೂಲ್ ಎಂದು ಇದೆಯೋ ಅಲ್ಲೆಲ್ಲಾ 8 ವರ್ಷಕಾಲ ಈ ಪಾಠ ಆಗುವಹಾಗೆ ಏರ್ಪಾಡು ಮಾಡಬೇಕು.

ಇನ್ನೊಂದು ಮುಖ್ಯವಾದ ವಿಚಾರ ಎಂದರೆ ಕಾಲದ ವಿಷಯ. ಇದರಲ್ಲಿ ಪ್ರಾತಃಕಾಲ ಶಾಲೆ ಮಾಡಬೇಕೆಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯದು. ಈ ವಿಷಯದಲ್ಲಿ ಯಾರಿಗೂ ಕಾಯಬೇಕಾಗಿಲ್ಲ. ಪ್ರಾತಃಕಾಲದಲ್ಲಿ ಪ್ರೈಮರಿ ಸ್ಕೂಲ್ ನಡೆಯಬೇಕೆಂಬ ಶಿಫಾರಸನ್ನು ಕೂಡಲೇ ಕಾರ್ಯಗತಮಾಡಬಹುದು ಎಂದು ಹೇಳುತ್ತೇನೆ. ಈ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇರಲಾರದು. ರಜಾ ಕೊಡತಕ್ಕ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ನಮ್ಮ ದೇಶದ ಸ್ಥಿತಿಗತಿಗನುಗುಣವಾಗಿ ರಜಾ ಪದ್ಧತಿ ಏರ್ಪಾಡಾಗಬೇಕು. ಕಾಲೇಜಾಗಲೀ, ಸೆಕೆಂಡರಿ ಎಜ್ಯುಕೇಷರ್ ಆಗಲಿ, ಪ್ರೈಮರಿ ಎಜ್ಯುಕೇಷರ್ ಆಗಲೀ ಜಾಕೊಡತಕ್ಕ ಪದ್ಧತಿ, ಕಾಲಕ್ರಮ ಸರಿಯಾಗಿಲ್ಲ. ನಮ್ಮ ದೇಶ ಮಳೆಗಾಲದಲ್ಲಿ ಮಳೆ ಚೆನ್ನಾಗಿ ಬರತಕ್ಕ ದೇಶ. ಸುಮಾರು 4 ತಿಂಗಳು ಮಳೆಗಾಲ ಇದೆ. ಈ ಮಳೆಗಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಕೂಲುಗಳನ್ನು ತೆಗೆಯುವುದರಿಂದ ಆ ಸ್ಕೂಲುಗಳು ಸರಿಯಾಗಿ ನಡೆಯುವುದಿಲ್ಲ. ಆದ್ದರಿಂದ ಈ ರಜಾ ಕೊಡತಕ್ಕದ್ದನ್ನು ಮಳೆಗಾಲದಲ್ಲಿ 4 ತಿಂಗಳು ಅಥವಾ 3 ತಿಂಗಳು ಕೊಟ್ಟರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಮತ್ತು ಮಳೆಗಾಲವೂ ಕೂಡ ವ್ಯವಸಾಯದ ಕಾಲವಾಗಿರುವುದರಿಂದ ಆ ಕಾಲದಲ್ಲಿ ತಂದೆ ತಾಯಿಗಳು ಅವರ ಹುಡುಗರಿಂದ ಏನಾದರೂ ಸಹಾಯವನ್ನು ಪಡೆಯಬಹುದು. ಈ ರಜಾ ಪದ್ಧತಿ ಯಲ್ಲಿರತಕ್ಕ ಬದಲಾವಣೆಯಲ್ಲಿ 284ನೇ ಪುಟದಲ್ಲಿ ಹೇಳಿದ್ದಾರೆ. ಸ್ವತಃಸಿದ್ಧವಾದ ಪರಿಸ್ಥಿತಿಗೆ ತಕ್ಕಂತೆ ಈ ರಜಾಕಾಲವನ್ನು ಏರ್ಪಡಿಸಬೇಕು. ಭಾಗವಹಿಗಳು ವ್ಯವಸಾಯದ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಸಲು ಅನುಕೂಲವಾಗುವಂತೆ ಇರಬೇಕು ಎಂದು ಹೇಳಿದ್ದಾರೆ. ಇದು ಕಾಲೇಜು, ಸೆಕೆಂಡರಿ, ಪ್ರೈಮರಿ ಶಾಲೆಗಳೆಲ್ಲಕ್ಕೂ ಅನ್ವಯಿಸುವುದಾಗಿದೆ ಈ ಶಿಫಾರಸನ್ನು ಕೂಡಲೇ ಜಾರಿಗೆ ತರಬಹುದು.

(ಶ್ರೀ ಪಿ. ಆರ್. ರಾಮಯ್ಯ.)

ಆದ್ದರಿಂದ ಈ ಶಿಫಾರಸುಗಳನ್ನು ನಾವು ಕೂಡಲೆ ಕಾರ್ಯಗತ ಮಾಡಬಹುದು. ಹಾಗೆಯೇ ಇದರಲ್ಲಿರುವ ಇನ್ನೊಂದು ಸಂತೋಷಕರವಾದ ವಿಷಯವೇನೆಂದರೆ, ಅಮರವನ್ನೂ ಮತ್ತು ಸಂಸ್ಕೃತ ಮೂಲ ಪಾಠಗಳನ್ನೂ ಪ್ರೈಮರಿ ವಿದ್ಯಾಭ್ಯಾಸದಲ್ಲಿ ಸೇರಿಸಿರತಕ್ಕದ್ದು. ಇದು ಬಹಳ ಒಳ್ಳೆಯದು. ಆಮೇಲೆ ಇಂಗ್ಲೀಷ್ ವಿದ್ಯಾಭ್ಯಾಸವನ್ನು 5 ಮತ್ತು 6ನೆಯ ಕ್ಲಾಸ್‌ಗಳಿಗೇ ಸೇರಿಸಿದ್ದಾರೆ. ಈ ವಿಚಾರದಲ್ಲಿ ದೊಡ್ಡ ಚರ್ಚೆಯೇ ನಡೆದು ಅನೇಕ ಭಿನ್ನಾಭಿಪ್ರಾಯಗಳು ಸೂಚಿತವಾಗಿವೆ. ಸಮಿತಿಯವರು ಹೇಳಿರುವುದಕ್ಕೆ ಕಾರಣ ಇಷ್ಟೆ: ಈಗ ಮಿಡ್ಲ್‌ಸ್ಕೂಲಿನಲ್ಲಿ ನಾಲ್ಕು ವರ್ಷ ಇರುವುದರಲ್ಲಿ ಮೊದಲನೆಯ ವರ್ಷದಿಂದಲೇ ಇಂಗ್ಲೀಷ್ ಪಾಠವನ್ನು ಷುರುಮಾಡುತ್ತಾರೆ. ಈಗಿನ ಸುಧಾರಣಾ ಸಮಿತಿಯವರ ವರದಿಯಲ್ಲಿ ಮಿಡ್ಲ್‌ಸ್ಕೂಲಿನ ಮೊದಲನೆಯ ಎರಡು ವರ್ಷಗಳೂ ಪ್ರೈಮರಿ ವಿದ್ಯಾಭ್ಯಾಸದಲ್ಲೇ ಸೇರುವುದರಿಂದ, ಇಂಗ್ಲೀಷ್ ಪಾಠವನ್ನೂ ಇಲ್ಲಿಯೇ ಪ್ರಾರಂಭಿಸಬೇಕೆಂದು ಹೇಳಿದ್ದಾರೆ. ನನಗೆ ಇಂಗ್ಲೀಷಿನ ವಿಷಯದಲ್ಲಿ ಯಾವ ದ್ವೇಷವೂ ಇಲ್ಲ. ಅದನ್ನು ಕಲಿಯುವುದರಿಂದ ಯಾವ ಹಾನಿಯೂ ಇಲ್ಲ. ಆದ್ದರಿಂದ ಸುಧಾರಣಾ ಸಮಿತಿಯವರು ಹೇಳಿರುವಂತೆ ಇಂಗ್ಲೀಷನ್ನು ಕಲಿಸಬಹುದು. ಅಲ್ಲದೆ ಅನೇಕ ಮನಶ್ಶಾಸ್ತ್ರಜ್ಞರು ಭಾಷೆಗಳ ಬುನಾದಿಯನ್ನು ಹೇಳಿರುವ ರೀತ್ಯಾ ನೋಡುವುದಾದರೆ, ಚಿಕ್ಕಮಕ್ಕಳಿಗೆ ಎಳೆಯ ವಯಸ್ಸಿನಲ್ಲೇ ಭಾಷೆಗಳನ್ನು ಕಲಿಸುವುದು ಒಳ್ಳೆಯದು ಎಂದು ಗೊತ್ತಾಗುತ್ತದೆ. ಅವರಿಗೆ ಆ ವಯಸ್ಸಿನಲ್ಲಿ ಜ್ಞಾಪಕ ಶಕ್ತಿ ಹೆಚ್ಚಾಗಿರುತ್ತದೆ. ಆ ಜ್ಞಾಪಕಶಕ್ತಿಯಿಂದ ಎಷ್ಟೆಷ್ಟು ವಿದ್ಯೆಗಳನ್ನು ಕಲಿಯಬೇಕೋ ಅಷ್ಟನ್ನೂ ಕಲಿಸುವುದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಇಂಗ್ಲೀಷನ್ನು ಪ್ರೈಮರಿ ಸ್ಟೇಜಿನಲ್ಲೇ ಕಲಿಸುವುದು ಯುಕ್ತವಾಗಿದೆ. ಅದರಲ್ಲಿ ಬಾಧಕವೇನೂ ಇಲ್ಲವೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಸೆಕೆಂಡರಿ ವಿದ್ಯಾಭ್ಯಾಸ ಮತ್ತು ಕಾಲೇಜ್ ವಿದ್ಯಾಭ್ಯಾಸಕ್ಕೆ ಬಂದರೆ—ಇದರ ಬಗ್ಗೆ ನಾವು ಏನೇ ಅಭಿಪ್ರಾಯಕ್ಕೆ ಬಂದರೂ, ನಾವು ಇಂಡಿಯಾ ಸರ್ಕಾರದವರು ಮಾಡತಕ್ಕ ಶಿಫಾರಸ್ಸುಗಳನ್ನು ನೋಡಿ ಅದಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ. ನಾವೂ ಅಖಿಲ ಭಾರತದಲ್ಲಿ ಒಬ್ಬರಾದ್ದರಿಂದ ಅಲ್ಲಿ ಮಾಡತಕ್ಕ ಶಿಫಾರಸುಗಳು ನಮಗೂ ಅನ್ವಯವಾಗುತ್ತವೆ. ಆದ್ದರಿಂದ ಅಲ್ಲಿಂದ ಬರತಕ್ಕ ಶಿಫಾರಸ್ಸುಗಳನ್ನೂ ನೋಡಿ ನಾವ್ ದೀರ್ಘವಾಗಿ ಆಲೋಚನೆಮಾಡಿ ಅಭಿಪ್ರಾಯಕ್ಕೆ ಬರಬೇಕಾಗಿದೆ. ಆದರೆ ಒಂದು ಮುಖ್ಯವಾದ ವಿಷಯವೇನೆಂದರೆ, ಇದರಲ್ಲಿ ಔದ್ಯೋಗಿಕ ಶಿಕ್ಷಣಕ್ಕೆ ಹೆಚ್ಚಿಗೆ ಪ್ರಾಧಾನ್ಯತೆ ಕೊಟ್ಟಿದ್ದಾರೆ. ಬಹುಶಃ ಇಂಡಿಯಾ ಸರ್ಕಾರದವರೂ ಕೂಡ ಹೀಗೆಯೇ ಕೊಡುತ್ತಾರೆಂದು ಹೇಳಬಹುದು.

ಆಮೇಲೆ ಮೀಡಿಯಮ್ಮಿನ ವಿಚಾರ. ಇದು ದೇಶಭಾಷೆಯೇ ಆಗಿರಬೇಕೆಂಬರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ನಮ್ಮ ಈ ವರದಿಯಲ್ಲಿ ಇಂಟರ್ ಮೀಡಿಯಟನ್ನು ಹೈಸ್ಕೂಲಿಗೇ ಸೇರಿಸಬೇಕೆಂದು ಹೇಳಿದ್ದಾರೆ; ಹಾಗೂ ಇಂಟರ್ ಮೀಡಿಯಟ್ಟಿನಲ್ಲಿಯೂ ಕನ್ನಡವೇ ಮಾಧ್ಯಮ ಭಾಷೆಯಾಗಿರಬೇಕೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯವೂ ಇದೇ ಆಗಿದೆ. ದೇಶಭಾಷೆಯಾದ ಕನ್ನಡವೇ ಮಾಧ್ಯಮ ಬೋಧಕ ಭಾಷೆಯಾಗುವುದರಲ್ಲಿ ಯಾವ ತೊಂದರೆಯೂ ಆಗುವುದಿಲ್ಲ. ಅದು ಆಗಲೇಬೇಕೆಂದು ನಾನು ಹೇಳುತ್ತೇನೆ.

ಶ್ರೀ ಪಿ. ವೆಂಕಟಪ್ಪ.—ಇಂಟರ್‌ಮೀಡಿಯಟ್ಟಿನಲ್ಲಿ ಕನ್ನಡ ಮಾಧ್ಯಮವಿರಬೇಕೆಂದು ಇದರಲ್ಲಿ ಹೇಳಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಹೇಳಿದೆ; ತಾವು ದಯವಿಟ್ಟು ನೋಡೋಣವಾಗಲಿ. ಬಿ. ಎ. ನಲ್ಲಿ ಕೂಡ ಎಷ್ಟೋ ವಿಷಯಗಳಲ್ಲಿ ಕನ್ನಡವೇ ಮಾಧ್ಯಮವಾಗಿರಬಹುದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಹೀಗೆಲ್ಲಾ ನಾನು ಹೇಳಿದ ಮಾತ್ರಕ್ಕೇ ಇಂಗ್ಲಿಷಿನ ವಿಷಯದಲ್ಲಿ ನನಗೆ ದ್ವೇಷವಿಲ್ಲ; ಅದು ಹೊರಟು ಹೋಗಬೇಕು ಎಂದು ಹೇಳುತ್ತಿಲ್ಲ. ಅದಕ್ಕೆ ಬದಲು ಇಂಗ್ಲೀಷನ್ನೂ ಇನ್ನೂ ಚೆನ್ನಾಗಿ ಕಲಿಸಬೇಕು. ಏಕೆಂದರೆ ಇವೊತ್ತು ಇಂಗ್ಲಿಷಿನವರ ಅನೇಕ ಪದ್ಧತಿಗಳನ್ನು ಜಾರಿಗೆ ತಂದಿದ್ದೇವೆ. ನಮ್ಮ ಈ ಸಭೆಯ ರಚನೆಯನ್ನೇ ತೆಗೆದುಕೊಂಡರೆ, ಇಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ರೀತಿಯಲ್ಲೇ ಕೆಲಸ ಕಾರ್ಯಗಳು ನಡೆಯುತ್ತಿವೆ. ನಮ್ಮ ಕಾನೂನುಗಳು, ಕೋರ್ಟಿನ ನಡೆವಳಿಕೆಗಳು ಎಲ್ಲಾ ಇಂಗ್ಲಿಷ್ ಭಾಷೆಯಲ್ಲೇ ಇವೆ; ಇಂಗ್ಲಿಷ್ ಭಾಷೆಯಲ್ಲೇ ಕೆಲಸಗಳು ನಡೆಯುತ್ತಿವೆ. ಆದ್ದರಿಂದ ನಾವು ಇಂಗ್ಲೀಷನ್ನು ಬಿಡುವುದಕ್ಕಾಗುವುದಿಲ್ಲ. ಇಂಗ್ಲೀಷಿಗೂ ನಾವು ಹೆಚ್ಚಿಗೆ ಪ್ರಾಧಾನ್ಯತೆ ಕೊಡಬೇಕು. ಮಾತ್ರ, ಮೀಡಿಯಂ ಆಗಿ ಇಂಗ್ಲಿಷ್ ಇರಬೇಕಾದ್ದಿಲ್ಲವೆಂದು ನನ್ನ ಅಭಿಪ್ರಾಯ

ಯೂನಿವರ್ಸಿಟಿಯ ವಿಷಯದಲ್ಲಿ ಮಾನ್ಯ ಸದಸ್ಯರು ಒಂದು ಅಭಿಪ್ರಾಯ ಕೊಟ್ಟರು. ಅದನ್ನು ನಾನು ಬಹುಮಟ್ಟಿಗೆ ಅನುಮೋದಿಸುತ್ತೇನೆ. ವಿದ್ಯಾಭ್ಯಾಸವೆಂಬುದು ದೇಶದಲ್ಲಿ ಪ್ರತಿಯೊಬ್ಬರ ಹಕ್ಕು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ 14 ವರ್ಷ ವಯಸ್ಸಿನವರೆಗೆ ಮಾತ್ರ ಪ್ರತಿಯೊಬ್ಬ ಮಗುವಿಗೂ ಅದೊಂದು ಹಕ್ಕಾಗಿರಬೇಕು ಅಷ್ಟೆ. ಅದಕ್ಕಿಂತ ಮೇಲೆ ಹೋಗಬೇಕಾದರೆ, ಆತನಿಗೆ ಒಂದು ರೀತಿಯಾದ ಅರ್ಹತೆ ಯಿರಬೇಕು, ಆ ಅರ್ಹತೆ ಸಂಪಾದಿಸಿಕೊಂಡೇ ಆತ ಹೋಗಬೇಕು ಎಂದು ನನ್ನ ಅಭಿಪ್ರಾಯ. ಈಗ ನಾವು ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಪದವೀಧರರನ್ನು ತಯಾರುಮಾಡುತ್ತಿದ್ದೇವೋ ಅಷ್ಟು ಜನರನ್ನೂ ನಾವು ತಯಾರುಮಾಡಬೇಕಾಗಿಲ್ಲ. ಅದಕ್ಕೆ ಬದಲು ಇನ್ನೂ ಹೆಚ್ಚಿಗೆ professional ಕಾಲೇಜುಗಳಿಗೆ ಗಮನ ಕೊಟ್ಟು ಅವುಗಳನ್ನು ಹೆಚ್ಚಿಗೆ ಮಾಡೋಣ. ಆದರೆ ವಿಶ್ವವಿದ್ಯಾನಿಲಯದಲ್ಲಿ ಮಾತ್ರ, ಜ್ಞಾನಕ್ಕೆ ಪ್ರಧಾನವಾದ ಯೂನಿವರ್ಸಿಟಿಯಲ್ಲಿ ಬೇರೆ ವಿಧವಾದ ಅಂಶಗಳು ಬರಕೂಡದು. Communal representation, ಅಥವಾ communal debar ಎಂಬುದು ವಿಶ್ವವಿದ್ಯಾನಿಲಯದಲ್ಲಿ ಇರಬಾರದು. ಯಾರು ಯಾರಿಗೆ ನಿಜವಾದ ಅರ್ಹತೆಯಿದೆಯೋ, ಯಾರು Higher University Education ಪಡೆಯುವ ಅರ್ಹತೆ ಪಡೆದಿದ್ದಾರೋ ಅವರೆಲ್ಲರಿಗೂ ಅವಕಾಶ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಆದಷ್ಟುಮಟ್ಟಿಗೆ ಬೇಗ ಕಾಲೇಜ್ ಕಮಿಟಿಗಳು ಅಡ್ಮಿಷನ್ ಕಮಿಟಿಗಳು—ಇವೆಲ್ಲಾ ವಜಾ ಆಗಬೇಕು. ಕೇವಲ ಅರ್ಹತೆಯನ್ನು ನೋಡಿಕೊಂಡು admission ಕೊಡುವುದು ಒಳ್ಳೆಯದೆಂದು ನನಗೆ ತೋರುತ್ತಿದೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆದರೆ ಕಾಲಸ್ಥಿತಿಗನುಗುಣವಾಗಿ ಕೆಲವು ವಿಷಯಗಳನ್ನು ನೋಡಿಕೊಂಡು ಹೋಗಬೇಕಾಗಿ ಬಂದಿದೆ. ಇದು ಎಷ್ಟು ದಿವಸ ನಡೆಯುತ್ತದೆಯೋ ನೋಡಬೇಕು. ಆದಷ್ಟು ಇವುಗಳನ್ನು ವಜಾಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ವಿದ್ಯಾಭ್ಯಾಸದ ಖರ್ಚಿನ ವಿಷಯ. ಸಾಮಾನ್ಯವಾಗಿ ವಿದ್ಯಾಭ್ಯಾಸದ ಖರ್ಚು ಹೆಚ್ಚಾಗುತ್ತಾ ಎಷ್ಟು ಕಷ್ಟವಾಗುತ್ತದೆಂಬದನ್ನು ನಾವು

ನೋಡಬೇಕು. ಪ್ಲಾನಿಂಗ್ ಕಮಿಷನ್ನಿನವರೂ ಈ ವಿಷಯದಲ್ಲಿ ಹೇಳಿದ್ದಾರೆ :

> "The cost of education that falls on the average family is another matter which calls for serious consideration. It is becoming almost prohibitive for the middle classes."

ಎಂದು. ಈ ಅಂಶವನ್ನು ಮಾನ್ಯ ಸಭೆಯವರು ಗಮನಿಸಬೇಕು. ನನ್ನ ಅಭಿಪ್ರಾಯವೂ ಅದೇ ಆಗಿದೆ. ಅದಕ್ಕೆ ಪ್ಲಾನಿಂಗ್ ಕಮಿಷನ್ನಿನವರ ಮುದ್ರೆಯೂ ಇದೆ. ಈ ಸಂದರ್ಭದಲ್ಲಿ, ಇನ್ನೊಂದು ವಿಷಯ. ಸಾಮಾನ್ಯವಾಗಿ ನಮ್ಮಲ್ಲಿ ಪೂರ್ವದಿಂದಲೂ ಬಂದಿರತಕ್ಕ ಒಂದು ಪದ್ಧತಿಯೇನೆಂದರೆ, ಯಾವನು ಎಷ್ಟೇ ಬಡವನಾಗಿದ್ದರೂ ಆತ ಬುದ್ಧಿವಂತನಾಗಿದ್ದರೆ ಆತನಿಗೆ ವಿದ್ಯಾಭ್ಯಾಸಮಾಡಲಿಕ್ಕೆ ಎಲ್ಲಾ ಸಹಾಯಗಳನ್ನೂ ಮಾಡಬೇಕು ಎಂಬುದು. ಏಕೆಂದರೆ ಆತ ವಿದ್ಯಾಭ್ಯಾಸ ಪಡೆದು ವಿದ್ಯಾಪಾರಂಗತನಾದರೆ ಅವನಿಗೆ ಪ್ರಯೋಜನವಾಗುವುದು ಮಾತ್ರವಲ್ಲ, ದೇಶಕ್ಕೂ ಪ್ರಯೋಜನವಾಗುತ್ತದೆ. ಆದ್ದರಿಂದ ಬಡವನಾಗಿರುವವನಿಗೂ ಅವನು ಬುದ್ಧಿವಂತನಾಗಿದ್ದರೆ ವಿದ್ಯಾಭ್ಯಾಸ ದೊರತೇ ದೊರೆಯುವಂತೆ ಮಾಡುವುದು ಅವನಿಗೆ ಅದಷ್ಟು ಸಹಾಯಮಾಡುವುದು ಪೂರ್ವದಿಂದ ನಮ್ಮ ಸಂಸ್ಕೃತಿಯಲ್ಲಿ ಬಂದಿರತಕ್ಕ ಪದ್ಧತಿ. ಇದೇ ವಿಚಾರದಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆದ ಅಮರ್‌ನಾಥ್‌ಜಾರವರು ಒಂದು ಮಾತು ಹೇಳಿದ್ದಾರೆ :

> "University education is beyond the reach of many brilliant young men because it is expensive. Whether it can be made cheaper is one question, but it should be the endeavour of both the State and the University to ensure that no young man of promise who is likely to profit by higher education is deprived of it on financial ground."

ಬಡವನಾಗಿದ್ದಾನೆಂದಮಾತ್ರಕ್ಕೇ ಅವನು ಅರ್ಹತೆ ಪಡೆದವನಾಗಿದ್ದರೂ ಅವನಿಗೆ ವಿದಾಭ್ಯಾಸ ತಪ್ಪಿಸಬಾರದು ; ಎಲ್ಲಾ ಅನುಕೂಲತೆಗಳನ್ನೂ ಅವನಿಗೆ ಉಂಟುಮಾಡಿಕೊಡುವುದು ನಮ್ಮ ಕರ್ತವ್ಯವೆಂದು ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ಅಂಶವನ್ನ ನಾವುಗಳು ಗಮನಿಸಬೇಕೆಂದು ಹೇಳುತ್ತೇನೆ.

ಇಷ್ಟು ಹೇಳಿದಮೇಲೆ, ಕಡೆಯದಾಗಿ ನಾನು ಒಂದು ಮಾತು ಹೇಳಿ ಮುಗಿಸುತ್ತೇನೆ. ಎಲ್ಲಾ ವಿದ್ಯಾಭ್ಯಾಸಕ್ಕೂ ಅಡಿಪಾಯದಂತಿರತಕ್ಕವರು ಉಪಾಧ್ಯಾಯರು. ಅಂಥ ಉಪಾಧ್ಯಾಯರ ಸ್ಥಿತಿ ಈಗ ಅತ್ಯಂತ ಶೋಚನೀಯವಾಗಿದೆಯೆಂಬುದರಲ್ಲಿ ಈ ಸಭೆಯಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ಲಿಗೇ ಆಗಲಿ, ಒಬ್ಬ ಪೋಸ್ಟ್‌ಮನ್ನಿಗೇ ಆಗಲಿ ಕಡೆಗೆ ಒಬ್ಬ ರೋಡಮಾಲಿಗೇ ಆಗಲಿ ದೊರೆಯುತ್ತಿರತಕ್ಕಷ್ಟು ಸಂಬಳ ಕೂಡ ಈ ಉಪಾಧ್ಯಾಯರುಗಳಿಗೆ ದೊರೆಯುತ್ತಿಲ್ಲ. ಕೀಳಗಿರುವಲ್ಲಿ ಪ್ರೈಮರಿ ಸ್ಟೇಜ್‌ನಲ್ಲಿ ಅಷ್ಟು ಕೋಮಲವಾದ ಮನಸ್ಸುಳ್ಳ ಎಳೆ ವಯಸ್ಸಿನ ಮಕ್ಕಳನ್ನು ಇಷ್ಟು ಕಡಮೆ ಸಂಬಳ ಬರುವ ಉಪಾಧ್ಯಾಯರುಗಳ ವಶಕ್ಕೆ ಕೊಟ್ಟು, ನಾವು ಯಾವ ಹೆಚ್ಚಿನ ಫಲವನ್ನು ತಾನೆ ನಿರೀಕ್ಷಣೆ ಮಾಡಬಹುದು ! ಇದನ್ನು ಯಾವರೀತಿ ಮಾಡಬೇಕೆಂದರೆ ಹಣದ ಪ್ರಶ್ನೆ ಬರುತ್ತದೆ. ಆದರೂ, ಉಪಾಧ್ಯಾಯರ ಸ್ಥಿತಿಯನ್ನು ಉತ್ತಮಪಡಿಸದೆ ಇದ್ದರೆ ಈ ದೊಡ್ಡ ರಿಪೋರ್ಟನ್ನು ಕಾರ್ಯಗತಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೊಬ್ಬರು ಹೇಳಿದಂತೆ ಇದು ಕಸದಬುಟ್ಟಿಗೆ ಹೋಗುತ್ತದೆಂದು ನಾನು ಹೇಳುವುದಿಲ್ಲ. ಅದು ಕಾರ್ಯಗತವಾಗುವುದಿಲ್ಲವೆಂದು ಮಾತ್ರ ನಾನು ಹೇಳಬಲ್ಲೆ. ಸಮಾಜದಲ್ಲಿ ಉಪಾಧ್ಯಾಯರ ಸ್ಥಿತಿಯನ್ನು ಉತ್ತಮಪಡಿಸಿ ಅವರಿಗೆ ಸಮಾಜದಲ್ಲಿ ಗೌರವ ಬರುವಹಾಗೆ ಮಾಡದೆಹೋದರೆ, ವಿದ್ಯಾರ್ಥಿಗಳು ಮುಂದಕ್ಕೆ ಬರುವುದಿಲ್ಲ, ವಿದ್ಯಾಭ್ಯಾಸ ಪದ್ಧತಿಯೂ ಕೂಡ ಸುವ್ಯವಸ್ಥಿತವಾಗುವುದಿಲ್ಲ.

ಅಂತೂ ಇದೊಂದು ಬಹಳ ಕಷ್ಟವಾದ ಸಮಸ್ಯೆಯಾಗಿದೆ. ಇದನ್ನು ಹೇಗೆ ಪರಿಹಾರ ಮಾಡಬೇಕೆಂಬುದು ನನಗೆ ಗೊತ್ತಿಲ್ಲ. ಆದರೆ, ನನಗೆ ತೋರುವ ಮಟ್ಟಿಗೆ ಹೇಳುವುದಾದರೆ, ಉಪಾಧ್ಯಾಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಸಮಾಜವೂ ಕೂಡ ಸ್ವಲ್ಪ ಸಹಾಯ ಮಾಡಬೇಕಾಗುತ್ತದೆ. ಪೂರ್ವಕಾಲದಲ್ಲಿ ಉಪಾಧ್ಯಾಯರ ವಿಷಯದಲ್ಲಿ ಸಮಾಜ ಹೆಚ್ಚಿಗೆ ಗೌರವ ಕೊಡುತ್ತಿತ್ತು. ಅವರಿಗೆ ಸಂಭಾವನೆಗಳನ್ನು ಕೂಡ ಕೊಡುತ್ತಿದ್ದರು. ಆ ರೀತಿಯಾಗಿ ಸಂಭಾವನೆಗಳೂ ಮತ್ತು ಗೌರವಗಳೂ ಪುನಃ ಬರುವ ರೀತಿಯಲ್ಲಿ ಸರ್ಕಾರದವರು ಏನಾದರೂ ಏರ್ಪಾಡು ಮಾಡಬೇಕು. ಅಥವಾ, ಯಾರಾದರೂ ಸಂಭಾವನೆಗಳನ್ನು ಕೊಡುವಹಾಗಿದ್ದರೆ ಅದಕ್ಕೆ ತಡೆಯಾಗಿ ಸರ್ಕಾರದವರು ನಿಲ್ಲಬಾರದೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ಮಾನ್ಯ ಸ್ನೇಹಿತರು ನಿಮ್ನ ವರ್ಗದವರ ವಿಚಾರ ಹೇಳಿದರು. ಪ್ರಾಥಮಿಕ ವಿದ್ಯಾಭ್ಯಾಸ ಪ್ರತಿಯೊಬ್ಬ ಪ್ರಜೆಗೂ 14 ವರ್ಷದವರೆಗೆ ಕೊಡಬೇಕೆಂದು ರಾಜ್ಯಾಂಗದ ಪ್ರಕಾರ ಹೇಳಿದಮೇಲೆ, ಇದು ನಿಮ್ನ ವರ್ಗದವರಿಗೂ ಖಂಡಿತವಾಗಿ ದೊರೆತೇ ದೊರೆಯುತ್ತದೆ. ಎಲ್ಲರೂ ಒಟ್ಟಾಗಿ ಸೇರಬೇಕು, ಹಾಗಾದರೇ ನೂತನ ಸಮಾಜ ಸೃಷ್ಟಿಗೆ ಅನುಕೂಲವಾಗುತ್ತದೆ. ಹೈಯರ್ ಎಜ್ಯುಕೇಷನ್ನಿಗೆ ಬೇಕಾದಷ್ಟು ಸೌಲಭ್ಯಗಳನ್ನು ಕೊಡುತ್ತಿದ್ದರೂ ಹಣಕಾಸಿನ ಅನುಕೂಲತೆ ಸಿಕ್ಕಿದಂತೆ ಇನ್ನೂ ಹೆಚ್ಚು ಕೊಡಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ವಿದ್ಯಾಭ್ಯಾಸದ ಸುಧಾರಣೆಯ ವಿಚಾರವಾಗಿ ಈಗಾಗಲೇ ಕೆಲವು ಮಾನ್ಯಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಯೋಚನೆ ಮಾಡಬೇಕಾದ ಒಂದು ಅಂಶವೆಂದರೆ, ರಾಜ್ಯಾಂಗದಲ್ಲಿ ಪ್ರತಿಯೊಬ್ಬ ಪ್ರಜೆಗೂ 14 ವರ್ಷಗಳವರೆಗೆ ಮುಫತ್ತಾಗಿ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ವಿಧಿ ನಮೂದಾಗಿದೆ. ಆದರೆ ಈ ಸುಧಾರಣೆಗಳಲ್ಲಿ ಹೇಳಿರುವಂತೆ ಕೇವಲ 12 ವರ್ಷಗಳವರೆಗೆ ಮಾತ್ರ ಕಡ್ಡಾಯವಾಗಿ ಉಚಿತ ಶಿಕ್ಷಣ ಜಾರಿಗೆ ಬರುವುದಾಗಿದೆ. ಈ ಒಂದು ಸುಧಾರಣೆಯು ಸಮರ್ಪಕವಾಗಿದೆಯೆ ಎನ್ನುವ ಪ್ರಶ್ನೆ ನಮ್ಮ ಮುಂದೆ ಎದ್ದು ಕಾಣುತ್ತದೆ. ಹದಿನಾಲ್ಕು ವರ್ಷಗಳಿಗೆ ಬದಲಾಗಿ ಹನ್ನೆರಡು ವರ್ಷಗಳ ವಿದ್ಯಾ

(ಶ್ರೀ ಬಿ. ಟಿ. ಕೆಂಪರಾಜ್.)

ಭ್ಯಾಸವನ್ನು ಕೊಟ್ಟ ಪಕ್ಷದಲ್ಲಿ ಅದು ಎಷ್ಟುಮಟ್ಟಿಗೆ ರಾಷ್ಟ್ರಾಂಗದಲ್ಲಡಕವಾಗಿರುವ ವಿಧಿಗೆ ಸರಿಹೋಗುತ್ತದೆ ಎಂಬುದನ್ನು ಮುಖ್ಯವಾಗಿ ಸುಧಾರಣಾ ಸಮಿತಿಯ ಸದಸ್ಯರು ಯೋಚಿಸಬೇಕಾಗಿತ್ತು. ಅವರು ಹೇಗೆ ಈ 12 ವರ್ಷಗಳ ಅವಧಿಯಲ್ಲಿ ಕಡ್ಡಾಯ ಮತ್ತು ಮುಫತ್ತಾದ ಶಿಕ್ಷಣವನ್ನು ಕೊಡಲು ತಮ್ಮ ಅಭಿಪ್ರಾಯವನ್ನು ಕೊಟ್ಟರು ಎಂಬುದು, ಗೊತ್ತಿಲ್ಲ; ಅಂತೂ ಒಪ್ಪಿಕೊಂಡಿದ್ದಾರೆ. ಇಲ್ಲಿಂದ ಮುಂದೆ, ಮಾಧ್ಯಮಿಕ ಶಾಲೆ ಇಲ್ಲದಂತಾಗುತ್ತದೆ. ಮಾಧ್ಯಮಿಕ ಶಿಕ್ಷಣ ಇಭ್ಭಾಗವಾಗಿ ಎರಡು ವರ್ಷಗಳ ಕಾಲ ಪ್ರೈಮರಿ ಶಾಲೆಗೆ ಸೇರಿಸಲ್ಪಟ್ಟು ಇನ್ನೆರಡು ವರ್ಷಕಾಲ ಪ್ರೌಢವಿದ್ಯಾಶಾಲೆಗೆ ಸೇರಿಸಲ್ಪಟ್ಟಿದೆ. ಇದಲ್ಲದೆ ಇಂಟರ್ ಮೀಡಿಯಟ್ ಕಾಲೇಜುಗಳು ಈ ಪ್ರೌಢ ವಿದ್ಯಾಶಾಲೆಗಳ ಜೊತೆಗೆ ಸೇರಿಸಲ್ಪಟ್ಟಿವೆ. ಇದರಿಂದ ಈ ಒಂದು ರೂಪದಲ್ಲಿ ಈಗಿರತಕ್ಕ ವಿದ್ಯಾಭ್ಯಾಸ ಕ್ರಮದಲ್ಲಿ ಒಂದು ವೈಪರೀತ್ಯವಾದ ಸುಧಾರಣೆಯನ್ನು ತರುವಹಾಗಿದೆ. ಏಕೆಂದರೆ, ನಾಲ್ಕು ವರ್ಷ ಪ್ರಾಥಮಿಕ ವಿದ್ಯಾಭ್ಯಾಸ, ನಾಲ್ಕು ವರ್ಷ ಮಾಧ್ಯಮಿಕ ವಿದ್ಯಾಭ್ಯಾಸ, ಮೂರುವರ್ಷ ಪ್ರೌಢ ವಿದ್ಯಾಭ್ಯಾಸ, ನಾಲ್ಕುವರ್ಷ ಕಾಲೇಜು ವಿದ್ಯಾಭ್ಯಾಸ, ಈ ಪದ್ಧತಿ ಇದುವರೆಗೂ ಜಾರಿಯಲ್ಲಿತ್ತು. ಈ ಸುಧಾರಣೆ ಜಾರಿಗೆ ಬಂದಮೇಲೆ ಆಗತಕ್ಕ ಪರಿಣಾಮವನ್ನು ನಾವು ಯೋಚಿಸಬೇಕಾಗುತ್ತದೆ. ಮುಖ್ಯವಾಗಿ ಈ ಸುಧಾರಣೆಯಿಂದ ಇಡೀ ವಿದ್ಯಾಭ್ಯಾಸ ಕ್ರಮವೇ ಒಂದು ಹೊಸರೂಪವನ್ನು ಹೊಂದುತ್ತದೆ. ಹೊಸರೂಪವನ್ನು ಹೊಂದುವುದರ ಜೊತೆಗೆ ವಿದ್ಯಾಭ್ಯಾಸದಲ್ಲಿ ಬೇಸಿಕ್ ಎಜ್ಯುಕೇಷನ್, ಔದ್ಯೋಗಿಕ ಶಿಕ್ಷಣ ಮತ್ತು ಕಮರ್ಷಿಯಲ್ ಎಜ್ಯುಕೇಷನ್ ಎಂಬ ನಾನಾ ಮುಖವಾದ ಕವಲುಗಳೊಡೆದು ಇಡೀ ವಿದ್ಯಾಭ್ಯಾಸ ಜೀವನವೇ ಬಹುಭಾಗಗಳಾಗಿ ಒಡೆದು ಹೋಗುತ್ತದೆ. ಹಾಗೆ ಅನೇಕ ಮುಖಗಳಲ್ಲಿ ಈ ಸುಧಾರಣೆಯನ್ನು ಯೋಜಿಸಲಾಗಿದೆ. ಇದಕ್ಕೆ ಸಂಬಂಧ ಪಟ್ಟಂತೆ ಪ್ರೈಮರಿ ಸ್ಕೂಲುಗಳನ್ನು ತೆರೆಯತಕ್ಕ ಸ್ಥಳಗಳಲ್ಲಿರುವ ಅನುಭವಸ್ಥರಾದ ಕೆಲಸಗಾರರ ಕುಮ್ಮಕ್ಕನ್ನೂ ತೆಗೆದುಕೊಂಡು ವಿವಿಧ ಕಸಬುಗಳಲ್ಲಿ ಉತ್ತೇಜನ ಕೊಡಲು ಯಾವ ಯಾವ ಕೆಲಸವನ್ನು ವಿದ್ಯಾರ್ಥಿಗಳಿಗೆ ಕಲಿಸಬಹುದೋ ಅವುಗಳನ್ನೂ ಕಲಿಸಲು ತಕ್ಕ ಸಲಕರಣೆಗಳನ್ನೊದಗಿಸಿಕೊಳ್ಳತಕ್ಕದ್ದು ಆವಶ್ಯಕವೆಂದು ಈ ಅವಧಿಯಲ್ಲಿ ನಮೂದಾಗಿದೆ. ಈ ಒಂದು ವಿಚಾರವನ್ನು ನಾವು ಯೋಚಿಸುವಾಗ ಒಂದಂಶವನ್ನು ಗಮನಿಸಬೇಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸದ ಜೊತೆಯಲ್ಲಿ ಅನೇಕ ಕಸಬುಗಳನ್ನೂ ಸಹ ನಮೂದಿಸಿದ್ದಾರೆ. ಈಗಾಗಲೇ ಶ್ರೀಮತಿ ಲಕ್ಷ್ಮೀದೇವಿರಾಮಣ್ಣನವರೂ ಮತ್ತು ಶ್ರೀಮಾನ್ ಪಿ. ಆರ್. ರಾಮಯ್ಯನವರೂ ಹೇಳಿದಂತೆ ಬಟ್ಟೆ ಹೊಲಿಯುವುದು, ನೂಲು ತೆಗೆಯುವುದು, ನೇಯುವುದು, ಇಸ್ತ್ರೀ ಮಾಡುವುದು, ಕೋಳಿಗಳನ್ನು ಸಾಕುವುದು, ಇತ್ಯಾದಿ ನಾನಾ ಕಸಬುಗಳನ್ನು ಇಲ್ಲಿ ನಮೂದಿಸಿದ್ದಾರೆ. ಮತ್ತು ಇವುಗಳ ಜೊತೆಗೆ ಆಯುಷ್ಕರ್ಮ ಮಾಡತಕ್ಕ ಕೆಲಸವನ್ನೂ ಸೇರಿಸಬಹುದು............

ಶ್ರೀ ಎ. ಭೀಮಪ್ಪನಾಯಕ್.—ಆಯುಷ್ಕರ್ಮ ಎಂದರೆ ಆಯುಸ್ಸೆಲ್ಲಾ ಕರ್ಮವಾಡುತ್ತಿರುವುದು ಎಂದರ್ಥ ! (ನಗು !)

ಶ್ರೀ ಬಿ. ಟಿ. ಕೆಂಪರಾಜ್.—ಹಾಗೆ ಪ್ರೈಮರಿ ಪಾಠಶಾಲೆಯ ಪಾಠ ಕ್ರಮದಲ್ಲಿ ಈ ಕೆಲವು ಕಸಬುಗಳನ್ನು ವಿದ್ಯಾರ್ಥಿಗಳಿಗೆ ಕಲಿಸಿಕೊಡಬಹುದೆಂದು ಈ ವರದಿಯಲ್ಲಿ ಸೂಚಿಸಿದ್ದಾರೆ.

ಸ್ವಾಮಿ, ಪ್ರೈಮರಿ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ, ಇವುಗಳಲ್ಲಿ ಅನೇಕ ಕಸಬುಗಳನ್ನು ಕಲಿಯಲು ಸಾಧ್ಯವಿಲ್ಲವೆಂದು ಕಾಣುತ್ತದೆ. ಉದಾಹರಣೆಗೆ ಕೋಳಿ ಸಾಕುವುದನ್ನು ಕಲಿಸುವುದಾದರೆ ಬಹಳ ಸೂಕ್ಷ್ಮವಾಗಿ ಯೋಚಿಸಬೇಕಾದ ಕೆಲವಂಶಗಳಿವೆ. ಪ್ರೈಮರಿ ಸ್ಕೂಲುಗಳಿಗೆ ಹೋಗತಕ್ಕ ವಿದ್ಯಾರ್ಥಿಗಳ ವಯಸ್ಸು ಬಹಳ ಚಿಕ್ಕವಯಸ್ಸು ಈ ವರದಿಯಲ್ಲಿ ಹೇಳಿರುವಂತೆ ಮೂರುವರ್ಷಕ್ಕೆ ನರ್ಸರಿ ಶಿಕ್ಷಣ ಪ್ರಾರಂಭವಾಗಿ, ಆರುವರ್ಷದಿಂದ ಹನ್ನೆರಡು ವರ್ಷದವರೆಗೆ ಪ್ರೈಮರಿ ವಿದ್ಯಾಭ್ಯಾಸದಲ್ಲಿರುತ್ತಾರೆ. ಈ ಕಾಲದಲ್ಲಿ ಕೋಳಿಸಾಕುವ ಕ್ರಮವನ್ನು ಕಲಿಸುವುದಾದರೆ, ಆ ಸಣ್ಣಮಕ್ಕಳು ಕೋಳಿಮರಿಗಳ ಕುತ್ತಿಗೆಯನ್ನೇ ಹಿಸುಕುತ್ತಾರೆ. ಈ ಒಂದು ವಿಷಯವನ್ನು ಯೋಚಿಸಿದಲ್ಲಿ ಇಲ್ಲಿ ಸೂಚಿಸಿರುವ ಕಸಬುಗಳನ್ನು ಪ್ರಾಥಮಿಕ ಶಿಕ್ಷಣದಲ್ಲಿ ಎಷ್ಟುಮಟ್ಟಿಗೆ ಜಾರಿಗೆ ತರುವುದು ಸಾಧ್ಯವೆಂಬುದನ್ನು ನಾವು ಬಹಳ ವಿಶದವಾಗಿ ಪರ್ಯಾಲೋಚಿಸಬೇಕಾಗುತ್ತದೆ. ಯಾವುದು ಸರಿಯಾದ ಕಸಬು, ಯಾವ ಕಸಬನ್ನು ಯಾವ ಕಾಲದಲ್ಲಿ, ಎಷ್ಟು ವರ್ಷ ವಯಸ್ಸಿನಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟರೆ ಅದರಲ್ಲಿ ಅವರು ಪರಿಣತರಾಗಬಹುದು ಎಂಬ ವಿಚಾರವನ್ನು ಯೋಚನೆ ಮಾಡಬೇಕಾದುದು ಅಗತ್ಯ.

4-30 P.M.

ಮುಂದಕ್ಕೆ ಔದ್ಯೋಗಿಕ ಶಿಕ್ಷಣ ವಿಚಾರದಲ್ಲಿ ಈ ಸಮಿತಿಯವರು ಬಹಳ ದೀರ್ಘವಾಗಿ ಆಲೋಚನೆ ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ಕಲಿಯಬೇಕಾದ್ದು ಬಹಳವಾಗಿರುತ್ತದೆ. ಅದರಲ್ಲಿಯೂ ಈ ಔದ್ಯೋಗಿಕ ಶಿಕ್ಷಣವೆಂಬುದು ಬಹಳ ಅಗತ್ಯ ಕಲಿಯ ಬೇಕಾದಂಥ ವಿದ್ಯೆ. ಆದುದರಿಂಧ ಆ ಸಮಿತಿಯವರು ಎಲ್ಲಾ ರೀತಿಯಿಂದಲೂ ಸಹ ಇದನ್ನು ಆಲೋಚನೆ ಮಾಡಿ ನಾವು ಸಾಮಾನ್ಯವಾಗಿ ಯಾವುದನ್ನು ಒಂದು ಜನರಲ್ ಎಜುಕೇಷನ್ ಎಂದು ಕರೆಯುತ್ತೇವೋ, ಅದರ ಜೊತೆಯಲ್ಲಿಯೇ ಬಹುಶಃ ಈ ಔದ್ಯೋಗಿಕ ಶಿಕ್ಷಣದಲ್ಲಿಯೂ ಅವರಿಗೆ ಮನಸ್ಸಿನಲ್ಲಿ ಇದರ ಬಗ್ಗೆ ಒಂದು ಹೆಚ್ಚಿನ ಆಕರ್ಷಣೆ ಹುಟ್ಟಿಸುವಂತೆ ಮಾಡಬೇಕೆಂಬ ಒಂದು ಅಭಿಪ್ರಾಯವನ್ನು ಆ ಸಮಿತಿಯವರು ದೊಡ್ಡದಾಗಿ ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಈ ವಿದ್ಯಾಭ್ಯಾಸ ಕ್ರಮದಲ್ಲಿ ಈ ರೀತಿಯಾಗಿ ಬದಲಾವಣೆ ಮಾಡಿದ್ದಾರೆಂದು ಕಾಣುತ್ತಿದೆ. ಹೀಗೆ ಈ ಜನರಲ್ ಎಜುಕೇಷನ್ನಿನ ಜೊತೆಯಲ್ಲಿಯೇ ವಿದ್ಯಾರ್ಥಿಗಳು ವ್ಯವಸಾಯ ಇತ್ಯಾದಿ ಅನೇಕ ಕೈಕಸುಬುಗಳಿಗೆ ಒಂದು ಹೆಚ್ಚಿನ ನಿಗ ಕೊಡಬೇಕಾಗಿದೆಯೆಂಬುದು ಈಗ ಇದರಲ್ಲಿ ಎದ್ದು ಕಾಣುವ ಥ ಒಂದು ವಿಚಾರವಾಗಿದೆ. ಹೀಗೆ ಅವರು ಹೆಚ್ಚಿನ ಒಂದು ಗಮನವನ್ನು ಕೊಡಬೇಕಾದದ್ದು ಆವಶ್ಯಕ ಮತ್ತು ಅಗತ್ಯವೆಂಬುದು ಇದರಿಂದ ವೇದ್ಯವಾಗುತ್ತಿದೆ. ಈ ಒಟ್ಟು ಸುಧಾರಣೆಗಳನ್ನು ನಮ್ಮ ಮುಂದಿನ ಜನಾಂಗದ ಜೀವನ ಯಾವ ರೀತಿಯಾಗಿರಬೇಕು, ಅದು ಯಾವ ರೀತಿ ರೂಪುಗೊಳ್ಳಬೇಕು, ಎನ್ನತಕ್ಕಂಥ ವಿಷಯಗಳ ಮೇಲೆ ನಿರ್ಧರಿಸಲ್ಪಟ್ಟವುಗಳಾಗಿವೆ ಎಂದು ಕಾಣುತ್ತಿದೆ. ಈ ಅಂಶವನ್ನು ನಾವು ನಮ್ಮ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಮುಂದಿನ ಜನಾಂಗ ಹೀಗಿರುತ್ತದೆ, ಅದರ ಆಗುಹೋಗುಗಳು, ನಡೆ ನುಡಿಗಳು, ಯಾವ ರೀತಿ ಇರು

ತ್ವವೆಯೆಂಬುದನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಬಹುದು.

ಈ ಪ್ರೌಢ ವಿದ್ಯಾಭ್ಯಾಸವನ್ನು ಅವರು ಮುಗಿಸಿಕೊಂಡು ಇಂಟರ್ ಮೀಡಿಯಟ್ ತರಗತಿಗಳಿಗೆ ಬರುವಾಗ ಅಷ್ಟರ ಹೊತ್ತಿಗೆ ಇಲ್ಲಿರತಕ್ಕ ರೀತಿ ಬಹಳ ಮಟ್ಟಿಗೆ ಬದಲಾವಣೆಯಾಗಿರುತ್ತದೆ. ಹೀಗೆ ಈ ಇಂಟರ್ ಮೀಡಿಯಟ್ ಕಾಲೇಜಿಗೆ ಬರುವಂಥ ಉಪಾಧ್ಯಾಯರುಗಳಾದರೋ ಬಹುಶಃ ಅವರು ಕಾಲೇಜುಗಳಲ್ಲಿ 3-4 ವರ್ಷಗಳು ವಿದ್ಯಾಭ್ಯಾಸ ಮಾಡಿಕೊಂಡು ಅಲ್ಲಿ ಪದವೀಧರರಾಗಿ ಒಂದು ಹೆಚ್ಚಿನ ಆಸಕ್ತಿಯಿಂದ ಬರತಕ್ಕಂಥವರಾಗಿರುತ್ತಾರೆ. ಅಂಥವರನ್ನು ಒಂದೇ ಬಾರಿಗೆ ಈ ಪ್ರೌಢಶಾಲೆಯ ವಿದ್ಯಾಭ್ಯಾಸದ ಇಲಾಖೆ ಸೇರಿಸುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಕಾರಣ ಇನ್ನು ಈ ಇಂಟರ್ ಮೀಡಿಯಟ್ ಕಾಲೇಜುಗಳೆಲ್ಲಾ ಡಿ. ಪಿ. ಐ.ರವರ ಅಧೀನದಲ್ಲಿ ನಡೆಯಬೇಕಾಗಿರುತ್ತವೆ. ಅಲ್ಲಿ ಒಂದು ರೀತಿಯಲ್ಲಿ ಕೆಲಸ ಮಾಡುತ್ತಿದ್ದಂಥ ಉಪಾಧ್ಯಾಯರಿಗೆ ಇಂಥ ಬದಲಾವಣೆ ಏಕ್‌ದಂ ಆಗುವುದೆಂದರೆ ಇದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಆದುದರಿಂದ what is the psychological effect ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಈ ರೀತಿಯಾಗಿ ವಿಶ್ವವಿದ್ಯಾನಿಲಯದಲ್ಲಿ ಒಂದು ರೀತಿಯಾಗಿ ಕೆಲಸ ಮಾಡಿಕೊಂಡಿರುವ ಉಪಾಧ್ಯಾಯರನ್ನು ಒಂದೇ ಸಾರಿಗೆ ಈ ಸುಧಾರಣೆಯಲ್ಲಿ ನಿರೂಪಿಸಿರುವ ಹಾಗೆ ಪ್ರೌಢ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳ ಕೈಕೆಳಗೆ ಅವರ ಒಂದು ಪರಿಮಿತಿಗೆ ಒಳಪಡಿಸಿದರೆ, ಇದರಿಂದಾಗತಕ್ಕ ಒಂದು ಮುಖ್ಯ ಬದಲಾವಣೆಯೇನೆಂದರೆ—ಈ ಉಪಾಧ್ಯಾಯರುಗಳಿಗೆ ಅವರ ಮುಖ್ಯ ಜೀವನದಲ್ಲಿ ಎಂದರೆ ಈ ಪಾಠ ಹೇಳಿಕೊಡುವ ಕ್ರಮದಲ್ಲಿ ಹೀಗೊಂದು ಬದಲಾವಣೆ ಅಥವಾ ವ್ಯತ್ಯಾಸವಾಗಿರುವುದರಿಂದ, ಇದರ ಪರಿಣಾಮವಾಗಿ ಅವರಿಗೆ ಸರಿಯಾಗಿ ಪಾಠ ಹೇಳಿಕೊಡುವುದಕ್ಕೆ ಬರುತ್ತದೆಯೋ, ಇಲ್ಲವೋ ಎಂಬ ಅನುಮಾನಕ್ಕೆ ಕಾರಣವಾಗುವುದಲ್ಲದೆ ಅವರು ಪಾಠ ಹೇಳಿ ಕೊಡತಕ್ಕ ದರ್ಜೆಯೇ ಕೆಳಗಿಳಿದಿರುವಂಥಾದ್ದು ಅನ್ನುವ ಒಂದು ಶಂಕೆಗೂ ಸಹ ಒಂದು ಅವಕಾಶವಿದೆಯೆಂದು ಕಾಣುತ್ತದೆ. ಸ್ವಾಮಿ, ಈ ಸುಧಾರಣೆಯಲ್ಲಿ ವಿಶ್ವವಿದ್ಯಾನಿಲಯದ ವಿಷಯವನ್ನು ವಿಶ್ವವಿದ್ಯಾನಿಲಯದ ಸಮಿತಿಗೆ ಒಪ್ಪಿಸುವ ವಿಧಾನವು ಬಹಳ ಸಂತೋಷಕರವಾದುದು. ವಿಶ್ವವಿದ್ಯಾನಿಲಯವು ಒಂದು ಪ್ರಜಾತತ್ವದ ಆಧಾರದ ಮೇಲೆ ನಡೆಯಬೇಕು ಎನ್ನುವ ಮಾರ್ಗವೂ ಇದರಲ್ಲಿ ನಿರೂಪಿಸಲ್ಪಟ್ಟಿದೆ. ಈ ವಿಶ್ವವಿಶ್ಯಾನಿಲಯದ ಆಡಳಿತವು ಸರ್ಕಾರದ ಬಲವಂತಕ್ಕೆ ಪದೇಪದೇ ಒಳಗಾಗದೆ ಅದು ಸಂಪೂರ್ಣವಾಗಿ ಒಂದು ಪ್ರಜಾತತ್ವದ ಮೇಲೆ ನಡೆದುಕೊಂಡು ಹೋಗುವುದು ಬಹಳವಾಗಿ ಒಪ್ಪತಕ್ಕಂಥ ನೀತಿ. ಕೇವಲ 2 ವರ್ಷಗಳ ಅಥವಾ ಪೋಸ್ಟ್-ಗ್ರ್ಯಾಜುಯೇಟ್ ಕೋರ್ಸುಗಳಿಗೆ ವಿಶ್ವವಿದ್ಯಾನಿಲಯಕ್ಕೆ ಬಹಳ ಹೆಚ್ಚಿನ ಖರ್ಚಿನ ಅಂದಾಜನ್ನು ಮಾಡಿದಂತೆ ನನ್ನ ಮನಸ್ಸಿಗೆ ಭಾಸವಾಗುತ್ತದೆ. ಬಿ.ಎ., ಬಿ.ಎಸ್‌ಸಿ., ಕಾಮರ್ಸ್ ಕೋರ್ಸ್, ಪೋಸ್ಟ್ ಗ್ರ್ಯಾಜುಯೇಟ್ ಕೋರ್ಸ್, ಟೆಕ್ನಿಕಲ್ ಕೋರ್ಸ್ ಇವುಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಕೆಲಸಮಾಡತಕ್ಕಂಥ ಕ್ರಮವನ್ನೇ ಇದರಲ್ಲಿ ಹಾಕಿಕೊಂಡಿದ್ದಾರೆ. ಮುಖ್ಯವಾಗಿ ಇಲ್ಲಿ ನಾನು ಹೇಳತಕ್ಕಂಥ ಅಂಶ ಇಂಟರ್ ಮೀಡಿಯಟ್ ಕೋರ್ಸನ್ನು ವಿಶ್ವವಿದ್ಯಾನಿಲಯದ ಆಡಳಿತದಿಂದ ತಪ್ಪಿಸುವುದು ಅಷ್ಟು ಸರಿಯಾಗಿ ಕಾಣುವುದಿಲ್ಲ ಎಂಬುದು. ಇದು ನನಗೆ ಕಂಡು ಬರತಕ್ಕಂಥ ಒಂದು ಅಭಿಪ್ರಾಯ.

ಆಮೇಲೆ ಅಡಲ್ಟ್ ಎಜ್ಯುಕೇಷನ್ ಮತ್ತು ಇನ್ನು ಕೆಲವಾರು ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಇವೂ ಸಹ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬಹಳವಾಗಿ ಸಹಾಯವನ್ನು ಮಾಡುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿ ಯೋಚನೆ ಮಾಡತಕ್ಕದ್ದು ಒಂದು ಅಂಶ. ಈ ಸಂಸ್ಥೆಗಳು ಎಷ್ಟರಮಟ್ಟಿಗೆ ಈ ವಿದ್ಯಾಭ್ಯಾಸಕ್ರಮಕ್ಕೆ ಪ್ರೋತ್ಸಾಹವನ್ನು ಕೊಡಬಲ್ಲವು ಎಂಬುದು ಮುಖ್ಯವಾದ ವಿಚಾರ. ಅಡಲ್ಟ್ ಎಜುಕೇಷನ್ ನಾವು ಉದಾಹರಣೆಗೆ ತೆಗೆದುಕೊಂಡರೆ ಈ ವಯಸ್ಕರ ಶಿಕ್ಷಣವು ಎಷ್ಟರಮಟ್ಟಿಗೆ ಸಮಾಜದಲ್ಲಿರತಕ್ಕಂಥ ಜನರಿಗೆ ಅನುಕೂಲವನ್ನು ಕಲ್ಪಿಸಬಹುದು, ಎಷ್ಟರ ಮಟ್ಟಿಗೆ ಇಂತಹ ಸಂಸ್ಥೆಗಳು ಸರ್ಕಾರದಿಂದ ಸಹಾಯವನ್ನು ಹೊಂದಿ ಮುಖ್ಯವಾಗಿ ವಯಸ್ಕರು ಸಮಾಜದಲ್ಲಿ ತಮ್ಮಷ್ಟಕ್ಕೆ ತಾವೇ ಸರಿಯಾದ ಮಾರ್ಗದಲ್ಲಿ ನಡೆಯಲು ಸಹಾಯವನ್ನು ಮಾಡಬಹುದು ಎನ್ನತಕ್ಕಂಥಾದ್ದನ್ನು ಬಹುವಾಗಿ ಯೋಚನೆ ಮಾಡಬೇಕಾಗಿದೆ. ವಯಸ್ಕರ ಶಿಕ್ಷಣ ವ್ಯವಸ್ಥೆಯಿಂದ ಎಷ್ಟರಮಟ್ಟಿಗೆ ವಯಸ್ಕರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ದಾರಿಯಲ್ಲಿ ಸಹಾಯವನ್ನು ಮಾಡಬಹುದು ಎನ್ನುವುದನ್ನು ನಾವು ಯೋಚನೆಮಾಡಬಹುದಾಗಿದೆ.

ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಮನೆಯಲ್ಲಿ ಆದಷ್ಟು ವಿದ್ಯಾಭ್ಯಾಸವನ್ನು ಕೊಡಬೇಕು. ಈ ದೃಷ್ಟಿಯಿಂದಲೇ ವಯಸ್ಕರ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿಟ್ಟುಕೊಳ್ಳಬೇಕೆಂಬುದು ಸಹ ಸಮಿತಿಯವರ ಅಭಿಪ್ರಾಯವಾಗಿರುವಂತೆ ಕಾಣುತ್ತದೆ. ಹಾಲಿ ಹಳ್ಳಿಯಲ್ಲಿರತಕ್ಕ ಒಬ್ಬ ಅನುಕೂಲಸ್ಥನಾದ ರೈತನು ವಯಸ್ಕರ ಶಿಕ್ಷಣ ಪದ್ಧತಿಯ ಪ್ರಕಾರ ವಿದ್ಯಾವಂತನಾಗಿ ತನ್ನ ಮಕ್ಕಳಿಗೆ ಎಷ್ಟುಮಟ್ಟಿಗೆ ವಿದ್ಯಾಭ್ಯಾಸವನ್ನು ಕಲಿಸುವುದರಲ್ಲಿ ಸಹಾಯಕನಾಗಬಹುದೆಂಬುದನ್ನು ನಾವು ಯೋಚಿಸಬೇಕಾಗಿದೆ. ಇಲ್ಲಿ ಹೇಳಿರುವಷ್ಟರ ಮಟ್ಟಿಗೆ ವಯಸ್ಕರ ಶಿಕ್ಷಣ ಪದ್ಧತಿಯಿಂದ ಬಾಲಕರ ವಿದ್ಯಾಭ್ಯಾಸಕ್ಕೆ ನಿಲುವು ಸಿಕ್ಕುತ್ತದೆಯೇ ಎಂಬುದು ಅನುಮಾನಾಸ್ಪದವಾದ ವಿಚಾರ. ಏಕೆಂದರೆ, ರೈತನು ತನಗೆ ಸಾಧ್ಯವಾದಷ್ಟು ವಿದ್ಯಾಭ್ಯಾಸವನ್ನು ವಯಸ್ಕರ ಶಿಕ್ಷಣ ಪದ್ಧತಿಯಿಂದ ಕಲಿತುಕೊಳ್ಳಲು ಸಾಧ್ಯವಿಲ್ಲ. ಕಲಿತುಕೊಂಡರೂ ಸಹ ಆ ಶಿಕ್ಷಣ ಆತನ ಮನಸ್ಸಿನಲ್ಲಿ ಒಂದು ವಿದ್ಯಾಭ್ಯಾಸ ಕ್ರಮವನ್ನು ಅಂಕುರಿಸುವಂತೆ ಮಾಡಲಾರದು. ಆದುದರಿಂದ ಸಮಿತಿಯ ಶಿಫಾರ್ಸಿನಲ್ಲಿ ವಯಸ್ಕರ ಶಿಕ್ಷಣ ಕ್ರಮದ ವಿಚಾರದಲ್ಲಿ ಅಷ್ಟೇನೂ ಆಶಾದಾಯಕವಾದ ಅಂಶಗಳು ಅಡಗಿಲ್ಲವೆಂದೇ ಹೇಳಬೇಕಾಗಿದೆ. ನಮ್ಮ ಸಂಸ್ಥಾನದ ವಿದ್ಯಾ ಸುಧಾರಣೆಯ ಬಗ್ಗೆ ನಾವು ಈಗ ಅತಿ ಮುಖ್ಯ ಪ್ರಾಧಾನ್ಯತೆಯನ್ನು ಕೊಡಬೇಕಾದುದು ಎರಡು ಅಂಶಗಳಿಗೆ—ಮೊದಲನೆಯದು, ವಯಸ್ಕರ ಶಿಕ್ಷಣ, ಎರಡನೆಯದು, ಮಕ್ಕಳ ವಿದ್ಯಾಭಿವೃದ್ಧಿ. ಇವೆರಡನ್ನೂ ಸುವ್ಯವಸ್ಥಿತ ರೀತಿಯಲ್ಲಿ ತರಲು ಏನು ಮಾಡಬೇಕೋ ಅದನ್ನು ಮಾಡಿ, ನೇರವಾಗಿ ಮಕ್ಕಳಿಗೆ ಯಾವ ರೀತಿಯಲ್ಲಿ ಸುಗಮವಾದ ಮಾರ್ಗವನ್ನು ಅನುಸರಿಸಿದರೆ ಅವರ ಮುಂದಿನ ಜೀವಮಾನವು ಯಶಸ್ವಿಯಾಗಿ ಹಾಗೂ ಸಮಾಜಕ್ಕೆ ಅದರಿಂದ ಅನುಕೂಲವಾದೀತು ಎಂಬ ಅಂಶವನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ. ವಿದ್ಯಾ ಸುಧಾರಣೆಯ ಸಂದರ್ಭದಲ್ಲಿ general education ಮತ್ತು technical education—ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು, ವಿದ್ಯೆ ಕಲಿತ ವಿದ್ಯಾರ್ಥಿಯು ಕೆಲಸವನ್ನು ಹುಡುಕಿಕೊಂಡು ಹೋಗುವ ಸ್ಥಿತಿಗೆ ಬರಬಾರದು ಎಂಬ ಅಂಶವನ್ನು ನಾವು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು.

(ಶ್ರೀ ಬಿ. ಟಿ. ಕೆಂಪರಾಜ್.)

ಇವೆಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ಸಂಸ್ಥಾನದ ವಿದ್ಯಾ ಸ ಧಾರಣೆಗೆ ಅಗತ್ಯವಾಗಿ ಬೇಕಾಗಿರುವ ದುಡ್ಡಿನ ಅಂಶ ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶ. ಈ ವಿದ್ಯಾ ಸುಧಾರಣೆಗೆ ಎಷ್ಟು ಮಟ್ಟಿಗೆ ಹಣದ ಸಹಾಯ ನಮಗೆ ಬೇಕು ಎಂಬುದು ಪೆಡಂಭೂತದ ರೀತಿಯಲ್ಲಿ ಎದ್ದು ಕಾಣುತ್ತಿರುವ ಅಂಶವಾಗಿ ಪರಿಣಮಿಸಿದೆ. ಈ ಸುಧಾರಣೆಯನ್ನು ಜಾರಿಗೆ ತರಬೇಕಾದರೆ ಯಾವ ರೀತಿ ಹಣ ಒದಗಿಸಬೇಕು ಎಂಬುದು ದೇಶದ ಮುಂದೆ, ಹಾಗೂ ಸರ್ಕಾರದ ಮುಂದೆ ಇರತಕ್ಕ ಪ್ರಶ್ನೆಯಾಗಿದೆ. ಅಲ್ಲದೆ ಇಷ್ಟು ಮಂದಿ ವಿದ್ಯಾವಂತರಿಗೂ ಜೀವನ ಮಾರ್ಗವನ್ನು ಕಲ್ಪಿಸುವುದು ಯಾವ ರೀತಿ ಎಂಬುದೂ ಸಹ ನಮ್ಮೆಲ್ಲರ ಮನಸ್ಸನ್ನು ಕದಡುವ ವಿಚಾರವಾಗಿದೆ.

[MR. DEPUTY SPEAKER in the Chair.]

ಏಕೆಂದರೆ ನಾವು ಈ ಹೊತ್ತಿನದಿವಸ ಈ ಸುಧಾರಣೆ ಮೂಲಕ ಮುಂದಿನ ಜನಾಂಗ ಬುದ್ಧಿವಂತರಾಗಲು, ಅವರ ಮೆದುಳಿಗೆ ಒಂದು ಹೊಸ ಹುರುಪನ್ನು ಕೊಡುತ್ತಾ ಇದ್ದೇವೆ. ಈ ಒಂದು ಬದಲಾವಣೆಯನ್ನು ಮಾಡುತ್ತಿರುವಾಗ ಅವರ ಹೊಟ್ಟೆಯ ಮತ್ತು ಬಟ್ಟೆಯ ಮುಂದಿನ ಬದುಕಿಗೆ ಮಾರ್ಗ ಏನು ಎಂಬುದನ್ನು ನಾವು ಮುಖ್ಯವಾಗಿ ಯೋಚನೆ ಮಾಡಬೇಕಾಗಿದೆ. ಕೇವಲ ಈ ವಿದ್ಯಾಭ್ಯಾಸ ಸುಧಾರಣೆಯಿಂದ ಇಡೀ ದೇಶದ ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ನಿರ್ಧರಿಸಲು ಸಾಧ್ಯವೇ ಎಂಬ ಪ್ರಶ್ನೆ ಬಹಳ ಮುಖ್ಯವಾದದ್ದು. ವಿದ್ಯಾಭ್ಯಾಸದ ಸುಧಾರಣೆಯನ್ನು ತರುವುದರಿಂದ ದೇಶದ ಮುಂದಿರತಕ್ಕಂಥಾ ಪ್ರತಿಯೊಂದು ವಿಚಾರಗಳನ್ನು ನಾವು ಎದುರಿಸಬಲ್ಲೆವೇ ಎಂಬುದನ್ನು ಸಹ ನಾವು ಇವೊತ್ತಿನ ದಿವಸ ಯೋಚನೆ ಮಾಡಬೇಕಾಗಿದೆ. ಕೇವಲ ಬಡವರಾಗಿರತಕ್ಕಂಥ, ತೀರ ಗರೀಬರಾಗಿರತಕ್ಕಂಥ ಜನರ ವಿಚಾರವಾಗಿ ನಾವು ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಈ ಸುಧಾರಣೆಯಲ್ಲಿ ನಮೂದಿಸಿರುವಂತೆ ಎಷ್ಟು ಜನ ತಮ್ಮ ಮಕ್ಕಳನ್ನು ನರ್ಸರೀ ಪಾಠಶಾಲೆಗಳಿಗೆ ಕಳುಹಿಸಬಲ್ಲರು, ಎಷ್ಟು ಜನರು ತಮ್ಮ ಮಕ್ಕಳಿಗೆ ಮನೆಯಲ್ಲೇ ವಿದ್ಯಾಭ್ಯಾಸವನ್ನು ಕೊಡಬಹುದು, ನಾವು ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತಂದಲ್ಲಿ ಎಷ್ಟು ಜನರು ತಮ್ಮ ಮಕ್ಕಳನ್ನು ಪಾಠಶಾಲೆಗಳಿಗೆ ಕಳುಹಿಸಬಹುದು ಎಂಬ ಒಂದು ಅಂಶವನ್ನು ಸಹ ನಾವು ಯೋಚನೆ ಮಾಡಬೇಕಾಗಿದೆ. ಸ್ವಾಮಿ, ಇದೇ ರೀತಿ ಈ ಸುಧಾರಣೆ ಯಾವ ರೀತಿ ಬಂದಿದೆಯೋ ಹಾಗೆಯೇ ಪ್ರತಿಯೊಂದು ಘಟ್ಟದಲ್ಲೂ ಸುಧಾರಣೆಗಳು ಅಗತ್ಯವಾಗಿ ಬರಬೇಕಾಗಿದೆ. ಯಾವ ರೀತಿ ವಿದ್ಯಾಭ್ಯಾಸದ ಸುಧಾರಣೆ ದೇಶದ ಮುಂದಿನ ಜನಾಂಗಕ್ಕೆ ಅತ್ಯಗತ್ಯ ಎಂದು ಭಾವಿಸುತ್ತಾ ಇದ್ದೇವೆಯೋ ಅದೇ ರೀತಿ ಆರ್ಥಿಕ, ಸಾಮಾಜಿಕ ಘಟ್ಟಗಳಲ್ಲೂ, ಸಹ ಸುಧಾರಣೆಗಳು ಬಹಳ ಮುಖ್ಯವಾಗಿವೆ.

ಇನ್ನೂ ಎರಡು ವಿಚಾರಗಳಿವೆ. ಸ್ವಾಮಿ, ಈ ಸುಧಾರಣೆಯಲ್ಲಿ ನಿಮ್ನ ತರಗತಿಯವರಿಗೆ ಯಾವ ಒಂದು ವಿಧವಾದ ರಿಯಾಯಿತಿಗಳೂ ನಮೂದಾಗಿಲ್ಲ ಎಂದು ನನಗೆ ಕಂಡುಬರುತ್ತಿದೆ.

ಶ್ರೀ ವಿ. ವೆಂಕಟಪ್ಪ.—ಅವರಿಗೆ ಕಡ್ಡಾಯ ವಿದ್ಯಾಭ್ಯಾಸ ಬೇಡ ಎಂದು ಹೇಳುತ್ತೀರಾ?

ಶ್ರೀ ಬಿ. ಟಿ. ಕೆಂಪರಾಜ್.—ಕಡ್ಡಾಯ ವಿದ್ಯಾಭ್ಯಾಸ ನಿಮ್ನ ತರಗತಿಯವರಿಗೆ ಬೇಡ ಎಂದು ಹೇಳುತ್ತಿಲ್ಲ. ಅವರಿಗೂ ಸಹ ಕಡ್ಡಾಯ ವಿದ್ಯಾಭ್ಯಾಸ ಬೇಕು. ಆದರೆ ಆ ರೀತಿ ಒಂದು ವಿದ್ಯಾಭ್ಯಾಸದ ಕ್ರಮವನ್ನು ಅವರಿಗೆ ಕೊಟ್ಟಿಲ್ಲ. ಅವರು ಯಾವ ರೀತಿ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕೋ ಅದಕ್ಕೆ ತಕ್ಕಂಥ ಅನುಕೂಲಗಳನ್ನು ಕಲ್ಪಿಸಬೇಕು. ಹಾಗೆ ಸರಿಯಾದ ಅನುಕೂಲಗಳನ್ನು ಕಲ್ಪಿಸಲು ಆಗಬೇಕಾದಂಥ ಆರ್ಥಿಕ ಬದಲಾವಣೆಗಳನ್ನು ಕೂಡ ಈ ಸುಧಾರಣೆಯ ಜೊತೆಯಲ್ಲೇ ಮಾಡಬೇಕಾದದ್ದು ಸರ್ಕಾರದ ಮತ್ತು ಮಾನ್ಯ ಸದಸ್ಯರ ಜವಾಬ್ದಾರಿ ಎಂದು ನಾನು ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳುತ್ತಾ ಇದ್ದೇನೆ.

ಸ್ವಾಮಿ, ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಈಗಾಗಲೇ ಹೇಳಿರುವಂತೆ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ, ಹೆಣ್ಣುಮಕ್ಕಳ ಅಭಿವೃದ್ಧಿಗೆ ಕಾಲೇಜುಗಳಲ್ಲಿ ಮತ್ತು ಇನ್ನು ಇತರ ಪಾಠಶಾಲೆಗಳಲ್ಲಿ ಅಲ್ಪಸ್ವಲ್ಪ ರಿಯಾಯಿತಿಗಳನ್ನು ಕೊಡುತ್ತಾ ಇದ್ದಾರೆ. ಈ ರಿಯಾಯಿತಿಗಳನ್ನು ಇನ್ನು ಮುಂದೆಯೂ ಕೊಡಬೇಕಾಗುತ್ತದೆಂದು ಈ ಸಮಿತಿಯವರು ಅಭಿಪ್ರಾಯಪಟ್ಟಿರುವಂತೆ ಕಂಡು ಬರುತ್ತದೆ. ಆದರೆ ಸರ್ಕಾರದವರು ಈ ರಿಯಾಯಿತಿಗಳನ್ನು ತೆಗೆದುಹಾಕುವ ಮನೋಭಾವವನ್ನು ಹೊಂದಿದ್ದಾರೆ. ಇದರಿಂದ ಅನೇಕ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿದೆ. ಹೆಣ್ಣುಮಕ್ಕಳೂ ಸಹ ಗಂಡುಮಕ್ಕಳ ಹಾಗೆ ವಿದ್ಯಾವಂತರಾಗಬೇಕು. ಅವರೂ ಸಮಾಜದಲ್ಲಿ ಸರಿಯಾದ ಹಕ್ಕುಬಾಧ್ಯತೆಗಳನ್ನು ಗಳಿಸುವಂತಾಗಬೇಕೆಂದು ವಾದಿಸುತ್ತಿರುವ ಈ ಕಾಲದಲ್ಲಿ ಅವರಿಗೆ ಈ ರೀತಿಯ ಅನಾನುಕೂಲತೆಗಳನ್ನು ಕಲ್ಪಿಸುವುದು ಅನ್ಯಾಯವಾಗಿ ಕಾಣುತ್ತದೆ.

ಇವೆಲ್ಲಾ ಅಂಶಗಳನ್ನು ಸರ್ಕಾರದವರು ಮನಗಂಡು ಈ ಸುಧಾರಣೆಗಳನ್ನು ಜಾರಿಗೆ ಕೊಡಬೇಕಾದರೆ ಮೊದಲು ಇದರಿಂದ ವಹಿಸಬೇಕಾಗುವ ಹಣಕಾಸಿನ ಜವಾಬ್ದಾರಿಯೇನೆಂಬುದನ್ನು ನೋಡಬೇಕು.

ಉಪಾಧ್ಯಕ್ಷರು.—ನಿಮ್ಮ concrete suggestions ಏನು? ಅದನ್ನು ಹೇಳಲಿಲ್ಲವಲ್ಲಾ!

ಶ್ರೀ ಬಿ. ಟಿ. ಕೆಂಪರಾಜ್.—ಇಲ್ಲಿಯವರೆಗೂ ನನಗೆ ಗೊತ್ತಿರುವ ಮಟ್ಟಿಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇನೆ. ಮುಂದೆ ಈ ಸುಧಾರಣೆಗಳನ್ನು ಜಾರಿಗೆ ಕೊಡುವಾಗ ಬಹಳ ಮುಖ್ಯವಾದದ್ದು ಹಣದ ಸಮಸ್ಯೆ. ಇದರ ಬಗ್ಗೆ ಕೂಲಂಕಷವಾಗಿ ಯೋಚನೆ ಮಾಡಿ, ಹಿಂದುಳಿದ ಕೋಮುಗಳಿಗೆ ದೊರಕಬೇಕಾದ ಅನುಕೂಲತೆಗಳನ್ನು ಏರ್ಪಡಿಸುವುದಕ್ಕೆ ಅವಕಾಶ ಮಾಡಿಕೊಂಡು ಪ್ರೈಮರಿ ವಿದ್ಯಾಭ್ಯಾಸದ ಮಟ್ಟದಲ್ಲಿ ಕೋಳಿ ಸಾಕುವುದೇ ಮುಂತಾದುವುಗಳನ್ನು ಜಾರಿಗೆ ತರುವುದನ್ನು ಸುದೀರ್ಘವಾಗಿ ಯೋಚನೆ ಮಾಡಿ ತರಬೇಕೆಂದು ಹೇಳಿ, ಒಟ್ಟಿನಲ್ಲಿ ಈ ಸುಧಾರಣೆಗಳು ದೇಶದ ಪ್ರಗತಿಯ ದೃಷ್ಟಿಯಿಂದ ಬಹಳ ಅಗತ್ಯವಾದುವೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

* ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಅಧ್ಯಕ್ಷರೇ, ಈ ಸಭೆಯ ಮಾನ್ಯ ಸದಸ್ಯರನೇಕರು ಈ ವರದಿಯ ಮೇಲೆ ತಮ್ಮ ಅಭಿಪ್ರಾಯಗಳನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ. ಆದ್ದರಿಂದ ನಾನು ಹೆಚ್ಚಿಗೆ ಹೇಳಬೇಕಾದದ್ದೇನೂ ಇರುವುದಿಲ್ಲ. ಒಟ್ಟಿನಮೇಲೆ ಹೇಳುವುದಾದರೆ, ಈ ಸುಧಾರಣೆಯಲ್ಲಿ ಅಷ್ಟಿಷ್ಟು ಲೋಪದೋಷಗಳಿದ್ದರೂ, ಇದನ್ನು ನಾನು ಸ್ವಾಗತಿಸುತ್ತೇನೆ.

ಈ ಸುಧಾರಣೆಗಳ ಮೇಲೆ ಮಾತನಾಡುವ ಮುನ್ನ, ಪ್ರಾರಂಭದಲ್ಲಿ ಒಂದಂಶವನ್ನು ನಾನು ಸಭೆಯ ಗಮನಕ್ಕೆ ತರಬೇಕೆಂದು ಅಪೇಕ್ಷಪಡುತ್ತೇನೆ. ಯಾವ ಕಾಲದಲ್ಲೇ ಆಗಲಿ ಏನು ಒಂದು ಮಹತ್ತರವಾದ ಬದಲಾವಣೆಗಳನ್ನು ಮಾಡಬೇಕೆಂದರೂ ಜಗತ್ತಿನಲ್ಲಿ ಅದಕ್ಕೆ ವಿರೋಧವಿದ್ದೇ ಇರುತ್ತದೆ. ಏನೋ ಸಂಭವಿಸಿಬಿಡುತ್ತದೆ, ಏನೋ ತೊಂದರೆ ಉಂಟಾಗುತ್ತದೆಂಬ ಭಯ ಕೆಲವರಲ್ಲಿ ಇದ್ದೇ ಇರುತ್ತದೆ. ಇದೇ ಅಭಿಪ್ರಾಯವನ್ನು ಮೊನ್ನೆಮೊನ್ನೆ ಮದ್ರಾಸ್ ಸರ್ಕಾರದ ಮುಖ್ಯ ಮಂತ್ರಿಗಳಾದ ಸಿ. ಆರ್. ರಾಜಗೋಪಾಲಾಚಾರಿಯವರು ಎಲಿಮೆಂಟರಿ ಎಜುಕೇಷನ್ ಸ್ಕೀಮನ್ನು ಜಾರಿಗೆ ಕೊಟ್ಟ ಸಂದರ್ಭದಲ್ಲಿ ವ್ಯಕ್ತಪಡಿಸಿರುತ್ತಾರೆ. ಮಹಾತ್ಮಾ ಗಾಂಧಿಯವರೇ ಆಗಿರಲಿ, –ಎಂಥ ಮಹನೀಯರೇ ಆಗಿರಲಿ, ಜಗತ್ ಕಲ್ಯಾಣಕ್ಕಾಗಿಯೆಂದೇ ಏನೇ ಉತ್ತಮವಾದ ಸುಧಾರಣೆಯನ್ನು ತಂದರೂ ಅದನ್ನು ಜನ ವಿರೋಧಿಸುವುದು ಸಾಮಾನ್ಯ. ಇದನ್ನು ಮನಗಂಡು, ನಮ್ಮ ಸರ್ಕಾರದವರು, ಈ ಸುಧಾರಣೆಗಳಿಗೆ ವಿರೋಧ ಬಂದಿತೆಂದು ಕೈಬಿಡದೆ ಅದನ್ನು ಜಾರಿಗೆ ತಂದೇ ತರುತ್ತಾರೆಂದು ನಂಬಿದ್ದೇನೆ.

ಇಷ್ಟಾದಮೇಲೆ, ಈ ರಿಪೋರ್ಟಿನ ವಿಚಾರದಲ್ಲಿ ಜನಾಭಿಪ್ರಾಯ ಯಾವರೀತಿ ಯಿದೆಯೆಂಬುದನ್ನು ಹೇಳಲು ನಾನು ಈ ಸಭೆಯ ಅಪ್ಪಣೆಯನ್ನು ಬೇಡುತ್ತೇನೆ. ನಾನು ಕಣ್ಣಲ್ಲಿ ಕಂಡಿದ್ದು, ಕಿವಿಯಲ್ಲಿ ಕೇಳಿದ್ದು ಹೇಳುವುದಾದರೆ, ಎಲ್ಲಾ ಕಡೆಯಲ್ಲೂ ಕೂಡ ಜನತೆ ಈ ಸುಧಾರಣೆಗಳಲ್ಲಿ ಅಲ್ಪಸ್ವಲ್ಪ ಲೋಪಗಳಿದ್ದರೂ, ಒಟ್ಟಿನಲ್ಲಿ ಇದನ್ನು ಏಕಾಭಿಪ್ರಾಯದಿಂದ ಸ್ವಾಗತಿಸುವವರಾಗಿದ್ದಾರೆಂದು ನಾನು ಖಂಡಿತವಾಗಿ ಹೇಳುತ್ತೇನೆ.

5 P.M.

ಏಕೆಂದರೆ, ಯಾವ ಸಮಿತಿಯನ್ನೇ ಮಾಡಲಿ, ಇನ್ನೊಂದು ಬೇರೆ ಸಮಿತಿಯನ್ನು ಮಾಡಿ, ಅದು ಬೇರೊಂದು ವರದಿಯನ್ನು ತಯಾರಿಸಿದರೂ ಕೂಡ ಇಂಥಾ ಟೀಕೆ ಬಂದೇ ಬರುತ್ತದೆ. ಈ ವಿಷಯದಲ್ಲಿ ಜನಾಭಿಪ್ರಾಯ ಶೇಖರಮಾಡುವುದಕ್ಕಾಗಿ ಸರ್ಕಾರದವರು ಸಮ್ಮೇಳನಗಳನ್ನೇರ್ಪಾಡುಮಾಡಿದರು. ನಮ್ಮ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರು ಹೋಗಿ ಜನಾಭಿಪ್ರಾಯಗಳನ್ನು ಸಂಗ್ರಹಮಾಡಿದರು, ಅವರು ಹೋದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ, ಅಶೋಕ, ಚಂದ್ರಗುಪ್ತ ಮುಂತಾದವರು ವಿಜಯಯಾತ್ರೆಹೋಗಿ ಹೇಗೆ ವಿಜಯಗಳಿಸಿಕೊಂಡು ಬಂದರೋ, ಹಾಗೆ ಇವರೂ ಕೂಡ ವಿಜಯವನ್ನುಗಳಿಸಿಕೊಂಡು ಬಂದಿದ್ದಾರೆ. ಇದೇ ಸಭೆಯ ಸದಸ್ಯರಾಗಿರುವ ಮಹನೀಯರೊಬ್ಬರು ಒಂದು ಸಮ್ಮೇಳನದಲ್ಲಿ ಅಧ್ಯಕ್ಷತೆವಹಿಸಿ, ಈ ಸುಧಾರಣೆಗಳು ಸರ್ವದೃಷ್ಟಿಯಿಂದಲೂ ಉತ್ತಮವಾಗಿವೆ, ಇವುಗಳನ್ನು ಕಾರ್ಯಗತಮಾಡುವುದು ಸರ್ಕಾರದ ಕರ್ತವ್ಯ, ಹಾಗೆ ಮಾಡದಿದ್ದರೆ ಸುಮ್ಮನಿರುವುದಿಲ್ಲವೆಂದು ಅಪ್ಪಣೆ ಕೊಟ್ಟಿದ್ದಾರೆ,

(*Interruption*)

ಉಪಾಧ್ಯಕ್ಷರು.—ಈ ವರದಿಯ ಮೇಲೆ ಏನಾದರೂ ಇದ್ದರೆ ಹೇಳಿ.

ಶ್ರೀ ಜಿ. ಶಿವಪ್ಪ.—ಇನ್ನು ಈ ಸಮಿತಿಯ ವರದಿಯಲ್ಲಿರುವ ಅತಿ ಮುಖ್ಯವಾದ ಅಂಶಗಳನ್ನು ನೋಡಿದರೆ, ಇವುಗಳಲ್ಲಿ ಏನೇನು ಒಳ್ಳೆಯ ಸಲಹೆಗಳಿವೆಯೆಂದು ನೋಡಿದರೆ, ಪ್ರತಿಯೊಂದೂ ಸರ್ವಸಾಮಾನ್ಯವಾಗಿ ಒಪ್ಪಿಗೆಯಾಗತಕ್ಕ ರೀತಿಯಲ್ಲಿವೆ. ಏಕೆಂದರೆ, ಆ ಸಮಿತಿಯಲ್ಲಿ 40 ಜನರಿದ್ದರು. ಅವರಲ್ಲಿ ಯಾರಾದರೊಬ್ಬರಿಗಾಗಲೀ ದಕ್ಷತೆಯಿಲ್ಲವೆಂದು ಯಾರೂ ಹೇಳುವ ಹಾಗಿಲ್ಲ. ಆ ಸಮಿತಿಯಲ್ಲಿ ವಿಶ್ವವಿದ್ಯಾನಿಲಯಗಳ ವೈಸ್ ಚಾನ್ಸೆಲರುಗಳು, ಮಾಜಿ ಮಂತ್ರಿಗಳು.—ಇಂಥವರಿದ್ದಾರೆ; ವಿದ್ಯಾಭ್ಯಾಸದಲ್ಲಿ ಪಂಡಿತರಾದವರಿದ್ದಾರೆ . . . . .

ಉಪಾಧ್ಯಕ್ಷರು.—ಸಮಿತಿಯ ಸದಸ್ಯರ ಹೆಸರುಗಳು ಮುದ್ರಣವಾಗಿವೆ. ಅವರ ವರದಿಯ ವಿಚಾರದಲ್ಲಿ ನಿಮ್ಮ ಅಭಿಪ್ರಾಯ ಹೇಳಿ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಸಮಿತಿಯಲ್ಲಿ ಮೂರನೆಯ ಒಂದು ಭಾಗದಷ್ಟು ಸದಸ್ಯರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿಕೊಟ್ಟಿರುವ ಹೇಳಿಕೆಗಳು ಬಂದಿವೆ.

ಶ್ರೀ ಜಿ. ಶಿವಪ್ಪ.—ತಮಗೆ ಗೊತ್ತಿರುವಂತೆ, ಮೊದಲನೆಯದಾಗಿ, ಒಂದು ಟೀಕೆ ಬಂದಿದ್ದೇನೆಂದರೆ, ಪ್ರೈಮರಿ ಮತ್ತು ಮಾಧ್ಯಮಿಕ ಶಿಕ್ಷಣ ಎಂಟು ವರ್ಷವಿದ್ದುದನ್ನು ಆರು ವರ್ಷಕ್ಕೆ ಇಳಿಸಿದ್ದಾರೆಂಬುದು. ಇದಕ್ಕೆ ಅತಿ ಮುಖ್ಯ ಕಾರಣಗಳನ್ನು ಹೇಳುತ್ತೇನೆ. ನಾವು ಯಾವುದೊಂದು ಕೆಲಸವನ್ನು ಮಾಡಬೇಕಾದರೂ ಆದರಿಂದ ಹೆಚ್ಚು ಜನರಿಗೆ ಅನುಕೂಲವಾಗಬೇಕು. ಈ [illegible]ನ ದಿವಸ ರಾಜ್ಯಾಂಗದ ಪ್ರಕಾರ 14 ವರ್ಷದವರೆಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡಬೇಕೆಂದಿದ್ದರೂ ಕೂಡ, ನಮ್ಮ ಹಣಕಾಸಿನ ಪರಿಸ್ಥಿತಿಯಿಂದಲೂ ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಿರುವುದರಿಂದಲೂ ಹಾಗೆ ಕೊಡಲು ಶಕ್ತಿಯಿಲ್ಲ. ಈ ದೃಷ್ಟಿಯಿಂದ ಆರನೆಯ ವರ್ಷದಿಂದ 12ನೆಯ ವರ್ಷದವರೆಗಾದರೂ ಕೊಟ್ಟರೆ ಅನುಕೂಲವೆಂದು ಮಾಡಿದ್ದಾರೆ. To get the target of the greatest number, ಎಂದರೆ, ಹೆಚ್ಚು ಜನರಿಗೆ ವಿದ್ಯಾಭ್ಯಾಸದ ಅನುಕೂಲಮಾಡುವ ಉದ್ದೇಶದಿಂದ ಎರಡು ವರ್ಷ ಕಡಮೆ ಮಾಡಿದರೂ ಚಿಂತೆಯಿಲ್ಲವೆಂದು ಮಾಡಿದ್ದಾರೆ. ಪ್ರೈಮರಿ ವಿದ್ಯಾಭ್ಯಾಸದ ವಿಷಯದಲ್ಲಿ ರಾಜ್ಯಾಂಗದಲ್ಲಿರುವುದು ಮ್ಯಾಂಡೇಟರಿಯಾಗಿಲ್ಲ. "The State shall endeavour . . . " ಎಂದಿದೆ. ಇದು ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿ ಒಂದು. ಹೀಗೆಯೇ ಹತ್ತಾರು ವಿಷಯಗಳಲ್ಲಿ—ಪಾನನಿರೋಧ, ವಿದ್ಯಾಭ್ಯಾಸ, ಹಿಂದೀ ಪ್ರಚಾರ ಇವುಗಳ ವಿಷಯದಲ್ಲಿಯೂ ಇದೆ. ಇದೊಂದು ಡೈರೆಕ್ಟಿವ್ ಪ್ರಿನ್ಸಿಪಲ್ ಮಾತ್ರವೇ ಹೊರತು ಇದೇ ಪ್ರಕಾರ ಮಾಡಲೇಬೇಕೆಂಬ ಕಡ್ಡಾಯವಾದ ಕಾನೂನಲ್ಲವೆಂದು ಟೀಕೆಮಾಡುವವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ, ಎಂಟು ವರ್ಷದೊಳಗೆ, 14 ವರ್ಷ ಅವಧಿಯಲ್ಲಿ ಒಬ್ಬ ವಿದ್ಯಾರ್ಥಿಗೆ ಎಷ್ಟು ಮಟ್ಟಿನ ಶಿಕ್ಷಣಕೊಟ್ಟು ತಯಾರುಮಾಡುತ್ತಿದ್ದರೋ ಅಷ್ಟೇ ಮಟ್ಟಿಗೆ ಶಿಕ್ಷಣ ಕೊಟ್ಟು ತಯಾರುಮಾಡುವ ಉದ್ದೇಶದಿಂದ ಯೋಜನೆಮಾಡಿದ್ದಾರೆ. 8 ವರ್ಷಗಳ ಮೇಲ್ಪಟ್ಟು 14 ವರ್ಷಗಳ ವಯಸ್ಸಿನೊಳಗಿರತಕ್ಕಂಥ ಹುಡುಗರನ್ನು ಈ ವಿಚಾರ ಶ್ರೀಮ್ ಕೆ. ಪಟ್ಟಾಭಿರಾಮ್‌ರವರಿಗೆ ಚೆನ್ನಾಗಿ ಗೊತ್ತಿದೆಯೆಂದು ಕಾಣುತ್ತದೆ.—ಎಷ್ಟು ಹುಡುಗರನ್ನು ತಯಾರಿಸಲು ಶಕ್ತಿಯಿರುತ್ತದೆಯೋ ಅಷ್ಟು ಹುಡುಗರನ್ನು ಅವರಿಗೆ ಎಷ್ಟು number of hours ಕೆಲಸಮಾಡಲು ಶಕ್ತಿಯಿದೆಯೋ ಅಷ್ಟು number of hours ಕೆಲಸ

(ಶ್ರೀ ಜಿ. ಶಿವಪ್ಪ.)

ಮಾಡಿಸಿ ತಯಾರುಮಾಡಬೇಕೆಂದು ಅವರಿಗೆ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಭೀಮಪ್ಪನಾಯಕ್.—ತಾವೇ ಅದನ್ನು ಖುದ್ದಾಗಿ ನೋಡಿದ್ದಿರೋ ಅಥವಾ ಯಾರಾದರೂ ಹೇಳಿದ್ದನ್ನು ಕೇಳಿ ಹಾಗೆ ಹೇಳುತ್ತಿದ್ದೀರೋ ?

Mr. DEPUTY SPEAKER.—The Member may continue his speech tomorrow. The House will now rise for the day and meet tomorrow at Twelve of the Clock.

The House adjourned at Five Minutes past Five of the Clock to meet again on Tuesday, the 4th August 1953 at Twelve of the Clock.